ಸಿಎಸ್‌ಆರ್‌ಟಿಐ–ಮೈಸೂರು

ದಕ್ಷಿಣ ವಲಯ
ಹಿಪ್ಪುನೇರಳೆ ರೇಷ್ಮೆ ಕೃಷಿ

ತಂತ್ರಜ್ಞಾನ ವಿವರಕ



ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ (ಸಿ.ಎಸ್.ಆರ್.ಟಿ.ಐ.)
ಐಎಸ್‌ಓ 9001:2015 ದೃಢೀಕರಣಗೊಂಡಿದೆ
ಕೇಂದ್ರ ರೇಷ್ಮೆ ಮಂಡಳಿ, ಜವಳಿ ಸಚಿವಾಲಯ, ಭಾರತ ಸರ್ಕಾರ
ಮಾನಂದವಾಡಿ ರಸ್ತೆ, ಶ್ರೀರಾಂಪುರ, ಮೈಸೂರು–570008

ಸಿಎಸ್‌ಆರ್‌ಟಿಐ–ಮೈಸೂರು

ದಕ್ಷಿಣ ವಲಯ
ಹಿಪ್ಪುನೇರಳೆ ರೇಷ್ಮೆ ಕೃಷಿ

ತಂತ್ರಜ್ಞಾನ ವಿವರಕ

ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ (ಸಿ.ಎಸ್.ಆರ್.ಟಿ.ಐ.)
ಐ ಎಸ್ ಓ 9001:2015 ದೃಢೀಕರಣಗೊಂಡಿದೆ
ಕೇಂದ್ರ ರೇಷ್ಮೆ ಮಂಡಳಿ (ಸಿ.ಎಸ್.ಬಿ), ಜವಳಿ ಸಚಿವಾಲಯ, ಭಾರತ ಸರ್ಕಾರ
ಮಾನಂದವಾಡಿ ರಸ್ತೆ, ಶ್ರೀರಾಂಪುರ, ಮೈಸೂರು–570008, ಕರ್ನಾಟಕ

ದಕ್ಷಿಣ ವಲಯ ಹಿಪ್ಪುನೇರಳೆ ರೇಷ್ಮೆ ಕೃಷಿ
ತಂತ್ರಜ್ಞಾನ ವಿವರಕ

ಮೊದಲನೆ ಮುದ್ರಣ: ಡಿಸಂಬರ್ 2016
ಎರಡನೆ ಮುದ್ರಣ: ಸಪ್ಟೆಂಬರ್ 2017

ಪ್ರತಿಗಳು: 1000

ಭಾಷೆ: ಕನ್ನಡ

© ಎಲ್ಲಾ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ

ಸಂಯೋಜಕರು
ಬಾಲವೆಂಕಟಸುಬ್ಬಯ್ಯ ಎಮ್
ಮಾಲ್ ರೆಡ್ಡಿ ಎನ್
ಮೊಗಿಲಿ ಟಿ
ಮುನಿರತ್ನಂ ರೆಡ್ಡಿ ಎಮ್
ನರೇಂದ್ರ ಕುಮಾರ್ ಜೆ ಬಿ
ರಾಜಶೇಖರ್ ಕೆ
ಸತೀಶ್ ವರ್ಮ

ಕನ್ನಡ ಅನುವಾದ
ನರೇಂದ್ರ ಕುಮಾರ್ ಜೆ ಬಿ
ರಾಜಶೇಖರ್ ಕೆ

ವಿನ್ಯಾಸ
ಜಸ್ಟಿನ್ ಕುಮಾರ್ ಜೆ

ಸಂಪಾದಕರು
ಡಾ. ವಿ. ಶಿವಪ್ರಸಾದ್
ನಿರ್ದೇಶಕರು
ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ (ಸಿ.ಎಸ್.ಆರ್.ಟಿ.ಐ.)
ಕೇಂದ್ರ ರೇಷ್ಮೆ ಮಂಡಳಿ, ಜವಳಿ ಸಚಿವಾಲಯ, ಭಾರತ ಸರ್ಕಾರ
ಮಾನಂದವಾಡಿ ರಸ್ತೆ, ಶ್ರೀರಾಂಪುರ, ಮೈಸೂರು–570008, ಕರ್ನಾಟಕ

ಮುನ್ನುಡಿ

ಹಿಪ್ಪುನೇರಳೆ ರೇಷ್ಮೆ ಕೃಷಿಯಲ್ಲಿ ಯಶಸ್ವಿಯಾಗಿ ಅಳವಡಿಸಿಕೊಂಡಿರುವ ತಾಂತ್ರಿಕತೆಗಳು ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯಲ್ಲಿ ಆವಿಷ್ಕಾರಗೊಂಡು ಶಿಫಾರಸ್ಸು ಮಾಡಲ್ಪಟ್ಟಿರುತ್ತವೆ. ಸಂಸ್ಥೆಯು ದಕ್ಷಿಣದ ರಾಜ್ಯಗಳಲ್ಲಿನ ರೇಷ್ಮೆ ಕೃಷಿಯ ಪ್ರಗತಿಗೆ ಅಗತ್ಯವಿರುವ ಪ್ರೇರಣೆಯನ್ನು ನೀಡುವುದಲ್ಲದೆ ದೇಶದಲ್ಲಿನ ಅಗಾಧ ರೇಷ್ಮೆ ಉತ್ಪಾದನೆಗೆ ಹಲವಾರು ಕೊಡುಗೆಗಳನ್ನೂ ಸಹ ನೀಡಿದೆ. ತಂತ್ರಜ್ಞಾನ ಪರಿಷ್ಕರಣೆ, ಸಮಯೋಚಿತ ಮಧ್ಯವರ್ತಿ ಹಾಗೂ ಅಭಿವೃದ್ಧಿಯ ಮೂಲಕ ಉತ್ಪಾದಕತೆಯಲ್ಲಿ ಉತ್ತಮ ಏಳಿಗೆ ಸಾಧಿಸಲು ಸಾಧ್ಯವಾಗಿದೆ. ರೇಷ್ಮೆ ಕೃಷಿಕರು ರೇಷ್ಮೆ ಹುಳುವಿನ ಹೊಸ ತಳಿಗಳು, ಹಿಪ್ಪುನೇರಳೆ ತಳಿಗಳು, ಯಂತ್ರಗಳು ಮತ್ತು ಉತ್ಪನ್ನಗಳು, ಬೆಳೆ ಉತ್ಪಾದನಾ ಮತ್ತು ಸಂರಕ್ಷಣಾ ತಾಂತ್ರಿಕತೆಗಳು ಇತ್ಯಾದಿಗಳನ್ನು ಅಳವಡಿಸಿಕೊಂಡು ಉತ್ತಮ ಲಾಭವನ್ನು ಪಡೆದುಕೊಳ್ಳುತ್ತಿದ್ದಾರೆ. ರೇಷ್ಮೆ ಕೃಷಿಯಲ್ಲಿ ಶಿಫಾರಸ್ಸು ಮಾಡಲಾಗಿರುವ ಸುಧಾರಿತ ಬೇಸಾಯ ಪದ್ಧತಿಗಳಿಂದ ಹೆಚ್ಚಿನ ಉತ್ಪಾದಕತೆ ಮತ್ತು ಸ್ಥಿರತೆಯನ್ನು ಪಡೆದುಕೊಂಡಿರುವ ಮೂಲಕ ಹೊಸದಾಗಿ ಅಭಿವೃದ್ಧಿಪಡಿಸಿದ ಹಿಪ್ಪುನೇರಳೆ ತಳಿಗಳ ಮತ್ತು ಹೈಬ್ರಿಡ್ ರೇಷ್ಮೆ ತಳಿಗಳ ಸಾಮರ್ಥ್ಯವನ್ನು ಕ್ಷೇತ್ರಮಟ್ಟದಲ್ಲಿ ಸಾದರಪಡಿಸಲು ಸಾಧ್ಯವಾಗಿದೆ.

ಸಿಎಸ್‌ಆರ್‌ಟಿಐ ಒಂದು ಪ್ರಧಾನ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯಾಗಿದ್ದು, ದಕ್ಷಿಣ ಭಾರತದ ರಾಜ್ಯಗಳಲ್ಲಿ ಹಾಗೂ ಇಡೀ ದೇಶದಲ್ಲಿನ ರೇಷ್ಮೆ ಕೃಷಿಯಲ್ಲಿ ಹೆಚ್ಚಳಗೊಂಡ ಉತ್ಪಾದಕತೆ ಬಗ್ಗೆ ಹೆಮ್ಮೆ ಪಡುತ್ತದೆ. "ದಕ್ಷಿಣ ವಲಯ ಹಿಪ್ಪುನೇರಳೆ ರೇಷ್ಮೆ ಕೃಷಿ ತಂತ್ರಜ್ಞಾನ ವಿವರಕ" ಎಂಬ ಈ ಪುಸ್ತಕವು ದಕ್ಷಿಣದ ರಾಜ್ಯಗಳಲ್ಲಿನ ರೇಷ್ಮೆ ಕೃಷಿಕರು ವ್ಯಾಪಕವಾಗಿ ಅಂಗೀಕರಿಸಿದ ತಂತ್ರಜ್ಞಾನಗಳ ಅಂಶಗಳನ್ನು ತಿಳಿಸಿಕೊಡುತ್ತದೆ. ಈ ನಿಟ್ಟಿನಲ್ಲಿ ಸಿಎಸ್‌ಆರ್‌ಟಿಐ, ಮೈಸೂರಿನ ವಿಜ್ಞಾನಿಗಳು ಮತ್ತು ತಾಂತ್ರಿಕ ಸಿಬ್ಬಂದಿ ವರ್ಗದವರ ಕೊಡುಗೆಗಳ ಬಗ್ಗೆ ಅಪಾರ ಮೆಚ್ಚುಗೆ ವ್ಯಕ್ತಪಡಿಸುತ್ತೇನೆ. ಸುಸಂಗತವಾದ ರೀತಿಯಲ್ಲಿ ಬೆಂಬಲ ನೀಡಿ ಈ ಪ್ರಕಟಣೆಯನ್ನು ಹೊರತರಲು ಸಹಕರಿಸಿದ ಶ್ರೀ. ಹನುಮಂತರಾಯಪ್ಪ, ಅಧ್ಯಕ್ಷರು, ಕೇಂದ್ರ ರೇಷ್ಮೆ ಮಂಡಳಿ ಮತ್ತು ಡಾ. ಎಚ್. ನಾಗೇಶ್ ಪ್ರಭು, ಐ.ಎಫ್.ಎಸ್., ಸದಸ್ಯ ಕಾರ್ಯದರ್ಶಿ, ಕೇಂದ್ರ ರೇಷ್ಮೆ ಮಂಡಳಿ ಇವರನ್ನು ಅಭಿನಂದಿಸುತ್ತೇನೆ. ಈ ಪುಸ್ತಕವು ರೇಷ್ಮೆ ಕೃಷಿಕರಿಗೆ, ಸಿಬ್ಬಂದಿ ಮತ್ತು ಇತರೆ ಭಾಗೀದಾರರಿಗೆ ಅಪಾರವಾದ ಸಹಾಯವನ್ನು ನೀಡಲಿದೆ ಎಂದು ನಂಬಿರುತ್ತೇನೆ.

ವಿ. ಶಿವಪ್ರಸಾದ್
ನಿರ್ದೇಶಕರು
ಸಿ.ಎಸ್.ಆರ್.ಟಿ.ಐ., ಮೈಸೂರು

ಪರಿವಿಡಿ

ಹಿಪ್ಪುನೇರಳೆ ತಳಿಗಳು 01-12

ಹಿಪ್ಪುನೇರಳೆ: ಉತ್ಪಾದನೆ ಮತ್ತು ಸಂರಕ್ಷಣೆ 13-33

ಸಂಕರಣ ರೇಷ್ಮೆ ತಳಿಗಳು 34-43

ರೇಷ್ಮೆಹುಳು ಸಾಕಾಣಿಕೆ: ಉತ್ಪಾದನೆ & ಸಂರಕ್ಷಣೆ 44-69

ಯಾಂತ್ರೀಕರಣ 70-83

ಹಿಪ್ಪುನೇರಳೆ ತಳಿಗಳು

ವಿ1

- ಶಿಫಾರಸ್ಸು ಮಾಡಿದ ವರ್ಷ: 1997
- ಪಿತೃತ್ವ: ಎಸ್ 30 × ಸಿ776

ಪ್ರಮುಖ ಅಂಶಗಳು

- ಕಟಾವಿನ ಅಥವಾ ಎಲೆ ಬಿಡಿಸಿದ ನಂತರ ತ್ವರಿತ ಚಿಗುರುವಿಕೆ
- ಹೆಚ್ಚು ಬೇರೂರುವ ಕ್ಷಮತೆ (94%)
- ಎಲೆಯ ಲಕ್ಷಣಗಳು: ದೊಡ್ಡದಾದ, ಪೂರ್ತಿಯಾದ, ಅಂಡಾಕಾರದ, ನುಣುಪಾದ, ಹೊಳಪು ಮತ್ತು ದಟ್ಟ ಹಸಿರು ಬಣ್ಣದಿಂದ ಕೂಡಿದೆ.
- ಗಿಣ್ಣುಗಳ ನಡುವಿನ ಅಂತರ: 5.2 ಸೆಂ.ಮೀ.
- ತಡೆದುಕೊಳ್ಳುವ ಶಕ್ತಿ –
  - ಚುಕ್ಕೆ ರೋಗ
  - ಬೂದಿ ರೋಗ
  - ತುಕ್ಕು ರೋಗ
- ಬೆಂಕಿ ರೋಗಕ್ಕೆ ಸಾಧಾರಣ ಸಹಿಷ್ಣುತೆ
- ವಾರ್ಷಿಕ ಇಳುವರಿ ಸಾಮರ್ಥ್ಯ: 50–60 ಮೆ.ಟನ್/ಹೆಕ್ಟೇರ್



ಶಿಫಾರಸ್ಸು ಮಾಡಲಾಗಿರುವ ಪ್ರದೇಶ

ಎಲ್ಲಾ ದಕ್ಷಿಣದ ರಾಜ್ಯಗಳ ನೀರಾವರಿ ಪ್ರದೇಶಗಳು

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ಸುಧಾರಿತ ಬೇಸಾಯ ಪದ್ಧತಿ ಅಳವಡಿಸಿಕೊಳ್ಳಿ

- ಶಿಫಾರಸ್ಸು ಮಾಡಿದ ವರ್ಷ: 2003
- ಪಿತೃತ್ವ: ಮೋರಸ್ ಮಲ್ಟಿಕಾಲಿಸ್ × ಎಸ್ 13

ಪ್ರಮುಖ ಅಂಶಗಳು

- ಕಟಾವಿನ ಅಥವಾ ಎಲೆ ಬಿಡಿಸಿದ ನಂತರ ತ್ವರಿತ ಚಿಗುರುವಿಕೆ
- ಹೆಚ್ಚು ಬೇರೂರುವ ಕ್ಷಮತೆ (92%)
- ಎಲೆಯ ಗುಣಲಕ್ಷಣಗಳು: ದೊಡ್ಡದಾದ, ಪೂರ್ಣವಾದ, ಹೃದಯಾಕಾರವನ್ನು ಹೊಂದಿದ್ದು, ನಯವಾದ ಹೊಳಪು, ಅಲೆಯಂತಹ ಮೇಲ್ಮೈ ಮತ್ತು ದಟ್ಟ ಹಸಿರು ಬಣ್ಣದಿಂದ ಕೂಡಿದೆ
- ಗಿಣ್ಣುಗಳ ನಡುವಿನ ಅಂತರ: 3.9 ಸೆಂ.ಮೀ.
- ತಡೆದುಕೊಳ್ಳುವ ಶಕ್ತಿ –
  - ಚುಕ್ಕೆ ರೋಗ
- ತುಕ್ಕು ರೋಗಕ್ಕೆ ಸಹಿಷ್ಣುತೆ
- ವಾರ್ಷಿಕ ಇಳುವರಿ ಸಾಮರ್ಥ್ಯ: 65 ಮೆ.ಟನ್/ಹೆಕ್ಟೇರ್



ಶಿಫಾರಸ್ಸು ಮಾಡಲಾಗಿರುವ ಪ್ರದೇಶ

ದಕ್ಷಿಣದ ರಾಜ್ಯಗಳ ನೀರಾವರಿ ಪ್ರದೇಶಗಳು

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ಸುಧಾರಿತ ಬೇಸಾಯ ಪದ್ಧತಿ ಅಳವಡಿಸಿಕೊಳ್ಳಿ

ಎಸ್13

- ಶಿಫಾರಸ್ಸು ಮಾಡಿದ ವರ್ಷ: 1990
- ಪಿತೃತ್ವ: ಕಣ್ವ 2 ರ ಮುಕ್ತ ಪರಾಗಸ್ಪರ್ಷ

ಪ್ರಮುಖ ಅಂಶಗಳು

- ಕಟಾವಿನ ಅಥವಾ ಎಲೆ ಬಿಡಿಸಿದ ನಂತರ ತ್ವರಿತ ಚಿಗುರುವಿಕೆ
- ಹೆಚ್ಚು ಬೇರೂರುವ ಕ್ಷಮತೆ (80%)
- ಎಲೆ: ಅಂಡಾಕಾರದ, ಸಣ್ಣ, ಪೂರ್ತಿಯಾದ ಎಲೆಗಳು
- ಗಿಣ್ಣುಗಳ ನಡುವಿನ ಅಂತರ : 3.2 ಸೆಂ.ಮೀ.
- ತಡೆದುಕೊಳ್ಳುವ ಶಕ್ತಿ –
  - ಚುಕ್ಕೆ ರೋಗ
  - ಬೂದಿ ರೋಗ
  - ತುಕ್ಕು ರೋಗ
- ತುಕ್ರಾ ಬೂಸ್ಟು ತಿಗಣೆಗೆ ಸಾಧಾರಣ ಸಹಿಷ್ಣುತೆ
- ವಾರ್ಷಿಕ ಇಳುವರಿ ಸಾಮರ್ಥ್ಯ: 13–16 ಮೆ.ಟನ್/ಹೆಕ್ಟೇರ್



ಶಿಫಾರಸ್ಸು ಮಾಡಲಾಗಿರುವ ಪ್ರದೇಶ

ದಕ್ಷಿಣದ ರಾಜ್ಯಗಳ ಕೆಂಪು ಮಣ್ಣುಳ್ಳ ಅರೆ ಶುಷ್ಕ ಪ್ರದೇಶಗಳು

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ಸುಧಾರಿತ ಬೇಸಾಯ ಪದ್ಧತಿ ಅಳವಡಿಸಿಕೊಳ್ಳಿ

ಎಸ್ 34

- ಶಿಫಾರಸ್ಸು ಮಾಡಿದ ವರ್ಷ: 1990
- ಪಿತೃತ್ವ: ಎಸ್ 30 × ಸಿ776

ಪ್ರಮುಖ ಅಂಶಗಳು

- ಕಟಾವಿನ ಅಥವಾ ಎಲೆ ಬಿಡಿಸಿದ ನಂತರ ತ್ವರಿತ ಚಿಗುರುವಿಕೆ
- ಹೆಚ್ಚು ಬೇರೂರುವ ಕ್ಷಮತೆ (75%)
- ಎಲೆಯ ಆಕಾರ: ಹೃದಯಾಕಾರದ, ಸಣ್ಣ ಮತ್ತು ಪೂರ್ತಿಯಾದ ಎಲೆಗಳು
- ಗಿಣ್ಣುಗಳ ನಡುವಿನ ಅಂತರ : 3.4 ಸೆಂ.ಮೀ.
- ತಡೆದುಕೊಳ್ಳುವ ಶಕ್ತಿ –
  - ಚುಕ್ಕೆ ರೋಗ
  - ಬೂದಿ ರೋಗ
  - ತುಕ್ಕು ರೋಗ
- ವಾರ್ಷಿಕ ಇಳುವರಿ ಸಾಮರ್ಥ್ಯ: 13–16 ಮೆ.ಟನ್/ಹೆಕ್ಟೇರ್



ಶಿಫಾರಸ್ಸು ಮಾಡಲಾಗಿರುವ ಪ್ರದೇಶ

ದಕ್ಷಿಣದ ರಾಜ್ಯಗಳ ಕಪ್ಪು ಮಣ್ಣುಳ್ಳ ಅರೆ ಶುಷ್ಕ ಪ್ರದೇಶಗಳು

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ಸುಧಾರಿತ ಬೇಸಾಯ ಪದ್ಧತಿ ಅಳವಡಿಸಿಕೊಳ್ಳಿ



ಎಮ್ ಎಸ್ ಜಿ 2

- ಶಿಫಾರಸ್ಸು ಮಾಡಿದ ವರ್ಷ: 2015
- ಪಿತೃತ್ವ: ಬಿಆರ್4 × ಎಸ್13

ಪ್ರಮುಖ ಅಂಶಗಳು

- ಕಟಾವಿನ ಅಥವಾ ಎಲೆ ಬಿಡಿಸಿದ ನಂತರ ತ್ವರಿತ ಚಿಗುರುವಿಕೆ
- ಹೆಚ್ಚು ಬೇರೂರುವ ಕ್ಷಮತೆ (89%)
- ಎಲೆಯ ಗುಣಲಕ್ಷಣಗಳು: ದೊಡ್ಡದಾದ, ಪೂರ್ತಿಯಾದ, ಹೃದಯಾಕಾರವನ್ನು ಹೊಂದಿದ್ದು, ನಯವಾದ, ದಟ್ಟ ಹಸಿರು ಬಣ್ಣದಿಂದ ಕೂಡಿದೆ
- ಗಿಣ್ಣುಗಳ ನಡುವಿನ ಅಂತರ: 4.5 ಸೆಂ.ಮೀ.
- ಮಧ್ಯಮ ತಡೆದುಕೊಳ್ಳುವ ಶಕ್ತಿ –
  - ಚುಕ್ಕೆ ರೋಗ
  - ಬೂದಿ ರೋಗಗಳನ್ನು
- ವಾರ್ಷಿಕ ಇಳುವರಿ ಸಾಮರ್ಥ್ಯ: 22–23 ಮೆ.ಟನ್/ಹೆಕ್ಟೇರ್



ಶಿಫಾರಸ್ಸು ಮಾಡಲಾಗಿರುವ ಪ್ರದೇಶ

ದಕ್ಷಿಣದ ರಾಜ್ಯಗಳ ಅರೆ ಶುಷ್ಕ ಪ್ರದೇಶಗಳಿಗೆ

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ರಕ್ಷಣಾತ್ಮಕ ನೀರಾವರಿಯಲ್ಲಿ ಸಣ್ಣ ಮರಗಳಾಗಿ ಬೆಳೆಸಲು ಈ ತಳಿ ಸೂಕ್ತ



ಎಸ್ 36

- ಶಿಫಾರಸ್ಸು ಮಾಡಿದ ವರ್ಷ: 1986
- ಪಿತೃತ್ವ: ಬೆರ್ಹಾಂಪುರ್ ಲೋಕಲ್‌ನ ಉತ್ಪರಿವರ್ತನೆ (ಮ್ಯೂಟೆಂಟ್)

ಪ್ರಮುಖ ಅಂಶಗಳು

- ಕಟಾವಿನ ಅಥವಾ ಎಲೆ ಬಿಡಿಸಿದ ನಂತರ ತ್ವರಿತ ಚಿಗುರುವಿಕೆ
- ಕಡಿಮೆ ಬೇರೂರುವ ಕ್ಷಮತೆ (48%)
- ಎಲೆಯ ಗುಣಲಕ್ಷಣಗಳು: ದೊಡ್ಡದಾದ, ಪೂರ್ತಿಯಾದ, ಹೃದಯಾಕಾರವನ್ನು ಹೊಂದಿದ್ದು, ನುಣುಪಾದ ಹೊಳಪು ಮತ್ತು ತಿಳಿ ಹಸಿರು ಬಣ್ಣದಿಂದ ಕೂಡಿದೆ
- ಗಿಣ್ಣುಗಳ ನಡುವಿನ ಅಂತರ ಕಡಿಮೆ : 3.53 ಸೆಂ.ಮೀ.
- ತಡೆದುಕೊಳ್ಳುವ ಶಕ್ತಿ –
  - ಜಿಕ್ಕೆ ರೋಗ
  - ಬೂದಿ ರೋಗ
  - ತುಕ್ಕು ರೋಗ
- ಬೆಂಕಿ ರೋಗಕ್ಕೆ ಸಾಧಾರಣ ಸಹಿಷ್ಣುತೆ
- ವಾರ್ಷಿಕ ಇಳುವರಿ ಸಾಮರ್ಥ್ಯ: 28 ಮೆ.ಟನ್/ಹೆಕ್ಟೇರ್



ಶಿಫಾರಸ್ಸು ಮಾಡಲಾಗಿರುವ ಪ್ರದೇಶ

ಕರ್ನಾಟಕ, ತಮಿಳುನಾಡು, ತೆಲಂಗಾಣ ಹಾಗೂ ಆಂಧ್ರ ಪ್ರದೇಶ ರಾಜ್ಯಗಳ ಜಂಬು ಮಣ್ಣುಳ್ಳ ಚಾಕಿ ಹಿಪ್ಪುನೇರಳೆ ತೋಟಗಳು

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ಸುಧಾರಿತ ಬೇಸಾಯ ಪದ್ಧತಿ ಅಳವಡಿಸಿಕೊಳ್ಳಿ

ಜಿ2

- ಶಿಫಾರಸ್ಸು ಮಾಡಿದ ವರ್ಷ: 2004
- ಪಿತೃತ್ವ: ಮೋರಸ್ ಮಲ್ಟಿಕಾಲಿಸ್ × ಎಸ್34

ಪ್ರಮುಖ ಅಂಶಗಳು

- ಕಟಾವಿನ ಅಥವಾ ಎಲೆ ಬಿಡಿಸಿದ ನಂತರ ತ್ವರಿತ ಚಿಗುರುವಿಕೆ
- ಹೆಚ್ಚು ಬೇರೂರುವ ಕ್ಷಮತೆ (94%)
- ಎಲೆಯ ಗುಣಲಕ್ಷಣಗಳು: ದೊಡ್ಡದಾದ, ಪೂರ್ಣವಾದ, ಹೃದಯಾಕಾರವನ್ನು ಹೊಂದಿದ್ದು, ನಯವಾದ ಹೊಳಪು, ಸಾಧಾರಣ ಅಲೆಯಂತಹ ಮೇಲ್ಮೈ ಮತ್ತು ದಟ್ಟ ಹಸಿರು ಬಣ್ಣದಿಂದ ಕೂಡಿದೆ
- ಗಿಣ್ಣುಗಳ ನಡುವಿನ ಅಂತರ: 4.5 ಸೆಂ.ಮೀ.
- ತಡೆದುಕೊಳ್ಳುವ ಶಕ್ತಿ –
  - ಚುಕ್ಕೆ ರೋಗ
  - ಬೂದಿ ರೋಗ
- ವಾರ್ಷಿಕ ಇಳುವರಿ ಸಾಮರ್ಥ್ಯ: 36–38 ಮೆ.ಟನ್/ಹೆಕ್ಟೇರ್ (ಸೊಪ್ಪು ಬಿಡಿಸುವುದು ಮತ್ತು ರೆಂಬೆ ಕತ್ತರಿಸುವುದು ಕ್ರಮವಾಗಿ ಒಂದರ ನಂತರ ಒಂದರಂತೆ ವರ್ಷಕ್ಕೆ ನಿಗದಿತ 8 ಬೆಳೆಗಳು)



ಶಿಫಾರಸ್ಸು ಮಾಡಲಾಗಿರುವ ಪ್ರದೇಶ

ವಿಶೇಷವಾಗಿ ಚಾಕಿ ತೋಟಗಳಿಗೆ, ಅದರಲ್ಲೂ ದಕ್ಷಿಣದ ರಾಜ್ಯಗಳ ಕೆಂಪು ಜಂಬು ಮಣ್ಣುಳ್ಳ ಹಿಪ್ಪುನೇರಳೆ ತೋಟಗಳು

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ಸುಧಾರಿತ ಬೇಸಾಯ ಪದ್ಧತಿ ಅಳವಡಿಸಿಕೊಳ್ಳಿ



ಆರ್‌ಸಿ1

- ಶಿಫಾರಸ್ಸು ಮಾಡಿದ ವರ್ಷ: 2003
- ಪಿತೃತ್ವ: ಪಂಜಾಬ್ ಲೋಕಲ್ × ಕೋಸೆನ್

ಪ್ರಮುಖ ಅಂಶಗಳು

- ಕಟಾವಿನ ಅಥವಾ ಎಲೆ ಬಿಡಿಸಿದ ನಂತರ ತ್ವರಿತ ಚಿಗುರುವಿಕೆ
- ಹೆಚ್ಚು ಬೇರೂರುವ ಸಾಮರ್ಥ್ಯ (85%)
- ಎಲೆಯ ಗುಣಲಕ್ಷಣಗಳು: ದೊಡ್ಡದಾದ, ಪೂರ್ತಿಯಾದ, ಹೃದಯಾಕಾರವನ್ನು ಹೊಂದಿದ್ದು, ನಯವಾದ ಮತ್ತು ದಟ್ಟ ಹಸಿರು ಬಣ್ಣದಿಂದ ಕೂಡಿದೆ
- ಗಿಣ್ಣುಗಳ ನಡುವಿನ ಅಂತರ: 4.3 ಸೆಂ.ಮೀ.
- ತಡೆದುಕೊಳ್ಳುವ ಶಕ್ತಿ –
  - ಚುಕ್ಕೆ ರೋಗ
  - ತುಕ್ಕು ರೋಗಕ್ಕೆ ಸಾಧಾರಣ ಸಹಿಷ್ಣುತೆ
- ವಾರ್ಷಿಕ ಇಳುವರಿ ಸಾಮರ್ಥ್ಯ: 23–25 ಮೆ.ಟನ್/ಹೆಕ್ಟೇರ್



ಶಿಫಾರಸ್ಸು ಮಾಡಲಾಗಿರುವ ಪ್ರದೇಶ

ಸಂಪನ್ಮೂಲ ನಿರ್ಬಂಧ ಪರಿಸ್ಥಿತಿಗಳಿಗೆ (ಶೇ. 50 ರಷ್ಟು ನೀರಾವರಿ ಮತ್ತು ರಸಗೊಬ್ಬರ ಬಳಸಲ್ಪಟ್ಟಾಗ)

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ಸುಧಾರಿತ ಬೇಸಾಯ ಪದ್ಧತಿ ಅಳವಡಿಸಿಕೊಳ್ಳಿ

ಆರ್‌ಸಿ2

- ಶಿಫಾರಸ್ಸು ಮಾಡಿದ ವರ್ಷ: 2004
- ಪಿತೃತ್ವ: ಪಂಜಾಬ್ ಲೋಕಲ್ × ಕೋಸೆನ್

ಪ್ರಮುಖ ಅಂಶಗಳು

- ಕಟಾವಿನ ಅಥವಾ ಎಲೆ ಬಿಡಿಸಿದ ನಂತರ ತ್ವರಿತ ಚಿಗುರುವಿಕೆ
- ಹೆಚ್ಚು ಬೇರೂರುವ ಸಾಮರ್ಥ್ಯ (89%)
- ಎಲೆಯ ಗುಣಲಕ್ಷಣಗಳು: ಮಧ್ಯಮ, ಪೂರ್ತಿಯಾದ, ಹೃದಯಾಕಾರವನ್ನು ಹೊಂದಿದ್ದು, ನಯವಾದ ಮತ್ತು ಹಸಿರು ಬಣ್ಣದಿಂದ ಕೂಡಿದೆ
- ಗಿಣ್ಣುಗಳ ನಡುವಿನ ಅಂತರ : 4.4 ಸೆಂ.ಮೀ.
- ತಡೆದುಕೊಳ್ಳುವ ಶಕ್ತಿ –
  - ಚುಕ್ಕೆ ರೋಗ
  - ತುಕ್ಕು ರೋಗ
    ಸಾಧಾರಣ ಸಹಿಷ್ಣುತೆ
- ವಾರ್ಷಿಕ ಇಳುವರಿ ಸಾಮರ್ಥ್ಯ: 21–23 ಮೆ.ಟನ್/ಹೆಕ್ಟೇರ್



ಶಿಫಾರಸ್ಸು ಮಾಡಲಾಗಿರುವ ಪ್ರದೇಶ

ಸಂಪನ್ಮೂಲ ನಿರ್ಬಂಧ ಪರಿಸ್ಥಿತಿಗಳಿಗೆ (ಶೇ.50 ರಷ್ಟು ನೀರಾವರಿ ಮತ್ತು ರಸಗೊಬ್ಬರ ಬಳಸಲ್ಪಟ್ಟಾಗ)

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ಸುಧಾರಿತ ಬೇಸಾಯ ಪದ್ಧತಿ ಅಳವಡಿಸಿಕೊಳ್ಳಿ

ಎ ಆರ್ 12

- ಶಿಫಾರಸ್ಸು ಮಾಡಿದ ವರ್ಷ: 2004
- ಪಿತೃತ್ವ: ಎಸ್41 (4×) × ಸಿ776 (2×)

ಪ್ರಮುಖ ಅಂಶಗಳು

- ಕಟಾವಿನ ಅಥವಾ ಎಲೆ ಬಿಡಿಸಿದ ನಂತರ ತ್ವರಿತ ಚಿಗುರುವಿಕೆ
- ಹೆಚ್ಚು ಬೇರೂರುವ ಕ್ಷಮತೆ (90%)
- ಎಲೆಯ ಗುಣಲಕ್ಷಣಗಳು: ದೊಡ್ಡದಾದ, ಪೂರ್ತಿಯಾದ, ಹೃದಯಾಕಾರವನ್ನು ಹೊಂದಿದ್ದು, ನಯವಾದ ಮತ್ತು ಹಸಿರು ಬಣ್ಣದಿಂದ ಕೂಡಿದೆ
- ಗಿಣ್ಣುಗಳ ನಡುವಿನ ಅಂತರ: 3.75 ಸೆಂ.ಮೀ.
- ತಡೆದುಕೊಳ್ಳುವ ಶಕ್ತಿ –
  - ಚುಕ್ಕೆ ರೋಗ
  - ತುಕ್ಕು ರೋಗ ಸಹಿಷ್ಣುತೆ



- ವಾರ್ಷಿಕ ಇಳುವರಿ ಸಾಮರ್ಥ್ಯ: ಕ್ಷಾರೀಯ ಮಣ್ಣಿನಲ್ಲಿ 16–17 ಮೆ.ಟನ್/ಹೆಕ್ಟೇರ್ ಸುಧಾರಣೆ ಮಾಡಿದ ಕ್ಷಾರೀಯ ಮಣ್ಣಿನಲ್ಲಿ 22–24 ಮೆ.ಟನ್/ಹೆಕ್ಟೇರ್

ಶಿಫಾರಸ್ಸು ಮಾಡಲಾಗಿರುವ ಪ್ರದೇಶ

ದಕ್ಷಿಣದ ರಾಜ್ಯಗಳ ಸಾಧಾರಣ ಕ್ಷಾರೀಯ ಮಣ್ಣಿನ ಪ್ರದೇಶಗಳು (ರಸಸಾರ 9.5ರ ತನಕ)

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ಸುಧಾರಿತ ಬೇಸಾಯ ಪದ್ಧತಿ ಅಳವಡಿಸಿಕೊಳ್ಳಿ

ಸಹನ

- ಶಿಫಾರಸ್ಸು ಮಾಡಿದ ವರ್ಷ: 2004
- ಪಿತೃತ್ವ: ಕೆ2 × ಕೋಸೆನ್

ಪ್ರಮುಖ ಅಂಶಗಳು

- ಕಟಾವಿನ ಅಥವಾ ಎಲೆ ಬಿಡಿಸಿದ ನಂತರ ತ್ವರಿತ ಚಿಗುರುವಿಕೆ
- ಹೆಚ್ಚು ಬೇರೂರುವ ಕ್ಷಮತೆ (80%)
- ಎಲೆಯ ಗುಣಲಕ್ಷಣಗಳು: ದೊಡ್ಡದಾದ, ಪೂರ್ತಿಯಾದ, ಹೃದಯಾಕಾರವನ್ನು ಹೊಂದಿದ್ದು, ನುಣುಪಾದ ಹೊಳಪು ಮತ್ತು ದಟ್ಟ ಹಸಿರು ಬಣ್ಣದಿಂದ ಕೂಡಿದೆ
- ಗಿಣ್ಣುಗಳ ನಡುವಿನ ಅಂತರ: 4.81 ಸೆಂ.ಮೀ.
- ತಡೆದುಕೊಳ್ಳುವ ಶಕ್ತಿ –
  - ಚುಕ್ಕೆ ರೋಗ
  - ತುಕ್ಕು ರೋಗ
    ಮಧ್ಯಮ ನಿರೋಧಕತೆ
  - ತುಕ್ರಾ ಬೂಸ್ಟು ತಿಗಣೆಗೆ ಸಾಧಾರಣ (ಮಧ್ಯಮ) ಸಹಿಷ್ಣುತೆ
- ವಾರ್ಷಿಕ ಇಳುವರಿ ಸಾಮರ್ಥ್ಯ: ತೆಂಗಿನ ತೋಟದ ನೆರಳಲ್ಲಿ ಅಂತರ ಬೆಳೆಯಾಗಿ 25–30 ಮೆ.ಟನ್/ಹೆಕ್ಟೇರ್



ಶಿಫಾರಸ್ಸು ಮಾಡಲಾಗಿರುವ ಪ್ರದೇಶ

ತೆಂಗಿನ ತೋಟದಲ್ಲಿ ಅಂತರ ಬೆಳೆಯಾಗಿ

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ಸುಧಾರಿತ ಬೇಸಾಯ ಪದ್ಧತಿ ಅಳವಡಿಸಿಕೊಳ್ಳಿ

ಹಿಪ್ಪುನೇರಳೆ:
ಉತ್ಪಾದನೆ ಮತ್ತು ಸಂರಕ್ಷಣೆ

ಹಿಪ್ಪುನೇರಳೆ ಸಸಿ ಮಡಿಗಳು (ನರ್ಸರಿ)

- ಶಿಫಾರಸ್ಸು ಮಾಡಿದ ವರ್ಷ: 1992

ಪ್ರಮುಖ ಅಂಶಗಳು

- ಸಸಿ ಮಡಿ ತಯಾರಿಕೆಗೆ ನೀರು ಸುಲಭವಾಗಿ ಬಸಿದುಹೋಗುವಂತಹ ಮರಳು ಮಿಶ್ರಿತ ಗೋಡು ಮಣ್ಣು ಹೆಚ್ಚು ಸೂಕ್ತ
- ಭೂಮಿಯನ್ನು 30–40 ಸೆಂ.ಮೀ. ಆಳಕ್ಕೆ ಉಳುಮೆ / ಅಗೆತ ಮಾಡಬೇಕು
- 2 ರಿಂದ 3 ವಾರಗಳ ಕಾಲ ಬಿಸಿಲಿಗೆ ಒಡ್ಡಬೇಕು
- 300 ಸೆಂ.ಮೀ.×120 ಸೆಂ.ಮೀ. ಅಳತೆಯ ಮಡಿಗಳನ್ನು ಮಾಡಬೇಕು
- 25–30 ಸೆಂ.ಮೀ. ಅಗಲ ಮತ್ತು 20 ಸೆಂ.ಮೀ. ಆಳದ ನೀರು ಹಾಯಿಸುವ ಕಾಲುವೆಗಳನ್ನು ನಿರ್ಮಿಸಬೇಕು
- ಬಿತ್ತನೆ ಕಡ್ಡಿಗಳನ್ನು 0.2% ಬೆವಿಸ್ಟಿನ್ ದ್ರಾವಣದಲ್ಲಿ 10–15 ನಿಮಿಷಗಳವರೆಗೆ ಅದ್ದಿ ಇಡಬೇಕು
- ಮಡಿಯಲ್ಲಿ ಸಾಲಿನಿಂದ ಸಾಲಿಗೆ 20 ಸೆಂ.ಮೀ. ಮತ್ತು ಕಡ್ಡಿಯಿಂದ ಕಡ್ಡಿಗೆ 8 ಸೆಂ.ಮೀ. ಅಂತರವಿರುವಂತೆ ಕಡ್ಡಿಗಳನ್ನು ನೆಡಬೇಕು
- ಕಡ್ಡಿಗಳನ್ನು ನೆಟ್ಟ ತಕ್ಷಣ ನೀರು ಹಾಯಿಸಿ, ತದನಂತರ 4–5 ದಿನಗಳಿಗೊಮ್ಮೆ ನೀರು ಹಾಯಿಸುತ್ತಿರಬೇಕು
- 55–60 ದಿನಗಳಲ್ಲಿ ರಾಸಾಯನಿಕ ಗೊಬ್ಬರವನ್ನು ಹಾಕಿ ಮಣ್ಣಿನಲ್ಲಿ ಬೆರೆಸಬೇಕು
- 3 ರಿಂದ 4 ತಿಂಗಳು ಬಲಿತ ಸಸಿಗಳನ್ನು ನಾಟಿ ಮಾಡುವುದು ಸೂಕ್ತ

ಸಸಿ ಮಡಿಗಳಲ್ಲಿ ಸಸಿಗಳು ತ್ವರಿತವಾಗಿ ಸ್ಥಾಪನೆಗೊಂಡು ಸತ್ವಯುತವಾಗಿ ಬೆಳೆಯುವುದರಿಂದ ನಾಟಿಮಾಡಿದ ತೋಟಗಳಲ್ಲಿ ಒಂದೇ ಸಮನಾದ ಬೆಳವಣಿಗೆ ಸಾಧ್ಯ

ಇದನ್ನು ಮಾಡಿ

- ಜೇಡಿ ಮಣ್ಣು ಅಥವಾ ಕಪ್ಪು ಮಣ್ಣಿದ್ದಲ್ಲಿ ಪ್ರತಿ ಮಡಿಗೆ ಮರಳನ್ನು ಸೇರಿಸಿ.
- 6–8 ತಿಂಗಳ ಬೆಳವಣಿಗೆಯುಳ್ಳ 10–15 ಮಿ.ಮೀ. ದಪ್ಪನಾದ ಆರೋಗ್ಯಕರ ಬಿತ್ತನೆ ಕಡ್ಡಿಗಳನ್ನು ಆಯ್ಕೆ ಮಾಡಿ

ಇದನ್ನು ಮಾಡಬೇಡಿ

- ಕಾಂಡದ ಕೆಳ ಭಾಗದ ದಪ್ಪನೆಯ ಹಾಗೂ ಕುಡಿ ಭಾಗದ ಎಳೆಯ ಹಸಿರು ಭಾಗಗಳನ್ನು ಬಳಸಬೇಡಿ
- ತುಕ್ರ / ಶಲ್ಕು ಕೀಟ ಬಾಧೆಗೊಳಗಾಗಿರುವ ಕಡ್ಡಿಗಳನ್ನು ಉಪಯೋಗಿಸಬೇಡಿ

ಪ್ರೌಢ ರೇಷ್ಮೆ ಹುಳು ಸಾಕಾಣಿಕೆಗಾಗಿ ಹಿಪ್ಪುನೇರಳೆ ಬೇಸಾಯ ಪದ್ಧತಿ

- ಶಿಫಾರಸ್ಸು ಮಾಡಿದ ವರ್ಷ: 2001

ಪ್ರಮುಖ ಅಂಶಗಳು

- ತೋಟವನ್ನು 90 ಸೆಂ.ಮೀ. × 90 ಸೆಂ.ಮೀ. (3 ಅಡಿ × 3 ಅಡಿ) ಅಥವಾ ಜೋಡಿ ಸಾಲು ಪದ್ಧತಿಯನ್ನು (150+90) × 60 ಸೆಂ.ಮೀ. ಅಥವಾ (5'+3') × 2' ಅನುಸರಿಸಿ ಬೆಳೆಸಿ
- ವರ್ಷಕ್ಕೆ ಒಂದು ಹೆಕ್ಟೇರ್‌ಗೆ 20 ಮೆ.ಟನ್ ಕೊಟ್ಟಿಗೆ ಗೊಬ್ಬರ ಮತ್ತು ಸಾರಜನಕ, ರಂಜಕ ಹಾಗೂ ಪೊಟಾಷ್ 350:140:140 ಕೆ.ಜಿ./ಹೆಕ್ಟೇರ್/ವರ್ಷಕ್ಕೆ ನೇರ ಗೊಬ್ಬರದ ರೂಪದಲ್ಲಿ 5 ಸಮಾನ ಕಂತುಗಳಲ್ಲಿ ನೀಡಿ
- ಪ್ರೌಢ ಹುಳು ಸಾಕಾಣಿಕೆಗೆ ವಿ–1 ಹಾಗೂ ಜಿ–4 ಸೂಕ್ತವಾದ ಹಿಪ್ಪುನೇರಳೆ ತಳಿಗಳು

ಪ್ರೌಢ ಹುಳುಗಳ ಸಾಕಾಣಿಕೆಗೆ ಉತ್ತಮ ಗುಣಮಟ್ಟದ ಸೊಪ್ಪು ಸಿಗುತ್ತದೆ

- ವೆಚ್ಚ : ` 20,000/- ಒಂದು ಎಕರೆಗೆ
- ಖರ್ಚು ಲಾಭದ ಅನುಪಾತ: 1:3

ಇದನ್ನು ಮಾಡಿ

ಉತ್ತಮ ಗುಣಮಟ್ಟದ ಸೊಪ್ಪಿನ ಗರಿಷ್ಟ ಬಳಕೆಗಾಗಿ ನಿಗದಿತ ಕಾಲಕ್ಕೆ ಸರಿಯಾಗಿ ಕೊಯಿಲು ಮಾಡಿ

ಇದನ್ನು ಮಾಡಬೇಡಿ

ಎಲೆಗಳು ಪಕ್ವವಾಗಲು ಬಿಡಬಾರದು

ಹಿಪ್ಪುನೇರಳೆ ಬೇಸಾಯದಲ್ಲಿ ಜೋಡಿ ಸಾಲು ಪದ್ಧತಿ

- ಶಿಫಾರಸ್ಸು ಮಾಡಿದ ವರ್ಷ: 1995

ಪ್ರಮುಖ ಅಂಶಗಳು

- ಅನುಸರಿಸುವ ಅಂತರ (150+90) ×60 ಸೆಂ.ಮೀ. ಅಥವಾ (5'+3') × 2'
- ಒಂದು ಜೋಡಿ ಸಾಲಿನಲ್ಲಿ ಸಾಲುಗಳ ನಡುವಿನ ಅಂತರ 90 ಸೆಂ.ಮೀ. ಅಥವಾ 3 ಅಡಿ ಹಾಗೂ ಎರಡು ಜೋಡಿ ಸಾಲುಗಳ ನಡುವಿನ ಅಂತರ 150 ಸೆಂ.ಮೀ. ಅಥವಾ 5 ಅಡಿ ಮತ್ತು ಸಾಲಿನಲ್ಲಿ ಗಿಡದಿಂದ ಗಿಡಕ್ಕೆ 60 ಸೆ.ಮೀ. ಅಥವಾ 2 ಅಡಿ ಅಂತರ
- ಈ ಕ್ರಮದಲ್ಲಿ ಒಂದು ಹೆಕ್ಟೇರ್ ತೋಟದಲ್ಲಿ ಒಟ್ಟು 13,888 ಸಸಿಗಳನ್ನು ನೆಡಬಹುದಾಗಿದೆ

ಹಿಪ್ಪುನೇರಳೆ ತೋಟದಲ್ಲಿ ಪವರ್ ಟಿಲ್ಲರ್ ಮತ್ತು ಟ್ರಾಕ್ಟರ್ ಚಾಲನೆಗೆ, ಅಂತರ ಬೇಸಾಯ ಹಾಗೂ ಇತರೆ ಕೃಷಿ ಕಾರ್ಯಾಚರಣೆಗಳಿಗೆ ಸುಗಮವಾಗುತ್ತದೆ

- ವೆಚ್ಚ : ` 21,000/- ಒಂದು ಎಕರೆಗೆ
- ಖರ್ಚು ಲಾಭದ ಅನುಪಾತ: 1:2

ಇದನ್ನು ಮಾಡಿ

ಅಧಿಕ ಇಳುವರಿ ನೀಡುವ ಹಿಪ್ಪುನೇರಳೆ ತಳಿಯನ್ನು ಆಯ್ಕೆ ಮಾಡಿ

ಇದನ್ನು ಮಾಡಬೇಡಿ

ಸಸಿಗಳನ್ನು ತುಂಬಾ ಒತ್ತಾಗಿ ನೆಡಬೇಡಿ

ಹಿಪ್ಪುನೇರಳೆಯಲ್ಲಿ ಕಟಾವು ಮಾಡುವಿಕೆ ಮತ್ತು ಬೆಳೆಸುವಿಕೆ

- ಶಿಫಾರಸ್ಸು ಮಾಡಿದ ವರ್ಷ: 1997

ಪ್ರಮುಖ ಅಂಶಗಳು

- ಹಿಪ್ಪುನೇರಳೆಯನ್ನು ಒಂದೇ ಸಮನಾದ ಎತ್ತರಕ್ಕೆ ಕಟಾವು ಮಾಡುವುದರಿಂದ ಸರಿಯಾದ ಕಾಂಡದ ಅಭಿವೃದ್ಧಿ ಮತ್ತು ಆಕಾರ ನಿರ್ವಹಿಸಲು ಸುಗಮವಾಗುತ್ತದೆ
- ಇಡೀ ತೋಟದಲ್ಲಿ ಒಂದೇ ಸಮನಾದ ಬೆಳವಣಿಗೆಯನ್ನು ಸುಗಮಗೊಳಿಸುತ್ತದೆ ಹಾಗೂ ಯಾಂತ್ರೀಕೃತ ಅಂತರ ಬೇಸಾಯ ಚಟುವಟಿಕೆಗಳಿಗೆ ಅನುವು ಮಾಡಿಕೊಡುತ್ತದೆ
- ಒಂದೇ ಸಮನಾದ ಬೆಳವಣಿಗೆಯಿಂದ ರೋಗಗಳ ಹಾವಳಿ ಕಡಿಮೆಯಾಗಿ ಉತ್ಪಾದಕತೆಯಲ್ಲಿ ಅಭಿವೃದ್ಧಿಯಾಗುತ್ತದೆ

ತೋಟದ ಸ್ಥಾಪನೆ ಮತ್ತು ಕಾಂಡದ ಅಭಿವೃದ್ಧಿ

- ಆರೋಗ್ಯಕರ ಸಸಿಗಳನ್ನು ನೆಟ್ಟು ನೆಲದಿಂದ 15 ಸೆಂ.ಮೀ. ಎತ್ತರಕ್ಕೆ ಕತ್ತರಿಸಿ
- ಸೊಪ್ಪಿನ ಕೊಯ್ಲು ಮಾಡದೆ ಸಸಿಗಳನ್ನು 6 ತಿಂಗಳು ಬೆಳೆಯಲು ಬಿಟ್ಟು ಆಮೇಲೆ ಸೊಪ್ಪು ಕೀಳುವ ಮೂಲಕ ಮೊದಲನೇ ಹುಳು ಸಾಕಾಣಿಕೆಯನ್ನು ಆರಂಭಿಸಿ
- ಆನಂತರ ಪ್ರತೀ ಗಿಡದಲ್ಲಿ 3 ಬಲಿಷ್ಟ ಮತ್ತು ಆರೋಗ್ಯಕರ ರೆಂಬೆಗಳನ್ನು ಆಯ್ಕೆ ಮಾಡಿ ನೆಲದಿಂದ 25 ಸೆಂ.ಮೀ. ಎತ್ತರಕ್ಕೆ ಕತ್ತರಿಸಿ
- ಪ್ರತೀ ಸಾಕಾಣಿಕೆಯ ನಂತರ ಎಲ್ಲಾ ರೆಂಬೆಗಳನ್ನೂ ನೆಲದಿಂದ 30 ಸೆಂ.ಮೀ. ಎತ್ತರಕ್ಕೆ ಕತ್ತರಿಸಿ. ದುರ್ಬಲ ಮತ್ತು ಒಣಗಿದ ರೆಂಬೆಗಳನ್ನು ತೆಗೆದು ಹಾಕಿ
- ಪ್ರತೀ ಗಿಡದಲ್ಲೂ 10–15 ಆರೋಗ್ಯಕರ ರೆಂಬೆಗಳನ್ನು ಬೆಳೆಯಲು ಬಿಡಿ

ಉದ್ದೇಶ

ಉತ್ತಮವಾಗಿ ಅಭಿವೃದ್ಧಿಯಾಗಿರುವ ಕಾಂಡಗಳಿರುವ ಹಿಪ್ಪುನೇರಳೆ ತೋಟವು ಆರೋಗ್ಯಕರ ಬೆಳವಣಿಗೆ ಮತ್ತು ಗುಣಮಟ್ಟದ ಸೊಪ್ಪಿನ ಉತ್ಪಾದನೆಗೆ ಅನುವು ಮಾಡಿಕೊಡುತ್ತದೆ

ಇದನ್ನು ಮಾಡಿ

- ಪ್ರತೀ ಗಿಡದಲ್ಲಿ ದುರ್ಬಲ ರೆಂಬೆಗಳನ್ನು ತೆಗೆದು ಹಾಕಿ 10–15 ಆರೋಗ್ಯಕರ ರೆಂಬೆಗಳಿರುವಂತೆ ನೋಡಿಕೊಳ್ಳಿ
- ರೆಂಬೆಗಳನ್ನು ಕತ್ತರಿಸಲು ಹರಿತವಾದ ಸಿಕೇಚರ್‌ಗಳನ್ನು ಉಪಯೋಗಿಸಿ
- ಕಟಾವು ಮಾಡಿದ 30–40 ದಿನಗಳ ನಡುವೆ ಎಲ್ಲಾ ದುರ್ಬಲ ರೆಂಬೆಗಳನ್ನು ತೆಗೆದುಬಿಡಿ
- ಕಾಂಡದ ಅಭಿವೃದ್ಧಿಯಿಂದ ಯಾಂತ್ರೀಕೃತ ಕಟಾವು ಮಾಡುವುದು ಸುಲಭ

ಇದನ್ನು ಮಾಡಬೇಡಿ

- ಯಂತ್ರಗಳಿಂದ ಕಟಾವು ಮಾಡುವಾಗ ಗಿಡಗಳನ್ನು ನೆಲಮಟ್ಟಕ್ಕೆ ಕತ್ತರಿಸಬಾರದು
- ಗಿಡವೊಂದಕ್ಕೆ 15 ಕ್ಕಿಂತ ಹೆಚ್ಚು ರೆಂಬೆಗಳನ್ನು ಬೆಳೆಯಲು ಬಿಡಬಾರದು

ಮಣ್ಣು ಪರೀಕ್ಷೆ ಆಧಾರದ ಮೇಲೆ ರಸಗೊಬ್ಬರ ಹಾಕುವುದು

- ಶಿಫಾರಸ್ಸು ಮಾಡಿದ ವರ್ಷ: 2004

ಪ್ರಮುಖ ಅಂಶಗಳು

- ಹಿಪ್ಪುನೇರಳೆ ಬೆಳವಣಿಗೆಯು ಮಣ್ಣಿನ ಫಲವತ್ತತೆ ಮೇಲೆ ಅವಲಂಬಿತವಾಗಿದೆ
- ಮಣ್ಣಿನ ಪೌಷ್ಟಿಕ ಸ್ಥಿತಿಯನ್ನು ನಿರ್ಣಯಿಸಲು ನಿಯತಕಾಲಿಕವಾಗಿ ಮಣ್ಣಿನ ಫಲವತ್ತತೆಯನ್ನು ಪರಿಶೀಲಿಸಬೇಕಾಗುತ್ತದೆ
- ರಸಗೊಬ್ಬರಗಳ ವಿವೇಚನಾಯುಕ್ತ ಬಳಕೆಗೆ ಮಣ್ಣಿನ ಫಲವತ್ತತೆ ಆಧರಿಸಿ ಮಾಡಿದ ಶಿಫಾರಸ್ಸುಗಳನ್ನು ಅನುಸರಿಸುವ ಅಗತ್ಯವಿದೆ

ಮಣ್ಣು ಪರೀಕ್ಷೆ ಆಧಾರದ ಮೇಲೆ ಶಿಫಾರಸ್ಸು ಮಾಡಲಾದ ಗೊಬ್ಬರ ಮತ್ತು ರಸಗೊಬ್ಬರ

ಸಾವಯವ ಇಂಗಾಲ (%)	ಕೊಟ್ಟಿಗೆ ಗೊಬ್ಬರ *
< 0.3	15
0.3 - 0.65	12
0.65 - > 1.0	10

ರಸಸಾರ	ಯೂರಿಯ#	ಅಮೋನಿಯಂ ಸಲ್ಫೇಟ್ #
< 6.0	50	
> 6.0		140

ಲಭ್ಯವಿರುವ ರಂಜಕ (ಕಿಜಿ/ಹೆಕ್ಟೇರ್)	ಮ್ಯೂರೇಟ್ ಆಫ್ ಪೊಟಾಷ್ #	ಲಭ್ಯವಿರುವ ಪೊಟ್ಯಾಷಿಯಂ (ಕಿಜಿ/ಹೆಕ್ಟೇರ್)	ಮ್ಯೂರೇಟ್ ಆಫ್ ಪೊಟಾಷ್ #
< 10	80	0 - 45	20
10 - 15	75	46 - 90	18
16 - 25	70	91 -134	16
26 - 40	65	135 - 179	14

* ಮೆ.ಟನ್/ಎಕರೆಗೆ/ವರ್ಷಕ್ಕೆ ;
\# ಕೆ.ಜಿ/ಎಕರೆಗೆ/ವರ್ಷಕ್ಕೆ

ಮಣ್ಣು ಪರೀಕ್ಷಾ ಫಲಿತಾಂಶಗಳನ್ನು ಆಧರಿಸಿ ಶಿಫಾರಸ್ಸು ಮಾಡಲಾದ ನಿಗದಿತ ಪ್ರಮಾಣದ ಗೊಬ್ಬರ ಮತ್ತು ರಸಗೊಬ್ಬರಗಳು ಮಣ್ಣಿನ ಫಲವತ್ತತೆಯ ಪರಿಣಾಮಕಾರಿ ನಿರ್ವಹಣೆಗೆ ಅನುವು ಮಾಡಿಕೊಡುತ್ತದೆ

ಇದನ್ನು ಮಾಡಿ

- ಮಣ್ಣಿನ ಮಾದರಿಗಳನ್ನು ಹಿಪ್ಪುನೇರಳೆ ತೋಟವನ್ನು ಕಟಾವು ಮಾಡಿದ ನಂತರ, ರಸಗೊಬ್ಬರ ಹಾಕುವ ಮುನ್ನ ಸಂಗ್ರಹಿಸಿ
- ರಚನೆ, ಬಣ್ಣ ಹಾಗೂ ಇಳುವರಿ ಮಾದರಿಯಲ್ಲಿ ವ್ಯತ್ಯಾಸವಿರುವ ಮಣ್ಣುಗಳ ಮಾದರಿಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸಿ
- ಸಮಸ್ಯಾತ್ಮಕ ಮಣ್ಣಿಗೆ ಸರಿಯಾದ ಪರಿಹಾರ ಕ್ರಮಗಳನ್ನು ಅಳವಡಿಸಿಕೊಳ್ಳಿ

ಇದನ್ನು ಮಾಡಬೇಡಿ

- ಮಣ್ಣಿನ ಮಾದರಿಗಳನ್ನು ಮಳೆಬಂದ ತಕ್ಷಣ, ನೀರಾವರಿ ನಂತರ, ಬದುಗಳಿಂದ, ಕಾಂಪೋಸ್ಟ್ ಗುಂಡಿಯ ಬಳಿ ಹಾಗೂ ಜೌಗು ಪ್ರದೇಶಗಳಲ್ಲಿ ಸಂಗ್ರಹಿಸಬಾರದು
- ಮಣ್ಣಿನ ಮಾದರಿಗಳನ್ನು ನೇರ ಬಿಸಿಲಿನಲ್ಲಿ ಹೆಚ್ಚಿನ ತಾಪಮಾನದಲ್ಲಿ ಒಣಗಿಸಬಾರದು

ಹಿಪ್ಪುನೇರಳೆ ಬೇಸಾಯದಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ

- ಶಿಫಾರಸ್ಸು ಮಾಡಿದ ವರ್ಷ: 2006

ಪ್ರಮುಖ ಅಂಶಗಳು

- ಸಮಗ್ರ ಪೋಷಕಾಂಶಗಳ ನಿರ್ವಹಣಾ ಕ್ರಮವು ಪರಿಸರ ಸ್ನೇಹಿ ಹಾಗೂ ಪರಿಣಾಮಕಾರಿ ವೆಚ್ಚದಲ್ಲಿ ರಾಸಾಯನಿಕ ಮತ್ತು ಜೈವಿಕ ಸಾಧನಗಳಿಂದ ಮಣ್ಣಿನ ಆರೋಗ್ಯ ನಿರ್ವಹಣೆಯ ಒಂದು ಪದ್ಧತಿಯಾಗಿದೆ

ಸಮಗ್ರ ಪೋಷಕಾಂಶಗಳ ನಿರ್ವಹಣೆಯ ಪದ್ಧತಿ

- ಸಾವಯವ ಗೊಬ್ಬರಗಳು: ಎಕರೆಗೆ 8 ಮೆ.ಟನ್ (ಎರಡು ಕಂತುಗಳಲ್ಲಿ)
- ಹಸಿರೆಲೆ ಗೊಬ್ಬರದ ರೂಪದಲ್ಲಿ ಶೇ.50ರಷ್ಟು ಸಾವಯವ ಗೊಬ್ಬರವನ್ನು ಒದಗಿಸುವುದರಿಂದ, ನಂತರದ ವರ್ಷಗಳಲ್ಲಿ 4 ಮೆ.ಟನ್. ಕೊಟ್ಟಿಗೆ ಗೊಬ್ಬರವನ್ನು ಹಾಕಿದರೆ ಸಾಕು
- ಮುಂಗಾರಿನ ಪ್ರಾರಂಭದಲ್ಲಿ ಹಸಿರೆಲೆ ಗೊಬ್ಬರದ ಬೆಳೆಗಳನ್ನು ಹಿಪ್ಪುನೇರಳೆಯೊಂದಿಗೆ ಅಂತರ ಬೆಳೆಯಾಗಿ ಬೆಳೆದು ಮಣ್ಣಿನಲ್ಲಿ ಮಿಶ್ರಣ ಮಾಡಿ/ ಕಾಂಪೋಸ್ಟ್ ತಯಾರಿಸಿ
- ಮುಂಗಾರಿನ ಸಮಯದಲ್ಲಿ ಎಕರೆಗೆ 200 ಕೆ.ಜಿ.ಯಂತೆ ಬೇವಿನ ಹಿಂಡಿಯನ್ನು ಒಮ್ಮೆಗೇ ಹಾಕಿ ಅಥವಾ 5 ಕಂತುಗಳಲ್ಲಿ ಹಾಕಿ
- **ಜೈವಿಕ ಗೊಬ್ಬರಗಳು:** ಪ್ರತಿವರ್ಷ ಎಕರೆಗೆ 8 ಕೆ.ಜಿ. ಸೆರಿ–ಅಜೋ ಮತ್ತು 2 ಕೆ.ಜಿ. ಸೆರಿ–ಫಾಸ್‌ನ್ನು 5 ಸಮ ಕಂತುಗಳಲ್ಲಿ ಹಾಕಿ
- ಕಟಾವಾದ 25 ದಿನಗಳ ನಂತರ 'ಪೋಷಣ್' ಸಿಂಪಡಿಸಿ
- ರಾಸಾಯನಿಕ ಗೊಬ್ಬರಗಳನ್ನು ಶಿಫಾರಸ್ಸು ಮಾಡಿದ ಪ್ರಮಾಣದಲ್ಲಿ ಹಾಕಿರಿ. ಸಾವಯವ ಪ್ರಮಾಣ ಹೆಚ್ಚಾದ ನಂತರ (>0.65%) ರಸಗೊಬ್ಬರಗಳನ್ನು ಶೇ.50 ರಷ್ಟು ಮೊಟಕುಗೊಳಿಸಿ

ಉಪಯುಕ್ತತೆ

ಸಮಗ್ರ ಪೋಷಕಾಂಶಗಳ ನಿರ್ವಹಣೆಯ ಪದ್ಧತಿಯು ಮಣ್ಣಿನ ಆರೋಗ್ಯ ಮತ್ತು ಉತ್ಪಾದಕತೆಯಲ್ಲಿ ಸುಧಾರಣೆ ಮಾಡುತ್ತದೆ

ಇದನ್ನು ಮಾಡಿ

- ಹಸಿರೆಲೆ ಗೊಬ್ಬರದ ಬೆಳೆಗಳಾದ ಸೆಣಬು ಮತ್ತು ಡಯೆಂಚಗೆ ಆದ್ಯತೆ ನೀಡಿ
- ಜೈವಿಕ ಗೊಬ್ಬರ, ಸೆರಿ–ಅಜೋ & ಸೆರಿ–ಫಾಸ್‌ನ್ನು ಕೊಟ್ಟಿಗೆ ಗೊಬ್ಬರದ ಜೊತೆ ಮಿಶ್ರಣ ಮಾಡಿ ರಾಸಾಯನಿಕ ಗೊಬ್ಬರ ಹಾಕುವ 15 ದಿನಗಳ ಮುನ್ನ / 15 ದಿನಗಳ ನಂತರ ತೋಟಕ್ಕೆ ಹಾಕಿ
- ರೇಷ್ಮೆ ವ್ಯವಸಾಯದ ತ್ಯಾಜ್ಯವನ್ನು ಬಳಸಿಕೊಂಡು ಗೊಬ್ಬರ ತಯಾರಿಸಿ ಉಪಯೋಗಿಸುವುದರಿಂದ ಮಣ್ಣಿನ ಸಾವಯವ ಇಂಗಾಲದಲ್ಲಿ ಸುಧಾರಣೆ ಕಂಡುಕೊಳ್ಳಬಹುದು

ಇದನ್ನು ಮಾಡಬೇಡಿ

- ಮಣ್ಣಿಗೆ ಹಾಕುವಾಗ ಜೈವಿಕ ಮತ್ತು ರಾಸಾಯನಿಕ ಗೊಬ್ಬರಗಳನ್ನು ಮಿಶ್ರಣ ಮಾಡಬೇಡಿ
- ಹಸಿರೆಲೆ ಗೊಬ್ಬರದ ಬೆಳೆಗಳನ್ನು ಹೂ ಬಿಡುವ ಅಥವಾ ಬೀಜವಾಗುವ ತನಕ ಬೆಳೆಸಬಾರದು
- ಹುಳು ಸಾಕಾಣಿಕಾ ಹಾಸಿಗೆಯಿಂದ ತೆಗೆದ ಹಿಪ್ಪುನೇರಳೆ ರೆಂಬೆಗಳನ್ನು ಸುಡಬೇಡಿ, ಬದಲಿಗೆ ಅವುಗಳನ್ನು ಕಾಂಪೋಸ್ಟ್ ತಯಾರಿಕೆಗೆ ಉಪಯೋಗಿಸಿ

ಹಿಪ್ಪುನೇರಳೆ ಬೇಸಾಯದಲ್ಲಿ ಹನಿ ನೀರಾವರಿ

- ಶಿಫಾರಸ್ಸು ಮಾಡಿದ ವರ್ಷ: 1995

ಪ್ರಮುಖ ಅಂಶಗಳು

- ಹನಿ ನೀರಾವರಿ ಹಿಪ್ಪುನೇರಳೆ ಕೃಷಿಯಲ್ಲಿ ಒಂದು ಸಮರ್ಥ ನೀರು ನಿರ್ವಹಣಾ ವ್ಯವಸ್ಥೆಯಾಗಿದೆ
- ಎರಡು ಹಿಪ್ಪುನೇರಳೆ ಸಾಲುಗಳ ನಡುವೆ ಒಂದು ಲ್ಯಾಟರಲ್‌ನ್ನು ಹಾಗೂ ನಾಲ್ಕು ಗಿಡಗಳ ನಡುವೆ ಒಂದು ಮೈಕ್ರೋ ಟ್ಯೂಬ್ ಇಡಲಾಗುತ್ತದೆ
- ಶುಷ್ಕ ಋತುವಿನಲ್ಲಿ ಒಂದು ದಿನಕ್ಕೆ ಸಸ್ಯದ ಗರಿಷ್ಠ ನೀರಿನ ಬೇಡಿಕೆ:
  - 60 ×60 ಸೆಂ.ಮೀ. ಅಂತರದ ತೋಟಕ್ಕೆ 1.2 ಲೀ.
  - 90 ×90 ಸೆಂ.ಮೀ. ಮತ್ತು ಜೋಡಿ ಸಾಲು ಪದ್ಧತಿಯಲ್ಲಿ 2 ಲೀ.
- ಇತರೆ ನೀರಾವರಿ ವ್ಯವಸ್ಥೆಗಳಿಗೆ ಹೋಲಿಸಿದರೆ ಕಡಿಮೆ ನೀರಿನ ಬಳಕೆ
- ಸೊಪ್ಪಿನ ಇಳುವರಿಗೆ ಧಕ್ಕೆಯಾಗದಂತೆ ಶೇ. 40% ರಷ್ಟು ನೀರಿನ ಉಳಿತಾಯ

ಮಳೆ ಆಶ್ರಿತ ಮತ್ತು ಅರೆ ನೀರಾವರಿ ಪರಿಸ್ಥಿತಿಗೆ ಸೂಕ್ತ ತಂತ್ರಜ್ಞಾನ

ವೆಚ್ಚ: ` 45,000/- ಒಂದು ಎಕರೆಗೆ

ಇದನ್ನು ಮಾಡಿ

- ಮೈಕ್ರೋ ಟ್ಯೂಬ್‌ನಲ್ಲಿ ರಂಧ್ರಗಳು ಕಟ್ಟಿಕೊಳ್ಳುವುದನ್ನು ತಪ್ಪಿಸಲು ಫಿಲ್ಟರ್ ಬಳಸಿ
- ಉಳುಮೆ ಮಾಡುವಾಗ ಲ್ಯಾಟರಲ್ ಹಾಗೂ ಮೈಕ್ರೋ ಟ್ಯೂಬ್‌ಗಳನ್ನು ತೆಗೆದಿಡಿ

ಇದನ್ನು ಮಾಡಬೇಡಿ

- ಹನಿ ನೀರಾವರಿಯಲ್ಲಿ ಮೈಕ್ರೋ ಟ್ಯೂಬ್‌ಗಳು ಕಟ್ಟಿಕೊಳ್ಳುವುದರಿಂದ ಉಪ್ಪು ನೀರನ್ನು ಬಳಸಬೇಡಿ
- ಮಣ್ಣಿನಲ್ಲಿ ಬಸಿಯುವಿಕೆ ಸರಿಯಾಗಿಲ್ಲದಿದ್ದಲ್ಲಿ ಹನಿ ನೀರಾವರಿ ಬಳಸಬೇಡಿ

ಚಾಕಿ ಹುಳು ಸಾಕಾಣಿಕೆಗಾಗಿ ಹಿಪ್ಪುನೇರಳೆ ಬೇಸಾಯ ಪದ್ಧತಿ

- ಶಿಫಾರಸ್ಸು ಮಾಡಿದ ವರ್ಷ: 2001

ಪ್ರಮುಖ ಅಂಶಗಳು

- 90 ಸೆಂ.ಮೀ. × 90 ಸೆಂ.ಮೀ. ಅಂತರ ಅಥವಾ ಜೋಡಿ ಸಾಲು ಪದ್ಧತಿಯಂತೆ [(150+90) ×60ಸೆಂ.ಮೀ./ (5'+3') × 2'] ಅಂತರದಲ್ಲಿ ಹಿಪ್ಪುನೇರಳೆ ಕೃಷಿ
- ಕೊಟ್ಟಿಗೆ ಗೊಬ್ಬರ 40 ಮೆ.ಟನ್/ಹೆಕ್ಟೇರ್/ವರ್ಷಕ್ಕೆ ಹಾಗೂ ಸಾರಜನಕ, ರಂಜಕ ಮತ್ತು ಪೊಟ್ಯಾಷ್‌ನ್ನು ನೇರ ಗೊಬ್ಬರದ ರೂಪದಲ್ಲಿ 260:140:140 ಕೆ.ಜಿ/ ಹೆಕ್ಟೇರ್/ವರ್ಷಕ್ಕೆ ಎಂಟು ಕಂತುಗಳಲ್ಲಿ ನೀಡಬೇಕು
- ಕುಡಿ ತೆಗೆಯುವ (ಟಾಪ್ ಕ್ಲಿಪಿಂಗ್) ವಿಧಾನದಿಂದ (ಸೊಪ್ಪು ಬಿಡಿಸುವುದು ಮತ್ತು ರೆಂಬೆ ಕತ್ತರಿಸುವುದು ಕ್ರಮವಾಗಿ ಒಂದರ ನಂತರ ಒಂದರಂತೆ) ವರ್ಷಕ್ಕೆ ಒಂದು ಹೆಕ್ಟೇರ್‌ಗೆ 30 ಮೆ.ಟನ್ ನಷ್ಟು ಚಾಕಿ ಸೊಪ್ಪನ್ನು ಉತ್ಪಾದಿಸಬಹುದಾಗಿದೆ
- ಎಸ್–36, ವಿ–1 ಮತ್ತು ಜಿ–2 ಹಿಪ್ಪುನೇರಳೆ ತಳಿಗಳು ಚಾಕಿ ಹುಳು ಸಾಕಾಣಿಕೆಗೆ ಸೂಕ್ತವಾಗಿವೆ

ಚಾಕಿ ಹುಳು ಸಾಕಾಣಿಕೆಗೆ ಉತ್ತಮ ಗುಣಮಟ್ಟದ ಸೊಪ್ಪಿನ ಪೂರೈಕೆ

- ವೆಚ್ಚ : ` 20,000/- ಒಂದು ಎಕರೆಗೆ
- ಖರ್ಚು ಲಾಭದ ಅನುಪಾತ: 1:3

ಇದನ್ನು ಮಾಡಿ

ಉತ್ತಮ ಗುಣ ಮಟ್ಟದ ಚಾಕಿ ಸೊಪ್ಪಿನ ಗರಿಷ್ಟ ಬಳಕೆಗಾಗಿ ನಿಗದಿತ ಕಾಲಕ್ಕೆ ಸರಿಯಾಗಿ ಕೊಯಿಲು ಮಾಡಿ

ಇದನ್ನು ಮಾಡಬೇಡಿ

ಎಲೆಗಳು ಬಲಿಯಲು (ಪಕ್ವವಾಗಲು) ಬಿಡಬಾರದು

ಹಿಪ್ಪುನೇರಳೆಯನ್ನು ಮರಗಳನ್ನಾಗಿ ಬೆಳೆಸಲು ಬೇಸಾಯ ಪದ್ಧತಿ

- ಶಿಫಾರಸ್ಸು ಮಾಡಿದ ವರ್ಷ: 2000

ಪ್ರಮುಖ ಅಂಶಗಳು

- ಮರಗಳನ್ನು 2.4 ಮೀ. × 2.4 ಮೀ. ಅಂತರ ಕಾಯ್ದುಕೊಂಡು 150–180 ಸೆಂ.ಮೀ. (5–6 ಅಡಿ) ಎತ್ತರಕ್ಕೆ ಬೆಳೆಸಬೇಕು. ರಾಸಾಯನಿಕ ಗೊಬ್ಬರವನ್ನು ಮಳೆ ಆಶ್ರಿತ ಬೇಸಾಯಕ್ಕೆ ಶಿಫಾರಸ್ಸು ಮಾಡಿದಂತೆ (ಸಾರಜನಕ, ರಂಜಕ ಮತ್ತು ಪೊಟಾಷ್‌ನ್ನು 50:25:25 ಕೆ.ಜಿ./ಹೆಕ್ಟೇರ್/ವರ್ಷಕ್ಕೆ) ನೀಡಬೇಕು.
- ಮಳೆಗಾಲದಲ್ಲಿ ಹಸಿರು ಗೊಬ್ಬರ ಹಾಕುವುದರಿಂದ ಮಣ್ಣಿನ ಫಲವತ್ತತೆ ಸುಧಾರಿಸುತ್ತದೆ. ಹಿಪ್ಪುನೇರಳೆ ಮರಗಳ ತೋಟದಿಂದ ಲಭಿಸುವ ಸೊಪ್ಪಿನ ಇಳುವರಿ ವರ್ಷಕ್ಕೆ 6–7 ಮೆ.ಟನ್
- ಸಂಪೂರ್ಣ ಉತ್ಪಾದಕತೆ ಪಡೆಯಲು 3 ವರ್ಷ ಹಿಡಿಯುತ್ತದೆ
- ವರ್ಷಕ್ಕೆ 4 ಬಾರಿ ಕೊಯಿಲು ಮಾಡಬಹುದು
- ಎಸ್ 13 ತಳಿಯು ಮರವಾಗಿ ಬೆಳೆಯಲು ಸೂಕ್ತ

ನೀರಿನ ಕೊರತೆ ಅಥವಾ ಕಡಿಮೆ ತೇವಾಂಶದ ಪರಿಸ್ಥಿತಿಗೆ ಸೂಕ್ತವಾಗಿದೆ

- ವೆಚ್ಚ : ` 20,000/- ಒಂದು ಎಕರೆಗೆ
- ಖರ್ಚು ಲಾಭದ ಅನುಪಾತ 1:1.6

ಇದನ್ನು ಮಾಡಿ

ನೀರನ್ನು ಸಮರ್ಥವಾಗಿ ಬಳಸುವ ಹಿಪ್ಪುನೇರಳೆ ತಳಿಗಳನ್ನು ಆರಿಸಿಕೊಳ್ಳಿ

ಇದನ್ನು ಮಾಡಬೇಡಿ

ಸಸಿಗಳನ್ನು ತುಂಬಾ ಒತ್ತಾಗಿ ನೆಡಬೇಡಿ

ಎ.ಎಮ್.ಐ.ಟಿ (ಅಮಿಟ್) ತಾಂತ್ರಿಕತೆ

- ಶಿಫಾರಸ್ಸು ಮಾಡಿದ ವರ್ಷ: 2013

ಪ್ರಮುಖ ಅಂಶಗಳು

- ಒಂದು ಮೀಟರ್ ಎತ್ತರದಲ್ಲಿ ಸ್ಥಾಪಿಸಿರುವ ನೀರಿನ ಟ್ಯಾಂಕ್‌ಗೆ (1,000 ಲೀ.) ಪ್ಲಾಸ್ಟಿಕ್ ಕೊಳವೆ ಜೋಡಿಸಿ ಇದಕ್ಕೆ ಲ್ಯಾಟರಲ್ ಮತ್ತು ಎಮಿಟರ್‌ಗಳಿಂದ ಸಂಪರ್ಕ ಕಲ್ಪಿಸುವ ಜಾಲಬಂಧ
- ಮಳೆ ಆಶ್ರಿತ ಶುಷ್ಕ ಭೂಮಿಗಳಲ್ಲಿ ರೇಷ್ಮೆ ಕೃಷಿಯನ್ನು ಪುನಶ್ಚೇತನಗೊಳಿಸುವ ಕಡಿಮೆ ವೆಚ್ಚದ ಹಾಗೂ ಪರಿಸರ ಸ್ನೇಹಿ ತಾಂತ್ರಿಕತೆ
- ಅಂತರ್ಜಲ ಮೂಲಗಳು ಕ್ಷೀಣಿಸುತ್ತಿರುವ ಸಂದರ್ಭಗಳಲ್ಲಿ ಅತ್ಯಂತ ಪ್ರಯೋಜನಕಾರಿ
- ಅಸ್ಥಿರ ವಿದ್ಯುತ್ ಪೂರೈಕೆ ಇದ್ದಾಗಲೂ ಲಭ್ಯವಿರುವ ನೀರಿನ ಪರಿಣಾಮಕಾರಿ ಬಳಕೆ
- ಒಂದು ದಿನಕ್ಕೆ 10,00 ಲೀಟರ್ ನೀರಿನ ಲಭ್ಯತೆ ಇರುವ ರೈತರು ಪರ್ಯಾಯ ದಿನಗಳಲ್ಲಿ ಹಿಪ್ಪುನೇರಳೆ ಮರವೊಂದಕ್ಕೆ 2–2.5 ಲೀಟರ್‌ನಂತೆ ಒಟ್ಟು 680 ಮರಗಳನ್ನು ಸುಲಭವಾಗಿ ಬೆಳೆಸಬಹುದು.

ಪ್ರಯೋಜನಗಳು

- ನೀರು, ಶ್ರಮ ಮತ್ತು ವಿದ್ಯುಚ್ಛಕ್ತಿ ಉಳಿಸುತ್ತದೆ
- ಬೇಸಾಯದ ಖರ್ಚಿನಲ್ಲಿ ಕಡಿತ
- ನೀರಿನ ದಕ್ಷತಾ ಪ್ರಮಾಣ ಶೇ. 95 ಕ್ಕಿಂತಲೂ ಹೆಚ್ಚು

ಅನಾನುಕೂಲತೆ

- ಮರಗಳಾಗಿ ಬೆಳೆಸಿದ ಹಿಪ್ಪುನೇರಳೆ ತೋಟಕ್ಕೆ ಹೆಚ್ಚು ಸೂಕ್ತ
- ನೀರಿನ ಕೊರತೆ ಮತ್ತು ಅನಿಯಮಿತ ಮಳೆ ಪ್ರದೇಶದಲ್ಲಿ ಅಳವಡಿಸಬಹುದು
- ನೀರು ಮತ್ತು ವಿದ್ಯುತ್ ಅಭಾವದಿಂದ ಪಾರಾಗಬಹುದು

ಇದನ್ನು ಮಾಡಿ

- ವಿದ್ಯುತ್ ಪೂರೈಕೆ ಸಮಯವನ್ನು ಆಧರಿಸಿ ನೀರನ್ನು ಸಂಗ್ರಹಿಸಿಟ್ಟುಕೊಳ್ಳಿ

ಇದನ್ನು ಮಾಡಬೇಡಿ

- ಕಳಪೆ ಗುಣಮಟ್ಟದ ಕೊಳವೆ ಮತ್ತು ಎಮಿಟರ್‌ಗಳನ್ನು

ಟ್ರೆಂಚಿಂಗ್ ಮತ್ತು ಮಲ್ಚಿಂಗ್

- ಶಿಫಾರಸ್ಸು ಮಾಡಿದ ವರ್ಷ: 2012

ಪ್ರಮುಖ ಅಂಶಗಳು

- ಪರ್ಯಾಯ ಸಾಲುಗಳಲ್ಲಿ 1.5 ಅಡಿ ಅಗಲ & 1 ಅಡಿ ಆಳದ ಕಂದಕಗಳನ್ನು ತೆಗೆಯಿರಿ
- ಕಂದಕಗಳಲ್ಲಿ ಹಿಪ್ಪುನೇರಳೆ ಎಲೆಗಳು, ಕಡ್ಡಿಗಳು/ರೆಂಬೆಗಳು, ರೇಷ್ಮೆ ಹುಳುವಿನ ತ್ಯಾಜ್ಯ ಹಾಗೂ ಲಭ್ಯವಿರುವ ಬೇವು, ಹೊಂಗೆ ಮತ್ತು ಗ್ಲಿರಿಸಿಡಿಯ ಎಲೆಗಳನ್ನು ತುಂಬಿ ಮಣ್ಣಿನಿಂದ ಮುಚ್ಚಿರಿ.
- ಮುಂಗಾರಿನ ಪ್ರಾರಂಭದಲ್ಲಿ, ಅಂದರೆ ಜೂನ್ ಮತ್ತು ಅಕ್ಟೋಬರ್–ನವೆಂಬರ್ ನಲ್ಲಿ ಹಸಿರು ಗೊಬ್ಬರ ಬೆಳೆಯ ಬೀಜವನ್ನು ಬೆತ್ತನೆ ಮಾಡಿ, ಅವು ಹೂ ಬಿಡುವ ಮುನ್ನ ಮಣ್ಣಿಗೆ ಸೇರಿಸಿ.

ಕಂದಕಗಳು ಮಳೆ ನೀರು ಕೊಯಿಲಿನ ಕಾಲುವೆಗಳಾಗಿಯೂ ಕಾರ್ಯ ನಿರ್ವಹಿಸುವುದರಿಂದ ಹಿಪ್ಪುನೇರಳೆ ಕಡ್ಡಿ ಮತ್ತು ರೇಷ್ಮೆ ತ್ಯಾಜ್ಯಗಳ ಕೊಳೆಯುವಿಕೆಯು ತ್ವರಿತವಾಗಿ ನಡೆದು ಪೋಷಕಾಂಶಭರಿತ ಗೊಬ್ಬರ ದೊರೆಯಲು ಅನುವು ಮಾಡಿ ಕೊಡುತ್ತದೆ.

- **ಪರ್ಯಾಯ ತಂತ್ರಜ್ಞಾನದ ಮೇಲಿನ ಅನುಕೂಲಗಳು:** ಮಣ್ಣಿನೊಳಗಿನ ಜೈವಿಕ ಒಗ್ಗೂಡುವಿಕೆಯಿಂದ ಫಲವತ್ತತೆ/ಸಾವಯವ ವಸ್ತು ತುಂಬುವುದರಿಂದ ಗೊಬ್ಬರದ ಲಭ್ಯತೆ ಮತ್ತು ಮಣ್ಣಿನ ತೇವಾಂಶ ಸಂರಕ್ಷಣೆ
- ವೆಚ್ಚ : ` 15,000/- ಒಂದು ಎಕರೆಗೆ
- ಖರ್ಚು ಲಾಭದ ಅನುಪಾತ: 1:1.54

ಇದನ್ನು ಮಾಡಿ

- ಕಂದಕಗಳಲ್ಲಿ ತಾಜಾ ಎಲೆ ಮತ್ತು ರೆಂಬೆ/ಚಿಗುರುಗಳನ್ನು ತುಂಬಿ
- ಕಂದಕಗಳನ್ನು ಅಗೆದು ತೆಗೆದ ಮಣ್ಣಿನಿಂದ ಮುಚ್ಚಿ

ಇದನ್ನು ಮಾಡಬೇಡಿ

- ಕಂದಕಗಳನ್ನು ತೆರೆದು ಇಡಬೇಡಿ

ಹಿಪ್ಪುನೇರಳೆ ಎಲೆಗಳ ಮೇಲೆ "ಪೋಷಣ್" ಸಿಂಪಡಿಸುವಿಕೆ

- ಶಿಫಾರಸ್ಸು ಮಾಡಿದ ವರ್ಷ: 2011

ಪ್ರಮುಖ ಅಂಶಗಳು

- ಪೋಷಣ್ ಒಂದು ಬಹು ಪೌಷ್ಟಿಕ ದ್ರಾವಕ
- ಪೋಷಣ್ ಸಿಂಪಡಣೆಯಿಂದ ಸೊಪ್ಪಿನ ಇಳುವರಿ ಶೇ.20 ರಷ್ಟು ಹೆಚ್ಚಾಗುವುದೇ ಅಲ್ಲದೆ ಎಲೆಗಳ ಗುಣಮಟ್ಟದಲ್ಲಿ ಸುಧಾರಣೆಯಾಗುತ್ತದೆ
- ಪೋಷಣ್ ಸಿಂಪಡಿಸಿದ ಸೊಪ್ಪು ರೇಷ್ಮೆ ಹುಳುಗಳ ಸಮಾನ ಬೆಳವಣಿಗೆ ಹಾಗೂ ಆರೋಗ್ಯಕರ ಅಭಿವೃದ್ಧಿಗೆ ಸಹಕಾರಿ. ಉತ್ತಮ ಕವಚದ ತೂಕ ಹಾಗೂ ಕವಚದ ಅನುಪಾತ ಹೊಂದಿದ ಗುಣಮಟ್ಟದ ಗೂಡುಗಳ ಉತ್ಪಾದನೆ ಆಗುತ್ತದೆ
- ಸಿಂಪಡಿಸಿದ 48 ಗಂಟೆಯ ನಂತರ ಸೊಪ್ಪನ್ನು ರೇಷ್ಮೆ ಹುಳುಗಳಿಗೆ ಕೊಡಬಹುದು

ತಯಾರಿಕೆ ಮತ್ತು ಸಿಂಪಡಣೆ

- ಒಂದು ಲೀಟರ್ ಪೋಷಣ್‌ನ್ನು 140 ಲೀ ನೀರಿನೊಂದಿಗೆ ಬೆರೆಸಿ ಒಂದು ಎಕರೆ ಹಿಪ್ಪುನೇರಳೆ ತೋಟಕ್ಕೆ ಸಿಂಪಡಿಸಬಹುದಾಗಿದೆ (7 ಮಿ.ಲೀ./1 ಲೀ ನೀರಿನಲ್ಲಿ)
- ಪ್ರತೀ ಬೆಳೆಯಲ್ಲಿ ಒಮ್ಮೆ ಕಟಾವಾದ/ಎಲೆ ಬಿಡಿಸಿದ 25–30 ದಿನಗಳ ನಂತರ ಬೆಳಗಿನ ಜಾವ 8–11 ಗಂಟೆಯಲ್ಲಿ ಎಲೆಗಳು ಚೆನ್ನಾಗಿ ಒದ್ದೆಯಾಗುವಂತೆ ಸಿಂಪಡಿಸಿ

ಹಿಪ್ಪುನೇರಳೆ ಎಲೆಗಳ ಪೋಷಕಾಂಶಗಳ ನಿರ್ವಹಣೆ ಮತ್ತು ಹೆಚ್ಚಿನ ಇಳುವರಿ

- ವೆಚ್ಚ: ` 250/- ಒಂದು ಬೆಳೆ/ಎಕರೆ
- ಖರ್ಚು ಲಾಭದ ಅನುಪಾತ 1:7

ಇದನ್ನು ಮಾಡಿ

- ದಿನದ ತಂಪಾದ ಹೊತ್ತಿನಲ್ಲಿ ಸಿಂಪಡಣೆ ಮಾಡಿ
- ಸಿಂಪಡಿಸಿದ 6 ಗಂಟೆಗಳಲ್ಲಿ ಮಳೆ ಬಂದಲ್ಲಿ ಮತ್ತೊಮ್ಮೆ ಸಿಂಪಡಿಸಿ
- ನೀರಾವರಿ ತೋಟಗಳಿಗೆ ಮಾತ್ರ ಶಿಫಾರಸ್ಸು ಮಾಡಲಾಗಿದೆ

ಇದನ್ನು ಮಾಡಬೇಡಿ

- ಗಾಳಿಯ ವಿರುದ್ಧ ದಿಕ್ಕಿನಲ್ಲಿ ಸಿಂಪಡಿಸಬಾರದು

ಗೊಬ್ಬರ ಮತ್ತು ಎರೆ ಗೊಬ್ಬರ ತಯಾರಿಕೆ

- ಶಿಫಾರಸ್ಸು ಮಾಡಿದ ವರ್ಷ: 1995

ಪ್ರಮುಖ ಅಂಶಗಳು

- ಒಂದು ಹೆಕ್ಟೇರ್ ಹಿಪ್ಪುನೇರಳೆ ತೋಟದಿಂದ ಸುಮಾರು 12–15 ಮೆ.ಟನ್ ಸಾವಯವ ಪದಾರ್ಥ ದೊರೆಯಲಿದ್ದು ಅದನ್ನು ಗೊಬ್ಬರವಾಗಿ ಪರಿವರ್ತಿಸಬಹುದು
- ಎತ್ತರದ ಪ್ರದೇಶದಲ್ಲಿ 15 ಅಡಿ ಉದ್ದ x 5 ಅಡಿ ಅಗಲ x 3 ಅಡಿ ಆಳದ ಗುಂಡಿಯನ್ನು ತೆಗೆಯಿರಿ
- ತೋಟದ ತ್ಯಾಜ್ಯವನ್ನು (ಹಿಕ್ಕೆ, ತಿಂದುಳಿದ ಎಲೆ, ಪುಡಿ ಮಾಡಿದ ಕಾಂಡ) ಗುಂಡಿಯೊಳಗೆ ಪದರ ಪದರವಾಗಿ ಹರಡಿ
- ಪ್ರತಿ ಪದರದ ಮೇಲೆ ಸಗಣಿಯ ರಾಡಿ ಅಥವ ಜೈವಿಕ ಅನಿಲದ ಮಡ್ಡಿಯನ್ನು ತೆಳುವಾಗಿ ಹರಡಿ
- ನೆಲಮಟ್ಟದಿಂದ 30–40 ಸೆಂ.ಮೀ. ಎತ್ತರಕ್ಕೆ ತುಂಬಿದ ಮೇಲೆ ಅದನ್ನು ಮಣ್ಣು ಮತ್ತು ಸಗಣಿಯ ಮಡ್ಡಿಯಿಂದ ಲೇಪನ ಮಾಡಿ
- ಇದರೊಂದಿಗೆ ಎರೆಹುಳುಗಳನ್ನು ಬಳಸಿಕೊಂಡು ಸಾವಯವ ತ್ಯಾಜ್ಯವನ್ನು ವೇಗವಾಗಿ ಗೊಬ್ಬರವನ್ನಾಗಿ ಪರಿವರ್ತಿಸಬಹುದು
- ಇದಕ್ಕಾಗಿ ಯೂಡ್ರಿಲಸ್ ಯೂಜಿನೆ, ಈಸೇನಿಯ ಫ್ಹೋಟಿಡೆ ಮತ್ತು ಪೆರಿಯೋನಿಕ್ಸ್ ಎಕ್ಸ್‌ಕಾವೇಟಸ್ ಎಂಬ ಎರೆಹುಳು ತಳಿಗಳನ್ನು ಉಪಯೋಗಿಸಬಹುದು

ಈ ವಿಧಾನದಿಂದ ತ್ಯಾಜ್ಯ ವಸ್ತುಗಳ ಮರುಬಳಕೆಯಾಗಿ ಕಡಿಮೆ ಅವಧಿಯಲ್ಲಿ ಹೆಚ್ಚಿನ ಪೌಷ್ಟಿಕ ಗೊಬ್ಬರ ದೊರಕುತ್ತದೆ

ಪರ್ಯಾಯ ತಂತ್ರಜ್ಞಾನದ ಮೇಲಿನ ಅನುಕೂಲಗಳು: ಸಾಮಾನ್ಯವಾಗಿ ಹಿಪ್ಪುನೇರಳೆ ರೆಂಬೆಗಳು ಕೊಳೆಯಲು 9–12 ತಿಂಗಳು ಹಿಡಿಯುತ್ತದೆ, ಆದರೆ ಈ ವಿಧಾನದಿಂದ ಕೇವಲ 4–5 ತಿಂಗಳಲ್ಲಿ ಉತ್ಕೃಷ್ಟವಾದ ಗೊಬ್ಬರವು ಸಿದ್ಧವಾಗುತ್ತದೆ

ಇದನ್ನು ಮಾಡಿ

- ಕಾಲ ಕಾಲಕ್ಕೆ ನೀರನ್ನು ಚಿಮುಕಿಸುತ್ತಾ ತೇವಾಂಶವನ್ನು ಕಾಪಾಡಿ
- ಹುಲ್ಲಿನ ಮೇಲ್ಹಾವಣಿ ಮಾಡಿ ಗುಂಡಿಯನ್ನು ರಕ್ಷಿಸಿ

ಇದನ್ನು ಮಾಡಬೇಡಿ

- ಎರೆಹುಳುಗಳ ಹಿಕ್ಕೆ ಪತ್ತೆಯಾದ ಕೂಡಲೇ ನೀರುಣಿಸುವುದನ್ನು ನಿಲ್ಲಿಸಿ

ನಾವಿನ್ಯ– ಹಿಪ್ಪುನೇರಳೆ ಬೇರು ಕೊಳೆ ರೋಗ ನಿರ್ವಹಣೆಗಾಗಿ ಸಸ್ಯಾಧಾರಿತ ಉತ್ಪನ್ನ

- ಶಿಫಾರಸ್ಸು ಮಾಡಿದ ವರ್ಷ: 2011

ಪ್ರಮುಖ ಅಂಶಗಳು

- ನಿರ್ದಿಷ್ಟ ಗುರಿ ಹೊಂದಿರುವ ಸಸ್ಯಾಧಾರಿತ ಉತ್ಪನ್ನ
- ಮಣ್ಣಿನಲ್ಲಿರುವ ಪ್ರಯೋಜನಕಾರಿ ಸೂಕ್ಷ್ಮ ಜೀವಿಗಳ ಮೇಲೆ ಯಾವುದೇ ದುಷ್ಪರಿಣಾಮ ಬೀರುವುದಿಲ್ಲ
- ಉಪಯೋಗಿಸುವುದು ಸುಲಭ
- ಶೇಖರಣಾ ಅವಧಿ 2 ವರ್ಷ

ತಯಾರಿಕೆ ಮತ್ತು ಉಪಯೋಗಿಸುವಿಕೆ

- ಬೇರು ಕೊಳೆ ರೋಗ ಲಕ್ಷಣ ತೋರುವ ಒಣಗಿದ ಅಥವಾ ಸೊರಗಿದ ಗಿಡಗಳನ್ನು ಭೂಮಿಯಿಂದ 1 ಅಡಿ ಎತ್ತರಕ್ಕೆ ಕತ್ತರಿಸಿ.
- ಬೇರಿನ ಸುತ್ತ ಮಣ್ಣನ್ನು ತೆಗೆದು ಹಾಕಿ ಹಳ್ಳ ಮಾಡಿ
- 10 ಗ್ರಾಂ ನಾವಿನ್ಯವನ್ನು 1 ಲೀಟರ್ ನೀರಿನೊಂದಿಗೆ ಬೆರೆಸಿ ದ್ರಾವಣವನ್ನು ತಯಾರಿಸಿ (100 ಲೀಟರ್ ನೀರಿಗೆ 1 ಕೆ.ಜಿ. ನಾವಿನ್ಯ ಬೆರೆಸಿ 100 ಗಿಡಗಳಿಗೆ ಉಪಯೋಗಿಸಬಹುದು)
- ಈ ದ್ರಾವಣವನ್ನು ಕಟಾವು ಮಾಡಿದ ಗಿಡಗಳ ಮೇಲೆ ಬುಡದವರೆಗೆ ಪೂರ್ತಿ ನೆನೆಯುವಂತೆ ಸುರಿಯಬೇಕು (ಒಂದು ಗಿಡಕ್ಕೆ ಒಂದು ಲೀಟರ್‌ನಂತೆ)
- ಬುಡದ ಭಾಗವನ್ನು ಅಗೆದ ಮಣ್ಣಿನಿಂದ ಮುಚ್ಚಿರಿ
- ರೋಗ ಹರಡುವುದನ್ನು ತಪ್ಪಿಸಲು ಅಕ್ಕ ಪಕ್ಕದ ಗಿಡಗಳಿಗೂ ನಾವಿನ್ಯ ಬಳಸಿರಿ

ಬೇರು ಕೊಳೆ ರೋಗದ ಪರಿಣಾಮಕಾರಿ ನಿಯಂತ್ರಣ

- ವೆಚ್ಚ:: ` 300/- ಅರ್ಧ ಕೆ.ಜಿ. ಗೆ (50 ಗಿಡಗಳಿಗೆ ಬಳಸಬಹುದು)
- ಖರ್ಚು ಲಾಭದ ಅನುಪಾತ: 1:4.5

ಇದನ್ನು ಮಾಡಿ

- ಸಂಪೂರ್ಣವಾಗಿ ಒಣಗಿದ ಮತ್ತು ಸತ್ತ ಗಿಡಗಳನ್ನು ತೆಗೆದು ಸುಟ್ಟು ನಾಶಗೊಳಿಸಿ
- ಬೇರು ಕೊಳೆ ರೋಗ ಕಾಣಿಸಿಕೊಂಡ ತಕ್ಷಣವೇ ನಾವಿನ್ಯ ಉಪಯೋಗಿಸಿ

ಇದನ್ನು ಮಾಡಬೇಡಿ

- ನಾವಿನ್ಯ ಬಳಸಿದ 3–4 ದಿನಗಳ ತನಕ ನೀರು ಹಾಯಿಸಬೇಡಿ
- ನಾವಿನ್ಯವನ್ನು ತೇವ ಇರುವ ಸ್ಥಳದಲ್ಲಿ ಸಂಗ್ರಹಣೆ ಮಾಡಬೇಡಿ
- ನಾವಿನ್ಯವನ್ನು ಮಕ್ಕಳ ಕೈಗೆಟಕುವ ಸ್ಥಳದಲ್ಲಿ ಇಡಬೇಡಿ

ನಿಮಾಹರಿ–ಹಿಪ್ಪುನೇರಳೆ ಬೇರಿನ ಗಂಟು ರೋಗ ನಿರ್ವಹಣೆಗಾಗಿ ಸಸ್ಯಾಧಾರಿತ ಉತ್ಪನ್ನ

- ಶಿಫಾರಸ್ಸು ಮಾಡಿದ ವರ್ಷ: 2012

ಪ್ರಮುಖ ಅಂಶಗಳು

- ನಿರ್ದಿಷ್ಟ ಗುರಿ ಹೊಂದಿರುವ ಸಸ್ಯಾಧಾರಿತ ಉತ್ಪನ್ನ
- ಮಣ್ಣಿನಲ್ಲಿರುವ ಪ್ರಯೋಜನಕಾರಿ ಸೂಕ್ಷ್ಮ ಜೀವಿಗಳ ಮೇಲೆ ಯಾವುದೇ ದುಷ್ಪರಿಣಾಮ ಬೀರುವುದಿಲ್ಲ
- ಬೇರುಗಳಿಂದ ಸುಲಭವಾಗಿ ಹೀರಿಕೊಳ್ಳಲ್ಪಡುತ್ತದೆ
- ಜಂತು ಹುಳುಗಳನ್ನು ಪ್ರತಿಬಂಧಿಸಿ ಮಣ್ಣಿನಲ್ಲಿ ಅವುಗಳ ಉತ್ಪಾದನೆಯನ್ನು ತಡೆಯುತ್ತದೆ
- ಉಪಯೋಗಿಸುವುದು ಸುಲಭ
- ಶೇಖರಣಾ ಅವಧಿ 2 ವರ್ಷ

ತಯಾರಿಕೆ ಮತ್ತು ಉಪಯೋಗಿಸುವಿಕೆ

- 16 ಕೆ.ಜಿ. ನಿಮಾಹರಿಯನ್ನು 160 ಕೆ.ಜಿ. ಕೊಟ್ಟಿಗೆ ಗೊಬ್ಬರದೊಂದಿಗೆ ಮಿಶ್ರಣ ಮಾಡಿ (1 ಎಕರೆಗೆ)
- ಗಿಡದ ಎರಡೂ ಬದಿಯಲ್ಲಿ 15 ಸೆಂ.ಮೀ. ಆಳದ ಸಣ್ಣ ಹಳ್ಳ ಮಾಡಿ
- ಈ ಹಳ್ಳದಲ್ಲಿ ನಿಮಾಹರಿ ಮಿಶ್ರಣವನ್ನು ಹಾಕಿ ಮಣ್ಣು ಮುಚ್ಚಿ ನೀರು ಹಾಯಿಸಿ
- ಮೊದಲ ಬಾರಿ ನಿಮಾಹರಿ ಬಳಸಿದ 70–80 ದಿನಗಳ ನಂತರ ಎರಡನೇ ಬಾರಿ ಬಳಸಿ
- ಸೋಂಕು ತೀವ್ರವಾಗಿದ್ದಲ್ಲಿ (ಗಿಡವೊಂದಕ್ಕೆ 50ಕ್ಕೂ ಹೆಚ್ಚು ಗಂಟುಗಳಿದ್ದಲ್ಲಿ) ಎರಡನೇ ಬಾರಿ ನಿಮಾಹರಿ ಬಳಸಿದ 140–150 ದಿನಗಳ ನಂತರ ಮೂರನೇ ಬಾರಿ ಬಳಸಿ

ಬೇರು ಗಂಟು ರೋಗದ ಪರಿಣಾಮಕಾರಿ ನಿಯಂತ್ರಣ

- ವೆಚ್ಚ: ` 100/- ಕೆ.ಜಿ.ಗೆ
- ಖರ್ಚು ಲಾಭದ ಅನುಪಾತ 1:2.2

ಇದನ್ನು ಮಾಡಿ

- ಬೇರು ಗಂಟಿನ ಆರಂಭಿಕ ಲಕ್ಷಣ ಕಂಡ ಕೂಡಲೇ ನಿಮಾಹರಿ ಉಪಯೋಗಿಸಿ
- ನಿಮಾಹರಿ ಬಳಕೆಯ ನಂತರ ತಕ್ಷಣವೇ ನೀರು ಹಾಯಿಸಿ
- ಮಣ್ಣಿನ ಸಾವಯವ ಇಂಗಾಲದ ಅಂಶವನ್ನು ಕಾಪಾಡಲು ಕೊಟ್ಟಿಗೆ ಗೊಬ್ಬರವನ್ನು ಬಳಸಿ
- ಸೋಂಕಿತ ತೋಟದಲ್ಲಿ ಬಳಸಲಾಗುತ್ತಿರುವ ಕೃಷಿಉಪಕರಣಗಳನ್ನು ಚೆನ್ನಾಗಿ ತೊಳೆಯಿರಿ

ಇದನ್ನು ಮಾಡಬೇಡಿ

- ನಿಮಾಹರಿಯನ್ನು ತೇವ ಇರುವ ಸ್ಥಳದಲ್ಲಿ ಸಂಗ್ರಹಣೆ ಮಾಡಬೇಡಿ
- ನಿಮಾಹರಿಯನ್ನು ಮಕ್ಕಳ ಕೈಗೆಟಕುವ ಸ್ಥಳದಲ್ಲಿ ಇಡಬೇಡಿ
- ಚಿಕಿತ್ಸೆ ನೀಡಿದ ಹಿಪ್ಪುನೇರಳೆ ತೋಟದಿಂದ ನೀರು ತುಂಬಿ ಹರಿದು ಹೋಗುವುದನ್ನು ತಪ್ಪಿಸಿ

ತುಕ್ಕ ಬೂಸ್ಟು ತಿಗಣೆಯ ಸಮಗ್ರ ನಿಯಂತ್ರಣ

- ಶಿಫಾರಸ್ಸು ಮಾಡಿದ ವರ್ಷ: 1990

ಪ್ರಮುಖ ಅಂಶಗಳು

- ಬೂಸ್ಟು ತಿಗಣೆಯು ಹಿಪ್ಪುನೇರಳೆಯ ಪ್ರಮುಖ ರಸ ಹೀರುವ ಪೀಡೆಯಾಗಿದ್ದು
- 150 ಕ್ಕೂ ಅಧಿಕ ಪರ್ಯಾಯ ಆಸರೆ ಸಸ್ಯಗಳಲ್ಲಿ ಕಂಡುಬರುತ್ತದೆ
- ವರ್ಷವಿಡೀ ಕಾಣಿಸಿಕೊಂಡರೂ ಸಹ, ಬೇಸಿಗೆಯಲ್ಲಿ ಇದರ ಬಾಧೆ ಹೆಚ್ಚಾಗಿರುತ್ತದೆ
- ಸೊಪ್ಪಿನ ಇಳುವರಿಯಲ್ಲಿ ವರ್ಷಕ್ಕೆ ಒಂದು ಎಕರೆಗೆ ಸುಮಾರು 1800 ಕೆ.ಜಿ. ಯಷ್ಟು ನಷ್ಟ ಉಂಟಾಗುತ್ತದೆ
- ಇದು 350–500 ಗುಲಾಬಿ ಬಣ್ಣದ ಮೊಟ್ಟೆಗಳನ್ನಿಡುತ್ತದೆ. 6–9 ದಿನಗಳಲ್ಲಿ ಹೊರಬರುವ ಮರಿಹುಳುಗಳು 23–27 ದಿನಗಳವರೆಗೆ ಸತತವಾಗಿ ರಸ ಹೀರುತ್ತವೆ.

ನಿರ್ವಹಣಾ ಕ್ರಮಗಳು

ಯಾಂತ್ರಿಕ ವಿಧಾನ

- ಬಾಧೆಗೊಳಗಾದ ಭಾಗಗಳನ್ನು ಕತ್ತರಿಸಿ ತೆಗೆದು ಸುಟ್ಟು ನಾಶ ಮಾಡಿ ಅಥವಾ ಶೇ.0.5 ಸೋಪಿನ ದ್ರಾವಣದಲ್ಲಿ ಮುಳುಗಿಸಿ

ರಾಸಾಯನಿಕ ವಿಧಾನ

- ಶೇ. 0.2 ರ ಡಿಡಿವಿಪಿ (76% ಇ.ಸಿ) ದ್ರಾವಣವನ್ನು (1 ಲೀಟರ್ ನೀರಿನಲ್ಲಿ 2.63 ಮಿ.ಲೀ. ಡಿಡಿವಿಪಿ) ಕಟಾವಾದ 15–20 ದಿನಗಳಲ್ಲಿ ಸಿಂಪಡಿಸಿ
- ಡಿಡಿವಿಪಿ ಸಿಂಪಡಿಸಿದ 15–17 ದಿನಗಳ ನಂತರ ಸೊಪ್ಪನ್ನು ರೇಷ್ಮೆಹುಳುಗಳಿಗೆ ನೀಡಬಹುದು

ಜೈವಿಕ ವಿಧಾನ

- ಪರಭಕ್ಷಕ ಗುಲಗಂಜಿ ಕೀಟಗಳಾದ ಸ್ಕಿಮ್ನಸ್ ಕಾಕ್ಸಿವೋರ (ಎಕರೆಗೆ 500 ರಂತೆ) ಅಥವಾ ಕ್ರಿಪ್ಟೋಲಿಮಸ್ ಮಾಂಟ್ರೋಜೈರಿ (ಎಕರೆಗೆ 250 ರಂತೆ) ವರ್ಷಕ್ಕೆ ಎರಡು ಕಂತುಗಳಲ್ಲಿ 6 ತಿಂಗಳಿಗೊಮ್ಮೆ ಬಿಡಬೇಕು

ಉದಾಹರಣೆ

ಹಿಪ್ಪುನೇರಳೆಯಲ್ಲಿ ಬೂಸ್ಟು ತಿಗಣೆಯ ಪರಿಣಾಮಕಾರಿ ನಿಯಂತ್ರಣ

- ವೆಚ್ಚ: ` 800/- ಎಕರೆಗೆ/ವರ್ಷಕ್ಕೆ ▪ ಖರ್ಚು ಲಾಭದ ಅನುಪಾತ 1: 4

ಇದನ್ನು ಮಾಡಿ

- ರೇಷ್ಮೆ ಹುಳುಗಳು 4ನೇ ಜ್ವರಕ್ಕೆ ಕುಳಿತಾಗ ಬೂಸ್ಟು ತಿಗಣೆ ಬಾಧಿತ ಹಿಪ್ಪುನೇರಳೆ ತುದಿಯನ್ನು ಕತ್ತರಿಸಿ ನಾಶ ಮಾಡಿ
- ಕೀಟನಾಶಕಗಳನ್ನು ತಂಪಾದ ಹೊತ್ತಿನಲ್ಲಿ ಸಿಂಪಡಿಸಿ
- ಕೀಟನಾಶಕ ಸಿಂಪಡಣೆಯ 8–10 ದಿನಗಳ ನಂತರ ಗುಲಗಂಜಿ ಕೀಟಗಳನ್ನು ಬಿಡುಗಡೆ ಮಾಡಿ

ಇದನ್ನು ಮಾಡಬೇಡಿ

- ಕೀಟನಾಶಕವನ್ನು ಗಾಳಿಯ ವಿರುದ್ಧ ದಿಕ್ಕಿನಲ್ಲಿ ಸಿಂಪಡಣೆ ಮಾಡಬೇಡಿ
- ಗುಲಗಂಜಿ ಕೀಟವನ್ನು ಬಿಡುಗಡೆಗೊಳಿಸಿದ ನಂತರ ಕೀಟನಾಶಕ ಸಿಂಪಡಣೆ ಮಾಡಬೇಡಿ

ಪಪ್ಪಾಯಿ ಬೂಸ್ಟು ತಿಗಣೆಯ ಜೈವಿಕ ನಿಯಂತ್ರಣ

- ಶಿಫಾರಸ್ಸು ಮಾಡಿದ ವರ್ಷ: 2010

ಪ್ರಮುಖ ಅಂಶಗಳು

- ಇದು ಪರದೇಶದಿಂದ ಬಂದಿರುವ ಕೀಟ ಪೀಡೆಯಾಗಿದ್ದು ಮೆಕ್ಸಿಕೊ ಇದರ ತಾಯ್ನಾಡು
- ಇದು ಪ್ರಥಮ ಬಾರಿಗೆ 2009 ರಲ್ಲಿ ತಮಿಳುನಾಡಿನಲ್ಲಿ ವರದಿಯಾಗಿದ್ದು ತದನಂತರ ಅಕ್ಕಪಕ್ಕದ ರಾಜ್ಯಗಳಿಗೂ ಹರಡಿ ರೇಷ್ಮೆ ಉದ್ಯಮಕ್ಕೆ ಭಾರೀ ನಷ್ಟ ಉಂಟುಮಾಡಿತು
- ಇದು 400–600 ತಿಳಿ ಹಳದಿ ಬಣ್ಣದ ಮೊಟ್ಟೆಗಳನ್ನಿಡುತ್ತದೆ; ಮೊಟ್ಟೆಯ ಅವಧಿ 8–10 ದಿನಗಳು ಮತ್ತು ಮರಿಹುಳು ಅವಧಿ 22–25 ದಿನಗಳಾಗಿದ್ದು ಜೀವನ ಚಕ್ರವನ್ನು 30–35 ದಿನಗಳಲ್ಲಿ ಮುಗಿಸುತ್ತದೆ

ನಿರ್ವಹಣಾ ಕ್ರಮಗಳು

ಯಾಂತ್ರಿಕ ವಿಧಾನ

- ಬಾಧೆಗೊಳಗಾದ ಭಾಗಗಳನ್ನು ಕತ್ತರಿಸಿ ತೆಗೆದು ತೋಟದ ಒಂದು ಮೂಲೆಯಲ್ಲಿ ಗುಪ್ಪೆ ಮಾಡಿ ಇಡಿ

ಜೈವಿಕ ವಿಧಾನ

- ಪರತಂತ್ರ ಕೀಟವಾದ ಅಸಿರೋಫ್ಲೇಗಸ್ ಪಪ್ಪಾಯೆ (ಎಕರೆಗೆ 100 ಜೀವಿಗಳಂತೆ) ಬಿಡುಗಡೆಗೊಳಿಸಿ. ಇತರೆ ಪರ್ಯಾಯ ಆಸರೆ ಸಸ್ಯಗಳಾದ ಪಪ್ಪಾಯ, ಪಾರ್ಥೇನಿಯಂ, ಜತ್ರೋಪ, ದಾಸವಾಳಗಳ ಮೇಲೂ ಈ ಪರತಂತ್ರ ಜೀವಿಯನ್ನು ಬಿಡಿ

ಹಿಪ್ಪುನೇರಳೆಯಲ್ಲಿ ಪಪ್ಪಾಯಿ ಬೂಸ್ಟು ತಿಗಣೆಯ ಪರಿಣಾಮಕಾರಿ ನಿಯಂತ್ರಣ

ಅಸಿರೋಫ್ಲೇಗಸ್ ಪರತಂತ್ರ ಜೀವಿಯ ಲಭ್ಯತೆ

- ರಾಷ್ಟ್ರೀಯ ಕೃಷಿ ಕೀಟ ಸಂಪನ್ಮೂಲಗಳ ಬ್ಯೂರೋ (NBAIR, ICAR), ಸಿ.ಬಿ.ಐ ಎದುರು, ಗಂಗಾನಗರ, ಬೆಂಗಳೂರು ಇಲ್ಲಿ ಉಚಿತವಾಗಿ ದೊರೆಯುತ್ತದೆ (ದೂರವಾಣಿ ಸಂಖ್ಯೆ: 080-2351 1982)

ಇದನ್ನು ಮಾಡಿ

- ಹಿಪ್ಪುನೇರಳೆ ತೋಟಗಳಲ್ಲಿ ನೈಸರ್ಗಿಕ ಶತ್ರು ಕೀಟಗಳ ಸಂಖ್ಯೆ ಹೆಚ್ಚಿಸಲು ಶ್ರಮಿಸಿ

ಇದನ್ನು ಮಾಡಬೇಡಿ

- ಪಪ್ಪಾಯಿ ಬೂಸ್ಟು ತಿಗಣೆಯ ವಿರುದ್ಧ ಕೀಟನಾಶಕವನ್ನು ಸಿಂಪಡಣೆ ಮಾಡಬೇಡಿ, ಇದರಿಂದ ಪರಿಸ್ಥಿತಿ ಇನ್ನೂ ಹದಗೆಡಬಹುದು
- ಪರ್ಯಾಯ ಆಸರೆ ಸಸ್ಯಗಳಾದ ಪಪ್ಪಾಯ, ಪಾರ್ಥೇನಿಯಂ, ಜತ್ರೋಪ, ದಾಸವಾಳ ಇತ್ಯಾದಿಗಳನ್ನು ನಾಶಗೊಳಿಸಬೇಡಿ. ಏಕೆಂದರೆ ಅವುಗಳಲ್ಲಿ ಇರುವ ಬೂಸ್ಟು ತಿಗಣೆಗಳ ಶರೀರದೊಳಗೆ ಪರತಂತ್ರ ಜೀವಿಯ ಮರಿಹುಳು ಬೆಳೆಯುತ್ತಿರುತ್ತವೆ

ಎಲೆ ಸುರುಳಿ ಕೀಟದ ಸಮಗ್ರ ನಿಯಂತ್ರಣ

- ಶಿಫಾರಸ್ಸು ಮಾಡಿದ ವರ್ಷ: 1997

ಪ್ರಮುಖ ಅಂಶಗಳು

- ಎಲೆ ಸುರುಳಿ ಕೀಟವು ಹಿಪ್ಪುನೇರಳೆಯ ಒಂದು ಕಾಲೋಚಿತ ಪೀಡೆ
- ಇದು ಜೂನ್‌ನಿಂದ ಫೆಬ್ರುವರಿ ತನಕ ಕಾಣಿಸಿಕೊಂಡರೂ ಸೆಪ್ಟೆಂಬರ್‌ನಿಂದ ನವೆಂಬರ್ ತನಕ ಇದರ ಬಾಧೆ ಹೆಚ್ಚಾಗಿರುತ್ತದೆ
- ಇದು 80–150 ಮೊಟ್ಟೆಗಳನ್ನಿಡುತ್ತದೆ; ಮೊಟ್ಟೆಯ ಅವಧಿ 2–3 ದಿನಗಳು
- ಮರಿ ಹುಳು ಮತ್ತು ಕೋಶಾವಸ್ಥೆಯ ಅವಧಿ ಕ್ರಮವಾಗಿ 8–12 & 7–9 ದಿನಗಳು
- ಜೀವನ ಚಕ್ರವನ್ನು 17–24 ದಿನಗಳಲ್ಲಿ ಮುಗಿಸುತ್ತದೆ.

ನಿರ್ವಹಣಾ ಕ್ರಮಗಳು

ಯಾಂತ್ರಿಕ ವಿಧಾನ

- ಬಾಧೆಗೊಳಗಾದ ಭಾಗಗಳನ್ನು ಸುರುಳಿ ಕೀಟದ ಸಮೇತ ಕತ್ತರಿಸಿ ತೆಗೆದು ಸುಟ್ಟು ನಾಶ ಮಾಡಿ ಅಥವಾ ಶೇ.0.5 ಸೋಪಿನ ದ್ರಾವಣದಲ್ಲಿ ಮುಳುಗಿಸಿ

ರಾಸಾಯನಿಕ ವಿಧಾನ

- ಶೇ. 0.076ರ ಡಿಡಿವಿಪಿ (76% ಇ.ಸಿ) ದ್ರಾವಣವನ್ನು (1 ಲೀ. ನೀರಿನಲ್ಲಿ 1 ಮಿ.ಲೀ. ಡಿಡಿವಿಪಿ) ಕಟಾವಾದ 12–15 ದಿನಗಳ ನಂತರ ಸಿಂಪಡಿಸಿ
- ಸಿಂಪಡಿಸಿದ 7 ದಿನಗಳ ನಂತರ ಸೊಪ್ಪನ್ನು ರೇಷ್ಮೆ ಹುಳುಗಳಿಗೆ ನೀಡಬಹುದು

ಜೈವಿಕ ವಿಧಾನ

- ಮೊಟ್ಟೆ ಪರತಂತ್ರ ಜೀವಿಯಾದ ಟ್ರೈಕೋಗ್ರಾಮ ಖಿಲೋನಿಸ್ ಎಕರೆಗೆ ಪ್ರತಿ ಬೆಳೆಗೆ 4 ಕಾರ್ಡ್‌ಗಳಂತೆ ಬಿಡುಗಡೆಗೊಳಿಸಿ (ಜುಲೈ ನಿಂದ ಫೆಬ್ರುವರಿ ತನಕ)

ಹಿಪ್ಪುನೇರಳೆಯಲ್ಲಿ ಎಲೆ ಸುರುಳಿ ಕೀಟದ ಪರಿಣಾಮಕಾರಿ ನಿಯಂತ್ರಣ

- ವೆಚ್ಚ: ` 800/- ಎಕರೆಗೆ/ವರ್ಷಕ್ಕೆ
- ಖರ್ಚು ಲಾಭದ ಅನುಪಾತ: 1:4

ಇದನ್ನು ಮಾಡಿ

- ಮಣ್ಣಿನಲ್ಲಿರುವ ಎಲೆ ಸುರುಳಿ ಕೀಟದ ಕೋಶಗಳು ಪಕ್ಷಿಗಳಿಗೆ ಆಹಾರವಾಗುವಂತೆ ಆಳವಾಗಿ ಉಳುಮೆ ಮಾಡಿ
- ಕೀಟನಾಶಕ ಸಿಂಪಡಣೆಯ 7 ದಿನಗಳ ನಂತರ ಮೊಟ್ಟೆ ಪರತಂತ್ರ ಜೀವಿಗಳನ್ನು ಬಿಡುಗಡೆ ಮಾಡಿ
- ಕೀಟನಾಶಕಗಳನ್ನು ತಂಪಾದ ಹೊತ್ತಿನಲ್ಲಿ ಸಿಂಪಡಿಸಿ

ಇದನ್ನು ಮಾಡಬೇಡಿ

- ಪರತಂತ್ರ ಜೀವಿಯನ್ನು ಬಿಡುಗಡೆಗೊಳಿಸಿದ ನಂತರ ಕೀಟನಾಶಕ ಸಿಂಪಡಣೆ ಮಾಡಬೇಡಿ
- ಕೀಟನಾಶಕವನ್ನು ಗಾಳಿಯ ವಿರುದ್ಧ ದಿಕ್ಕಿನಲ್ಲಿ ಸಿಂಪಡಣೆ ಮಾಡಬೇಡಿ

ಬಿಹಾರದ ಕಂಬಳಿ ಹುಳುವಿನ ಸಮಗ್ರ ನಿಯಂತ್ರಣ

- ಶಿಫಾರಸ್ಸು ಮಾಡಿದ ವರ್ಷ: 1995–96

ಪ್ರಮುಖ ಅಂಶಗಳು

- ಈ ಕೀಟ ಪೀಡೆಯು ಹಿಪ್ಪುನೇರಳೆ ಎಲೆಗಳನ್ನು ಯಥೇಚ್ಚವಾಗಿ ತಿನ್ನುತ್ತದೆ
- ಇದು ಮುಂಗಾರಿನ ಪ್ರಾರಂಭದಲ್ಲಿ ಕಾಣಿಸಿಕೊಂಡು ಫೆಬ್ರವರಿ ತನಕ ಇರುತ್ತದೆ
- ಇದು 1,000–1,200 ಮೊಟ್ಟೆಗಳನ್ನು ಗುಂಪಾಗಿ ಇಡುತ್ತದೆ; ಮೊಟ್ಟೆಯ ಅವಧಿ 5–7 ದಿನಗಳು
- ಮರಿಹುಳು & ಕೋಶಾವಸ್ಥೆಯ ಅವಧಿ ಕ್ರಮವಾಗಿ 28–30 & 12–14 ದಿನಗಳು
- ಜೀವನ ಚಕ್ರವನ್ನು 45–51 ದಿನಗಳಲ್ಲಿ ಮುಗಿಸುತ್ತದೆ

ನಿರ್ವಹಣಾ ಕ್ರಮಗಳು

ಯಾಂತ್ರಿಕ ವಿಧಾನ

- ಮೊಟ್ಟೆ ಮತ್ತು ಗುಂಪಾಗಿ ವಾಸಿಸುವ ಎಳೆಯ ಕಂಬಳಿಹುಳುಗಳನ್ನು ಸಂಗ್ರಹಿಸಿ ಸುಟ್ಟು ನಾಶ ಮಾಡಿ
- ಆಳವಾದ ಉಳುಮೆಯಿಂದ ಮಣ್ಣಿನಲ್ಲಿರುವ ಕೋಶಗಳು ಪಕ್ಷಿಗಳಿಗೆ ಮತ್ತು ಸೂರ್ಯನ ಶಾಖಕ್ಕೆ ಒಡ್ಡಲ್ಪಟ್ಟು ನಾಶ ಹೊಂದುತ್ತವೆ
- ಭೂಮಿಯಲ್ಲಿ ನೀರು ನಿಲ್ಲುವಂತೆ ಮಾಡಿದಾಗ ಕೋಶಗಳು ನಾಶವಾಗುತ್ತವೆ

ರಾಸಾಯನಿಕ ವಿಧಾನ

- ಶೇ. 0.15ರ ಡಿಡಿವಿಪಿ (76% ಇ.ಸಿ.) ದ್ರಾವಣವನ್ನು (1 ಲೀಟರ್ ನೀರಿನಲ್ಲಿ 2 ಮಿ.ಲೀ. ಡಿಡಿವಿಪಿ ಬೆರೆಸಿ) ಕಟಾವಾದ 12–15 ದಿನಗಳ ನಂತರ ಸಿಂಪಡಿಸಿ
- ಸಿಂಪಡಿಸಿದ 10 ದಿನಗಳ ನಂತರ ಸೊಪ್ಪನ್ನು ರೇಷ್ಮೆ ಹುಳುಗಳಿಗೆ ನೀಡಬಹುದು

ಜೈವಿಕ ವಿಧಾನ

- ಮೊಟ್ಟೆ ಪರತಂತ್ರ ಜೀವಿಯಾದ ಟ್ರೈಕೋಗ್ರಾಮ ಖಿಲೋನಿಸ್ ಎಕರೆಗೆ ಪ್ರತಿ ಬೆಳೆಗೆ 4 ಕಾರ್ಡ್ ಗಳಂತೆ ಬಿಡುಗಡೆಗೊಳಿಸಿ

ಅನುಕೂಲತೆ

ಹಿಪ್ಪುನೇರಳೆಯಲ್ಲಿ ಕಂಬಳಿ ಹುಳುವಿನ ಪರಿಣಾಮಕಾರಿ ನಿಯಂತ್ರಣ

- ವೆಚ್ಚ: ` 1,000/- ಎಕರೆಗೆ/ವರ್ಷಕ್ಕೆ
- ಖರ್ಚು ಲಾಭದ ಅನುಪಾತ: 1:3

ಇದನ್ನು ಮಾಡಿ

- ಕೀಟನಾಶಕ ಸಿಂಪಡಣೆಯ 7 ದಿನಗಳ ನಂತರ ಮೊಟ್ಟೆ ಪರತಂತ್ರ ಜೀವಿಗಳನ್ನು ಬಿಡುಗಡೆ ಮಾಡಿ
- ಕೀಟನಾಶಕಗಳನ್ನು ತಂಪಾದ ಹೊತ್ತಿನಲ್ಲಿ ಸಿಂಪಡಿಸಿ

ಇದನ್ನು ಮಾಡಬೇಡಿ

- ಪರತಂತ್ರ ಜೀವಿಯನ್ನು ಬಿಡುಗಡೆಗೊಳಿಸಿದ ನಂತರ ಕೀಟನಾಶಕ ಸಿಂಪಡಣೆ ಮಾಡಬೇಡಿ
- ಕೀಟನಾಶಕವನ್ನು ಗಾಳಿಯ ವಿರುದ್ಧ ದಿಕ್ಕಿನಲ್ಲಿ ಸಿಂಪಡಣೆ ಮಾಡಬೇಡಿ

ಕ್ರೈಸೋಪ (ಹಸಿರು ಲೇಸ್ ವಿಂಗ್)ದಿಂದ ಥ್ರಿಪ್ಸ್ ನಿರ್ವಹಣೆ

- ಶಿಫಾರಸ್ಸು ಮಾಡಿದ ವರ್ಷ: 2016

ಪ್ರಮುಖ ಅಂಶಗಳು

- ಕ್ರೈಸೋಪ ಅನೇಕ ಕೃಷಿ ಬೆಳೆ ವ್ಯವಸ್ಥೆಗಳಲ್ಲಿ ಒಂದು ಮುಖ್ಯವಾದ ವಿಶಾಲ ವ್ಯಾಪ್ತಿ ಹೊಂದಿರುವ ಪರಭಕ್ಷಕ ಕೀಟ
- ಕ್ರೈಸೋಪರ್ಲ ಹಾಗೂ ಮಲ್ಲಾಡ ಇವು ಪ್ರಮುಖ ಜಾತಿಯ ಕ್ರೈಸೋಪಿಡ್ ಜೀವಿಗಳಾಗಿವೆ
- ಪ್ರೌಢ ಚಿಟ್ಟೆಗಳು ಅತ್ಯಾಕರ್ಷಕವಾದ ಹೆಣೆದಂತಿರುವ ಹಸಿರುಬಣ್ಣದ ರೆಕ್ಕೆಗಳನ್ನು ಹೊಂದಿವೆ. ಇವು ಇತರ ಕೀಟಗಳು ಸ್ರವಿಸುವ ರಸ, ಮಕರಂದ, ಪರಾಗ ಮತ್ತು ಸಕ್ಕರೆ ಮೂಲದ ವಸ್ತುಗಳನ್ನು ತಿನ್ನುತ್ತವೆ
- ಅವು ಸುಮಾರು 600–800 ಉದ್ದನೆಯ ತೊಟ್ಟುಗಳಿರುವ ಮೊಟ್ಟೆಗಳನ್ನು ಗುಂಪುಗಳಲ್ಲಿ ಎಲೆಗಳ ಮೇಲೆ ಅಥವಾ ಸಸ್ಯಗಳ ವಿವಿಧ ಭಾಗಗಳ ಮೇಲೆ ಅಥವಾ ಪೀಡೆಗಳ ಸಮೀಪ ಇಡುತ್ತವೆ ಮತ್ತು ಅವು 3–4 ದಿನಗಳಲ್ಲಿ ಒಡೆಯುತ್ತವೆ
- ಮರಿ ಹುಳುಗಳು ಮಚ್ಚುಗತ್ತಿಯಂಥಹ ಬಾಯಿಯ ಅಂಗಾಂಶವನ್ನು ಹೊಂದಿದ್ದು ಮೃದು ಶರೀರದ ಕೀಟ ಪೀಡೆಗಳಾದ ಥ್ರಿಪ್ಸ್, ಬೂಸ್ಟು ತಿಗಣೆ, ಶಲ್ಕ ಕೀಟ, ಬಿಳಿ ನೊಣ, ನುಸಿ ಪೀಡೆ, ಕೀಟಗಳ ಮೊಟ್ಟೆಗಳು ಹಾಗೂ ಆಗ ತಾನೇ ಮೊಟ್ಟೆಯೊಡೆದು ಹೊರಬಂದ ಮರಿ ಹುಳುಗಳನ್ನು ತಿನ್ನುತ್ತವೆ. ಮರಿ ಹಂತದ ಅವಧಿ 8–10 ದಿನಗಳು
- ನಂತರ ಅವು ಗುಂಡನೆಯ ಗೂಡುಗಳನ್ನು ಕಟ್ಟಿ 5–7 ದಿನಗಳಲ್ಲಿ ಮತ್ತೆ ಪ್ರೌಢ ಚಿಟ್ಟೆಗಳಾಗಿ ಹೊರಬಂದು ಜೀವನ ಚಕ್ರವನ್ನು 16–21 ದಿನಗಳಲ್ಲಿ ಮುಗಿಸುತ್ತವೆ.

ಶಿಫಾರಸ್ಸು

- ಒಂದು ಎಕರೆಗೆ 1,000 ಮೊಟ್ಟೆಗಳಂತೆ ಒಂದು ವಾರದ ಅಂತರದಲ್ಲಿ 2 ಬಾರಿ ಬಿಡುಗಡೆಗೊಳಿಸಬೇಕು
- ಮೊಟ್ಟೆ ಕಾರ್ಡ್ ರೂಪದಲ್ಲಿ ದೊರಕುವ ಇವನ್ನು ಕುಡಿ ಎಲೆಗಳ ಮೇಲೆ ಕಟ್ಟಬೇಕು ಅಥವಾ ಪಿನ್‌ನಿಂದ ಲಗತ್ತಿಸಬೇಕು

ಉದ್ದೇಶ

ಥ್ರಿಪ್ಸ್ ಹಾಗೂ ಇತರೆ ಮೃದು ಶರೀರವುಳ್ಳ ಕೀಟ ಮತ್ತು ನುಸಿ ಪೀಡೆಗಳ ಪರಿಣಾಮಕಾರಿ ಜೈವಿಕ ನಿಯಂತ್ರಣ

ಇದನ್ನು ಮಾಡಿ

- ಥ್ರಿಪ್ಸ್ ಬಾಧೆ ತೀವ್ರವಾಗಿದ್ದಲ್ಲಿ ರೋಗರ್ ಕೀಟನಾಶಕವನ್ನು (3 ಮಿ.ಲೀ. ಒಂದು ಲೀ. ನೀರಿನಲ್ಲಿ) ಸಿಂಪಡಿಸಿ 8–10 ದಿನಗಳ ನಂತರ ಕ್ರೈಸೋಪ ಬಿಡುಗಡೆಗೊಳಿಸಿ
- ಕೀಟನಾಶಕ ಸಿಂಪಡಿಸಿದ 20 ದಿನಗಳ ನಂತರ ಸೊಪ್ಪನ್ನು ರೇಷ್ಮೆ ಹುಳುಗಳಿಗೆ ನೀಡಿ

ಇದನ್ನು ಮಾಡಬೇಡಿ

- ಕ್ರೈಸೋಪ ಬಿಡುಗಡೆಗೊಳಿಸಿದ ನಂತರ ಯಾವುದೇ ಕೀಟ ನಾಶಕವನ್ನು ಸಿಂಪಡಿಸಬಾರದು

ಸಂಕರಣ ರೇಷ್ಮೆ ತಳಿಗಳು

ಸಿಎಸ್‌ಆರ್2 × ಸಿಎಸ್‌ಆರ್4

- ಶಿಫಾರಸ್ಸು ಮಾಡಿದ ವರ್ಷ: 1997

ಪ್ರಮುಖ ಅಂಶಗಳು

- ಉತ್ಪನ್ನಕಾರಿ ದ್ವಿಸಂತತಿ ಸಂಕರಣ ತಳಿ
- ನೀಲಿ ಮಿಶ್ರಿತ ಬಿಳಿ ಬಣ್ಣದ ಹುಳುಗಳು
- ಹುಳುವಿನ ಕಾಲಾವಧಿ 23–24 ದಿನಗಳು
- ಮಧ್ಯಮ ಹೊರಮೈ ಲಕ್ಷಣ ಹೊಂದಿರುವ ಶುಭ್ರ ಬಿಳಿ ಬಣ್ಣದ ಗೂಡುಗಳು
- ಗೂಡಿನ ಇಳುವರಿ: 65–70 ಕೆ.ಜಿ./100 ಮೊಟ್ಟೆಗಳಿಗೆ
- ಕೋಶಾವಸ್ಥೆ ಪರಿವರ್ತನಾ ಪ್ರಮಾಣ: >90%
- ಕಚ್ಚಾ ರೇಷ್ಮೆ ಪ್ರಮಾಣ : 17–18%
- ನೂಲು ಬಿಚ್ಚಾಣಿಕೆ : 86–90%
- ರೇಷ್ಮೆ ನೂಲಿನ ಉದ್ದ: 1,000 ಮೀ.
- ರೇಷ್ಮೆ ನೂಲಿನ ಗುಣಮಟ್ಟ: 2ಎ– 3ಎ
- ರೆಂಡಿಟ್ಟಾ : 5.5–6.0
- ಉತ್ತಮ ಬೆಳೆ ಸ್ಥಿರತೆ

ಶಿಫಾರಸ್ಸು ಮಾಡಲಾಗಿರುವ ಪ್ರದೇಶಗಳು

ಕರ್ನಾಟಕ, ಆಂಧ್ರ ಪ್ರದೇಶ, ತೆಲಂಗಾಣ, ತಮಿಳು ನಾಡು, ಉತ್ತರ ಪ್ರದೇಶ, ಮಧ್ಯ ಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳ ನೀರಾವರಿ ಪ್ರದೇಶಗಳು

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ರೇಷ್ಮೆ ಹುಳು ಸಾಕಾಣಿಕಾ ಕ್ರಮವನ್ನು ಅಳವಡಿಸಿಕೊಳ್ಳಿ

ಸಿಎಸ್‌ಆರ್16 × ಸಿಎಸ್‌ಆರ್17

- ಶಿಫಾರಸ್ಸು ಮಾಡಿದ ವರ್ಷ: 1997

ಪ್ರಮುಖ ಅಂಶಗಳು

- ಉತ್ಪನ್ನಕಾರಿ ದ್ವಿಸಂತತಿ ಸಂಕರಣ ತಳಿ
- ಮಚ್ಚೆ ಇರುವ ನೀಲಿ ಮಿಶ್ರಿತ ಬಿಳಿ ಬಣ್ಣದ ಹುಳುಗಳು
- ಹುಳುವಿನ ಕಾಲಾವಧಿ 23–24 ದಿನಗಳು
- ಶುಭ್ರ ಬಿಳಿ ಬಣ್ಣದ ಮಧ್ಯಮ ಹೊರಮೈ ಲಕ್ಷಣದ ಗೂಡುಗಳು
- ಗೂಡಿನ ಇಳುವರಿ: 65–70 ಕೆ.ಜಿ./100 ಮೊಟ್ಟೆಗಳಿಗೆ
- ಕೋಶಾವಸ್ಥೆ ಪರಿವರ್ತನಾ ಪ್ರಮಾಣ: >90%
- ಕಚ್ಚಾ ರೇಷ್ಮೆಯ ಪ್ರಮಾಣ : 18–19%
- ನೂಲು ಬಿಚ್ಚಾಣಿಕೆ : 86–90%
- ರೇಷ್ಮೆ ನೂಲಿನ ಉದ್ದ: 1,050 ಮೀ.
- ರೇಷ್ಮೆ ನೂಲಿನ ಗುಣಮಟ್ಟ: 2ಎ– 3ಎ
- ರೆಂಡಿಟ್ಟಾ : 5.5–6.0
- ಇದು ಸಿಎಸ್‌ಆರ್2 × ಸಿಎಸ್‌ಆರ್4 ಗೆ ಪರ್ಯಾಯವಾಗಿದೆ
- ಉತ್ತಮ ಬೆಳೆ ಸ್ಥಿರತೆ

ಶಿಫಾರಸ್ಸು ಮಾಡಲಾಗಿರುವ ಪ್ರದೇಶಗಳು

ಕರ್ನಾಟಕ, ಆಂಧ್ರ ಪ್ರದೇಶ, ತೆಲಂಗಾಣ, ತಮಿಳು ನಾಡು, ಉತ್ತರ ಪ್ರದೇಶ, ಮಧ್ಯ ಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳ ನೀರಾವರಿ ಪ್ರದೇಶಗಳು

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ರೇಷ್ಮೆ ಹುಳು ಸಾಕಾಣಿಕಾ ಕ್ರಮವನ್ನು ಅಳವಡಿಸಿಕೊಳ್ಳಿ

ಎಫ್ಸಿ1 × ಎಫ್ಸಿ2
(ಸಿಎಸ್ಆರ್6 × ಸಿಎಸ್ಆರ್26) × (ಸಿಎಸ್ಆರ್2 × ಸಿಎಸ್ಆರ್27)

- ಶಿಫಾರಸ್ಸು ಮಾಡಿದ ವರ್ಷ: 2000

ಪ್ರಮುಖ ಅಂಶಗಳು

- ಉತ್ಪನ್ನಕಾರಿ ದ್ವಿಸಂತತಿ ದ್ವಿಸಂಕರಣ ತಳಿ (ಡಬಲ್ ಹೈಬ್ರಿಡ್)
- ಮಚ್ಚೆ ಇರುವ ನೀಲಿ ಮಿಶ್ರಿತ ಬಿಳಿ ಬಣ್ಣದ ಹುಳುಗಳು
- ಹುಳುವಿನ ಕಾಲಾವಧಿ 23–24 ದಿನಗಳು
- ಶುಭ್ರ ಬಿಳಿ ಬಣ್ಣದ ಮಧ್ಯಮ ಹೊರಮೈ ಲಕ್ಷಣದ ಗೂಡುಗಳು
- ಗೂಡಿನ ಇಳುವರಿ: 70–75 ಕೆ.ಜಿ./100 ಮೊಟ್ಟೆಗಳಿಗೆ
- ಕೋಶಾವಸ್ಥೆ ಪರಿವರ್ತನಾ ಪ್ರಮಾಣ: >90%
- ಕಚ್ಚಾ ರೇಷ್ಮೆಯ ಪ್ರಮಾಣ : 18–19%
- ನೂಲು ಬಿಚ್ಚಾಣಿಕೆ : 86–90%
- ರೇಷ್ಮೆ ನೂಲಿನ ಉದ್ದ: 1,100 ಮೀ.
- ರೇಷ್ಮೆ ನೂಲಿನ ಗುಣಮಟ್ಟ: 2ಎ– 3ಎ
- ರೆಂಡಿಟ್ಟಾ : 5.3–6.0
- ಉತ್ತಮ ಬೆಳೆ ಸ್ಥಿರತೆ

ಶಿಫಾರಸ್ಸು ಮಾಡಲಾಗಿರುವ ಪ್ರದೇಶಗಳು

ಭಾರತದ ಎಲ್ಲಾ ನೀರಾವರಿ ಪ್ರದೇಶಗಳು

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ರೇಷ್ಮೆ ಹುಳು ಸಾಕಾಣಿಕಾ ಕ್ರಮವನ್ನು ಅಳವಡಿಸಿಕೊಳ್ಳಿ

ಚಾಮರಾಜ
(ಸಿಎಸ್‌ಆರ್50 × ಸಿಎಸ್‌ಆರ್51)

- ಶಿಫಾರಸ್ಸು ಮಾಡಿದ ವರ್ಷ: 2012

ಪ್ರಮುಖ ಅಂಶಗಳು

- ದೃಢಕಾಯ ದ್ವಿಸಂತತಿ ಸಂಕರಣ ತಳಿ
- ಮಚ್ಚೆ ಇರುವ ನೀಲಿ ಮಿಶ್ರಿತ ಬಿಳಿ ಬಣ್ಣದ ಹುಳುಗಳು
- ಹುಳುವಿನ ಕಾಲಾವಧಿ 23–24 ದಿನಗಳು
- ಶುಭ್ರ ಬಿಳಿ ಬಣ್ಣದ ಮಧ್ಯಮ ಹೊರಮೈ ಲಕ್ಷಣದ ಗೂಡುಗಳು
- ಗೂಡಿನ ಇಳುವರಿ: 70–75 ಕೆ.ಜಿ./100 ಮೊಟ್ಟೆಗಳಿಗೆ
- ಕೋಶಾವಸ್ಥೆ ಪರಿವರ್ತನಾ ಪ್ರಮಾಣ: >90%
- ಕಚ್ಚಾ ರೇಷ್ಮೆಯ ಪ್ರಮಾಣ : 19–20%
- ನೂಲು ಬಿಚ್ಚಾಣಿಕೆ : 86–90%
- ರೇಷ್ಮೆ ನೂಲಿನ ಉದ್ದ: 1,150 ಮೀ.
- ರೇಷ್ಮೆ ನೂಲಿನ ಗುಣಮಟ್ಟ: 2ಎ– 3ಎ
- ರೆಂಡಿಟ್ಟಾ : 5.0–5.5

ಶಿಫಾರಸ್ಸು ಮಾಡಲಾಗಿರುವ ಪ್ರದೇಶಗಳು

ದೇಶದ ಎಲ್ಲಾ ನೀರಾವರಿ ಪ್ರದೇಶಗಳು ಮತ್ತು ವ್ಯತಿರಿಕ್ತ ಪರಿಸ್ಥಿತಿಗಳಿಗೂ ಸೂಕ್ತವಾಗಿದೆ

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ರೇಷ್ಮೆ ಹುಳು ಸಾಕಾಣಿಕಾ ಕ್ರಮವನ್ನು ಅಳವಡಿಸಿಕೊಳ್ಳಿ

ಜಯಚಾಮರಾಜ

([ಸಿಎಸ್ಆರ್50 × ಸಿಎಸ್ಆರ್52] ×[ಸಿಎಸ್ಆರ್51 × ಸಿಎಸ್ಆರ್53])

- ಶಿಫಾರಸ್ಸು ಮಾಡಿದ ವರ್ಷ: 2012

ಪ್ರಮುಖ ಅಂಶಗಳು

- ಉತ್ಪನ್ನಕಾರಿ ದ್ವಿಸಂತತಿ ದ್ವಿಸಂಕರಣ ತಳಿ (ಡಬಲ್ ಹೈಬ್ರಿಡ್)
- ನೀಲಿ ಮಿಶ್ರಿತ ಬಿಳಿ ಬಣ್ಣದ ಮಚ್ಚೆ ಇರುವ ಹುಳುಗಳು
- ಹುಳುವಿನ ಕಾಲಾವಧಿ 23–24 ದಿನಗಳು
- ಶುಭ್ರ ಬಿಳಿ ಬಣ್ಣದ ಮಧ್ಯಮ ಹೊರಮೈ ಲಕ್ಷಣದ ಗೂಡುಗಳು
- ಗೂಡಿನ ಇಳುವರಿ: 70–75 ಕೆ.ಜಿ./100 ಮೊಟ್ಟೆಗಳಿಗೆ
- ಕೋಶಾವಸ್ಥೆ ಪರಿವರ್ತನಾ ಪ್ರಮಾಣ: >90%
- ಕಚ್ಚಾ ರೇಷ್ಮೆಯ ಪ್ರಮಾಣ : 19–20%
- ನೂಲು ಬಿಚ್ಚಾಣಿಕೆ : 86–90%
- ರೇಷ್ಮೆ ನೂಲಿನ ಉದ್ದ: 1,100 ಮೀ.
- ರೇಷ್ಮೆ ನೂಲಿನ ಗುಣಮಟ್ಟ: 2ಎ– 3ಎ
- ರೆಂಡಿಟ್ಟಾ : 5.0–5.5
- ಉತ್ತಮ ಬೆಳೆ ಸ್ಥಿರತೆ

ಶಿಫಾರಸ್ಸು ಮಾಡಲಾಗಿರುವ ಪ್ರದೇಶಗಳು

ದೇಶದ ಎಲ್ಲಾ ನೀರಾವರಿ ಪ್ರದೇಶಗಳು ಮತ್ತು ವ್ಯತಿರಿಕ್ತ ಪರಿಸ್ಥಿತಿಗಳಿಗೂ ಸೂಕ್ತವಾಗಿದೆ

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ರೇಷ್ಮೆ ಹುಳು ಸಾಕಾಣಿಕಾ ಕ್ರಮವನ್ನು ಅಳವಡಿಸಿಕೊಳ್ಳಿ

ಜಿ 11 × ಜಿ 19

- ಶಿಫಾರಸ್ಸು ಮಾಡಿದ ವರ್ಷ: 2014

ಪ್ರಮುಖ ಅಂಶಗಳು

- ಅನಾನುಕೂಲಕರ ಪರಿಸ್ಥಿತಿಗಳಿಗಾಗಿ ಉತ್ತಮ ದ್ವಿಸಂಕರಣ ತಳಿ
- ನೀಲಿ ಮಿಶ್ರಿತ ಬಿಳಿ ಬಣ್ಣದ ಸರಳ ಮರಿಗಳು
- ಹುಳುವಿನ ಕಾಲಾವಧಿ 23–24 ದಿನಗಳು
- ಶುಭ್ರ ಬಿಳಿ ಬಣ್ಣದ ಮಧ್ಯಮ ಹೊರಮೈ ಲಕ್ಷಣದ ಗೂಡುಗಳು
- ಗೂಡಿನ ಇಳುವರಿ: 65–70 ಕೆ.ಜಿ./100 ಮೊಟ್ಟೆಗಳಿಗೆ
- ಕೋಶಾವಸ್ಥೆ ಪರಿವರ್ತನಾ ಪ್ರಮಾಣ: >90%
- ಕಚ್ಚಾ ರೇಷ್ಮೆಯ ಪ್ರಮಾಣ : 17–18%
- ನೂಲು ಬಿಚ್ಚಾಣಿಕೆ : 86%
- ರೇಷ್ಮೆ ನೂಲಿನ ಉದ್ದ: 950 ಮೀ.
- ರೇಷ್ಮೆ ನೂಲಿನ ಗುಣಮಟ್ಟ: 2ಎ– 3ಎ
- ರೆಂಡಿಟ್ಟಾ : 5.5–6.0
- ಉತ್ತಮ ಜೀರ್ಣ ಶಕ್ತಿ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಬದುಕುಳಿಯುವ ಸಾಮರ್ಥ್ಯ
- ಎಲ್ಲಾ ಪ್ರದೇಶ ಮತ್ತು ಕಾಲಗಳಲ್ಲೂ ಸೂಕ್ತ

ಶಿಫಾರಸ್ಸು ಮಾಡಲಾಗಿರುವ ಪ್ರದೇಶಗಳು

ಎಲ್ಲಾ ಪ್ರದೇಶಗಳಿಗೆ

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ರೇಷ್ಮೆ ಹುಳು ಸಾಕಾಣಿಕಾ ಕ್ರಮವನ್ನು ಅಳವಡಿಸಿಕೊಳ್ಳಿ

ಎಸ್8 × ಸಿಎಸ್ಆರ್16

- ಶಿಫಾರಸ್ಸು ಮಾಡಿದ ವರ್ಷ: 2015

ಪ್ರಮುಖ ಅಂಶಗಳು

- ಉತ್ಪನ್ನಕಾರಿ ದ್ವಿಸಂತತಿ ಸಂಕರಣ ತಳಿ
- ಮಚ್ಚೆ ಇರುವ ನೀಲಿ ಮಿಶ್ರಿತ ಬಿಳಿ ಬಣ್ಣದ ಹುಳುಗಳು
- ಹುಳುವಿನ ಕಾಲಾವಧಿ 23–24 ದಿನಗಳು
- ಶುಭ್ರ ಬಿಳಿ ಬಣ್ಣದ ಮಧ್ಯಮ ಹೊರಮೈ ಲಕ್ಷಣದ ಗೂಡುಗಳು
- ಗೂಡಿನ ಇಳುವರಿ: 70–75 ಕೆ.ಜಿ./100 ಮೊಟ್ಟೆಗಳಿಗೆ
- ಕೋಶಾವಸ್ಥೆ ಪರಿವರ್ತನಾ ಪ್ರಮಾಣ: >90%
- ಕಚ್ಚಾ ರೇಷ್ಮೆಯ ಪ್ರಮಾಣ : 19–20%
- ನೂಲು ಬಿಚ್ಚಾಣಿಕೆ : 86–90%
- ರೇಷ್ಮೆ ನೂಲಿನ ಉದ್ದ: 1100 ಮೀ.
- ರೇಷ್ಮೆ ನೂಲಿನ ಗುಣಮಟ್ಟ: 2ಎ– 3ಎ
- ರೆಂಡಿಟ್ಟಾ : 5.0–5.2
- ಹೆಚ್ಚು ಉತ್ಪಾದಕ ಮತ್ತು ಎಲ್ಲಾ ಕಾಲಗಳಲ್ಲೂ ಸೂಕ್ತ

ಶಿಫಾರಸ್ಸು ಮಾಡಲಾಗಿರುವ ಪ್ರದೇಶಗಳು

ಎಲ್ಲಾ ಕೃಷಿ ಹವಾಮಾನ ಪರಿಸ್ಥಿತಿಗಳಿಗೆ

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ರೇಷ್ಮೆ ಹುಳು ಸಾಕಾಣಿಕಾ ಕ್ರಮವನ್ನು ಅಳವಡಿಸಿಕೊಳ್ಳಿ

ಪಿಎಮ್ × ಸಿಎಸ್‌ಆರ್ 2

- ಶಿಫಾರಸ್ಸು ಮಾಡಿದ ವರ್ಷ: 2000

ಪ್ರಮುಖ ಅಂಶಗಳು

- ಉತ್ಪನ್ನಕಾರಿ ಮಿಶ್ರ ತಳಿ
- ನೀಲಿ ಮಿಶ್ರಿತ ಬಿಳಿ ಬಣ್ಣದ ಹುಳುಗಳು
- ಹುಳುವಿನ ಕಾಲಾವಧಿ 24 ದಿನಗಳು
- ತಿಳಿ ಹಸಿರು ಮಿಶ್ರಿತ ಹಳದಿ ಬಣ್ಣದ ಅಂಡಾಕಾರದ ಹಾಗೂ ತಕ್ಕಮಟ್ಟಿಗೆ ಗುಂಜು ಇರುವ ಗೂಡುಗಳು
- ಗೂಡಿನ ಇಳುವರಿ: 60 ಕೆ.ಜಿ./100 ಮೊಟ್ಟೆಗಳಿಗೆ
- ಕೋಶಾವಸ್ಥೆ ಪರಿವರ್ತನಾ ಪ್ರಮಾಣ: >95.4%
- ಕಚ್ಚಾ ರೇಷ್ಮೆ ಪ್ರಮಾಣ : 13.40%
- ನೂಲು ಬಿಚ್ಚಾಣಿಕೆ : >84–85%
- ರೇಷ್ಮೆ ನೂಲಿನ ಉದ್ದ: 800–900 ಮೀ.
- ರೇಷ್ಮೆ ನೂಲಿನ ಗುಣಮಟ್ಟ: 2ಎ– 3ಎ
- ರೆಂಡಿಟ್ಟಾ : 6.0–7.0
- ಉತ್ತಮ ಬೆಳೆ ಸ್ಥಿರತೆ

ಶಿಫಾರಸ್ಸು ಮಾಡಲಾಗಿರುವ ಪ್ರದೇಶಗಳು

ದಕ್ಷಿಣ ಭಾರತದ ಎಲ್ಲಾ ರಾಜ್ಯಗಳು

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ರೇಷ್ಮೆ ಹುಳು ಸಾಕಾಣಿಕಾ ಕ್ರಮವನ್ನು ಅಳವಡಿಸಿಕೊಳ್ಳಿ

ಕಾವೇರಿ ಗೋಲ್ಡ್ (ಎಮ್‌ವಿ1 × ಎಸ್‌8)

- ಶಿಫಾರಸ್ಸು ಮಾಡಿದ ವರ್ಷ: 2015

ಪ್ರಮುಖ ಅಂಶಗಳು

- ಸುಧಾರಿತ ಹಾಗೂ ಉತ್ಪಾದಕತೆ ಹೊಂದಿರುವ, ರೋಗ ನಿರೋಧಕ ಶಕ್ತಿ ಇರುವ ಮಿಶ್ರ ತಳಿ
- ಮಚ್ಚೆ ರಹಿತ, ತಿಳಿ ನೀಲಿ ಮಿಶ್ರಿತ ಬಿಳಿ ಬಣ್ಣದ ಹುಳುಗಳು
- ಹುಳುವಿನ ಕಾಲಾವಧಿ 22–23 ದಿನಗಳು
- ಗೂಡಿನ ಇಳುವರಿ: 75–85 ಕೆ.ಜಿ./100ಮೊಟ್ಟೆಗಳಿಗೆ
- ಅಂಡಾಕಾರ, ಒತ್ತಾದ ಕವಚ ಮತ್ತು ಉತ್ತಮ ಹೊರ ಮೈಯುಳ್ಳ, ತಿಳಿ ಹಸಿರು ಮಿಶ್ರಿತ ಹಳದಿ ಗೂಡು
- ರೇಷ್ಮೆ ಎಳೆಯನ್ನು ಕೊನೆಯ ಪೆಲೇಡ್ ಪದರದವರೆಗೆ ಸಂಪೂರ್ಣವಾಗಿ ತೆಗೆಯ ಬಹುದಾದ್ದರಿಂದ ಹೆಚ್ಚಿನ ಕಚ್ಚಾ ರೇಷ್ಮೆಯ ಉತ್ಪಾದನೆ
- ಕೋಶಾವಸ್ಥೆ ಪರಿವರ್ತನಾ ಪ್ರಮಾಣ: >90%
- ಕಚ್ಚಾ ರೇಷ್ಮೆಯ ಪ್ರಮಾಣ: 14–15%
- ನೂಲು ಬಿಚ್ಚಾಣಿಕೆ: 85–90%
- ರೇಷ್ಮೆ ನೂಲಿನ ಉದ್ದ: 910–960 ಮೀ.
- ರೇಷ್ಮೆ ನೂಲಿನ ಗುಣಮಟ್ಟ: 2ಎ–3ಎ
- ರೆಂಡಿಟ್ಟಾ : 6.0–6.5
- ಉತ್ತಮ ಟೆನಾಸಿಟಿ (>3.7 ಜಿ/ಡಿ) ಎಲಾಂಗೇಶನ್ (>22%) ಮತ್ತು ಕೊಹೆಶನ್ (>60 ಸ್ಟ್ರೋಕ್ಸ್) ಹೊಂದಿರುವುದರಿಂದ ಗೂಡುಗಳನ್ನು ಮಲ್ಟಿ ಎಂಡ್ ಮತ್ತು ಸ್ವಯಂ ಚಾಲಿತ ನೂಲು ಬಿಚ್ಚಾಣಿಕೆ ಯಂತ್ರಗಳಲ್ಲಿ ಉಪಯೋಗಿಸಬಹುದು

ಶಿಫಾರಸ್ಸು ಮಾಡಲಾಗಿರುವ ಪ್ರದೇಶಗಳು

ದಕ್ಷಿಣ ಭಾರತದ ಎಲ್ಲಾ ರಾಜ್ಯಗಳಿಗೆ, ವರ್ಷ ಪೂರ್ತಿ

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ರೇಷ್ಮೆ ಹುಳು ಸಾಕಾಣಿಕಾ ಕ್ರಮವನ್ನು ಅಳವಡಿಸಿಕೊಳ್ಳಿ

ರೇಷ್ಮೆ ಹುಳು ಸಾಕಾಣಿಕೆ: ಉತ್ಪಾದನೆ ಮತ್ತು ಸಂರಕ್ಷಣೆ

ಚಾಕಿ ಹುಳು ಸಾಕಾಣಿಕಾ ತಾಂತ್ರಿಕತೆ

- ಶಿಫಾರಸ್ಸು ಮಾಡಿದ ವರ್ಷ: 1997

ಪ್ರಮುಖ ಅಂಶಗಳು

- ಚಾಕಿ ಸಾಕಾಣಿಕೆಯು (ಎರಡನೇ ಜ್ವರದ ತನಕ ರೇಷ್ಮೆ ಹುಳು ಸಾಕಾಣಿಕೆ) ರೇಷ್ಮೆ ಬೆಳೆಯ ಯಶಸ್ಸನ್ನು ನಿರ್ಧರಿಸುವ ಒಂದು ನಿರ್ಣಾಯಕ ಹಂತವೆಂದು ಪರಿಗಣಿಸಲಾಗಿದೆ
- ಎಳೆಯ ರೇಷ್ಮೆ ಹುಳುಗಳಲ್ಲಿ ಗರಿಷ್ಠ ಬೆಳವಣಿಗೆ ಸಾಧಿಸಲು ಅಧಿಕ ತಾಪಮಾನ (27–28^{0} ಸೆಂ.ಗ್ರೇಡ್) ಮತ್ತು ಅಧಿಕ ಆರ್ದ್ರತೆ (80–90%) ಇರುವಂತೆ ನೋಡಿಕೊಳ್ಳಬೇಕು
- ಚಾಕಿ ಹುಳುಗಳು ಬಹಳ ಸುಲಭವಾಗಿ ರೋಗಗಳಿಗೆ ತುತ್ತಾಗುವುದರಿಂದ ಸೋಂಕು ನಿವಾರಣೆ ಹಾಗೂ ನೈರ್ಮಲ್ಯವನ್ನು ಕಾಪಾಡಿ ರೋಗಾಣುರಹಿತ ಪರಿಸ್ಥಿತಿಯನ್ನು ನಿರ್ವಹಿಸಬೇಕು

ಚಾಕಿ ಸಾಕಾಣಿಕೆ

- ಕಪ್ಪು ಚುಕ್ಕೆ ಹಂತದ ರೇಷ್ಮೆ ಮೊಟ್ಟೆಗಳನ್ನು 2–3 ಗಂಟೆಗಳ ತನಕ ಬೆಳಕಿಗೆ ಒಡ್ಡಿರಿ
- ಮೊಟ್ಟೆಯೊಡೆದು ಹೊರಬಂದ ಮರಿಹುಳುಗಳ ಮೇಲೆ ನೈಲಾನ್ ಬ್ರಷಿಂಗ್ ನೆಟ್ (2–4 ಮೆಷ್ ಗಾತ್ರ) ಹರಡಿ ಅದರ ಮೇಲೆ ಆಗಷ್ಟೇ ಕತ್ತರಿಸಿದ ಮೃದು ಚಾಕಿ ಎಲೆಗಳನ್ನು ಉದುರಿಸಿ ಪ್ಯಾರಾಫ್ಲಿನ್ ಕಾಗದದಿಂದ 3–4 ಗಂಟೆಗಳವರೆಗೆ ಮುಚ್ಚಿ ಇಡಿ. ನಂತರ ಹುಳು ಹಾಸಿಗೆಯನ್ನು ತಟ್ಟೆಯ ಮೇಲೆ ವರ್ಗಾಯಿಸಿ ಮತ್ತಷ್ಟು ಕತ್ತರಿಸಿದ ಸೊಪ್ಪನ್ನು ನೀಡಿ
- ಸೂಕ್ತ ವಿಧಾನಗಳನ್ನು ಅಳವಡಿಸಿಕೊಂಡು ಚಾಕಿ ಕೋಣೆಯಲ್ಲಿ ಸೂಕ್ತ ತಾಪಮಾನ ಮತ್ತು ಆರ್ದ್ರತೆಯನ್ನು ನಿರ್ವಹಿಸಿ
- ದಿನಕ್ಕೆ ಎರಡು ಬಾರಿ ಪೌಷ್ಟಿಕ ಎಲೆ ಒದಗಿಸಿ ಮತ್ತು ಚಾಕಿ ಹುಳುಗಳು ಬೆಳೆದಂತೆ ತಟ್ಟೆಗಳ ಸಂಖ್ಯೆಯನ್ನು ಹೆಚ್ಚಿಸಿ (ಪ್ರತಿ 100 ಮೊಟ್ಟೆಗಳಿಗೆ, ಎರಡನೇ ಹಂತದ ಕೊನೆಯಲ್ಲಿ 65 ಚದರ ಅಡಿ)

ಚಾಕಿ ಹುಳು ಸಾಕಾಣಿಕಾ ತಾಂತ್ರಿಕತೆ...

- ಪ್ರತೀ ಬಾರಿ ಸೊಪ್ಪು ಕೊಡುವ ಒಂದು ಗಂಟೆ ಮೊದಲು ಪ್ಯಾರಾಫ್ಲಿನ್ ಕಾಗದವನ್ನು ತೆಗೆದು ಗಾಳಿಯಾಡಲು ಅವಕಾಶ ಮಾಡಿಕೊಡಿ
- ಹುಳುಗಳು ಜ್ವರಕ್ಕೆ ಕುಳಿತಾಗ ಸುಟ್ಟ ಸುಣ್ಣವನ್ನು ಉದುರಿಸಿ ಹಾಗೂ ಜ್ವರದಿಂದ ಹೊರಬಂದಾಗ ಹಾಸಿಗೆ ಸೋಂಕು ನಿವಾರಕವನ್ನು ಉದುರಿಸಿ
- ಹುಳುಗಳು ಎರಡನೇ ಜ್ವರದಲ್ಲಿರುವಾಗ ಚಾಕಿ ದೃಢೀಕರಣವನ್ನು ಮಾಡಿ, ಸುಣ್ಣ ಉದುರಿಸಿ, ತಂಪಾದ ಹೊತ್ತಿನಲ್ಲಿ ರೈತರಿಗೆ ಸರಬರಾಜು ಮಾಡಿ

ಆರೋಗ್ಯಕರ ಹುಳುಗಳ ಅಭಿವೃದ್ಧಿಗೆ ಹಾಗೂ ಯಶಸ್ವಿ ರೇಷ್ಮೆ ಬೆಳೆ ಪಡೆಯಲು ವೈಜ್ಞಾನಿಕ ಚಾಕಿ ಸಾಕಣೆಯು ಅತ್ಯಗತ್ಯ

ಇದನ್ನು ಮಾಡಿ

- ಕಪ್ಪು ಚುಕ್ಕೆ ಹಂತದಲ್ಲಿ ಕಪ್ಪು ಪೆಟ್ಟಿಗೆ ವ್ಯವಸ್ಥೆ ಮಾಡಿ
- ಮೃದು, ರಸವತ್ತಾದ ಮತ್ತು ಪೌಷ್ಟಿಕ ಹಿಪ್ಪುನೇರಳೆ ಸೊಪ್ಪನ್ನು ಪಡೆಯಲು ವಿಶೇಷವಾಗಿ ಚಾಕಿ ತೋಟವನ್ನು ಬೆಳೆಸಿ
- ಚಾಕಿ ಸಾಕಾಣಿಕಾ ಕೇಂದ್ರವನ್ನು ಅಗತ್ಯ ಸಾಧನಗಳಾದ ಹುಳು ಸಾಕುವ ತಟ್ಟೆಗಳು, ಹೀಟರ್‌ಗಳು, ಆರ್ದ್ರಕಗಳು, ಸಿಂಪಡಣಾ ಯಂತ್ರಗಳು, ಹುಳು ವಿತರಣೆಗೆ ಅಗತ್ಯ ಸಾರಿಗೆ ವಾಹನಗಳು ಇತ್ಯಾದಿಗಳಿಂದ ಸಜ್ಜುಗೊಳಿಸಿ
- ಕಟ್ಟುನಿಟ್ಟಾದ ನೈರ್ಮಲ್ಯವನ್ನು ನಿರ್ವಹಿಸಿ
- 2ನೇ ಹಂತದ ಕೊನೆಯಲ್ಲಿ 100 ಮೊಟ್ಟೆಗಳಿಗೆ 65 ಚ.ಅಡಿ ಸ್ಥಳಾವಕಾಶ ಕಲ್ಪಿಸಿ

ಇದನ್ನು ಮಾಡಬೇಡಿ

- ಬಿಸಿಲಿನ ಸಮಯದಲ್ಲಿ ರೇಷ್ಮೆ ಮೊಟ್ಟೆಗಳನ್ನು ಸಾಗಿಸಬೇಡಿ
- ಚಾಕಿ ಮರಿಗಳು ಜ್ವರದಲ್ಲಿರುವಾಗ ಪ್ಯಾರಾಫ್ಲಿನ್ ಕಾಗದದಿಂದ ಮುಚ್ಚಬೇಡಿ

ಯಶಸ್ವೀ ರೇಷ್ಮೆ ಬೆಳೆಗೆ ಚಾಕಿ ದೃಢೀಕರಣ

- ಶಿಫಾರಸ್ಸು ಮಾಡಿದ ವರ್ಷ: 2002

ಪ್ರಮುಖ ಅಂಶಗಳು

- ಚಾಕಿ ವಿತರಣೆಗೂ ಮುನ್ನ ರೇಷ್ಮೆ ಹುಳುಗಳ ಆರೋಗ್ಯ ಮತ್ತು ಬೆಳವಣಿಗೆಯ ಸ್ಥಿತಿಯನ್ನು ದೃಢೀಕರಿಸುವುದು
- ರೈತರ ಮಟ್ಟದಲ್ಲಿ ಹೆಚ್ಚಿನ ಉತ್ಪಾದನೆ ಮತ್ತು ಉತ್ಪಾದಕತೆ ಸಾಧಿಸಲು ಚಾಕಿ ಸಾಕಾಣಿಕಾ ಕೇಂದ್ರ (ಸಿಆರ್‌ಸಿ) ಪರಿಕಲ್ಪನೆಯನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವುದು

ಘಟಕಗಳು

- ಚಾಕಿ ಹಂತದಲ್ಲಿ ನಷ್ಟವಾದ ಮರಿಗಳ ಸಂಖ್ಯೆಯ ಬಗ್ಗೆ ಪ್ರಮಾಣೀಕರಿಸುವುದು
- ಚಾಕಿ ಹುಳುಗಳಲ್ಲಿ ಏಕರೂಪತೆಯ ಬಗ್ಗೆ ಪ್ರಮಾಣೀಕರಿಸುವುದು
- ಚಾಕಿ ಹುಳುಗಳ ಬೆಳವಣಿಗೆಯ ಬಗ್ಗೆ ದೃಢೀಕರಿಸುವುದು
- ಚಾಕಿ ಹುಳುಗಳ ರೋಗಮುಕ್ತತೆಯ ಬಗ್ಗೆ ಪ್ರಮಾಣೀಕರಿಸುವುದು

ದೃಢೀಕರಿಸುವ ಅಂಶಗಳು

- ನಷ್ಟವಾದ ಹುಳುಗಳ ಸಂಖ್ಯೆ ಶೇ. 5 ಕ್ಕಿಂತ ಕಡಿಮೆ ಇರಬೇಕು
- ಕುಂಠಿತ ಬೆಳವಣಿಗೆಯ ಹುಳುಗಳ ಸಂಖ್ಯೆ ಶೇ. 15 ಕ್ಕಿಂತ ಕಡಿಮೆ ಇರಬೇಕು
- ಎರಡನೇ ಜ್ವರದಲ್ಲಿ 100 ಹುಳುಗಳ ತೂಕ ಬೈವೋಲ್ಟೈನ್ ನಲ್ಲಿ 3.4–3.8 ಗ್ರಾಂ ಹಾಗೂ ಮಿಶ್ರ ತಳಿಯಲ್ಲಿ 2.2–2.6 ಗ್ರಾಂ ಇರಬೇಕು
- ಗಂಟು ರೋಗ ಕಂಡುಬಂದಲ್ಲಿ ಹುಳುಗಳು ವಿತರಣೆಗೆ ಸೂಕ್ತವಲ್ಲ ಹಾಗೂ ಅವನ್ನು ತಿರಸ್ಕರಿಸಿ ಸುಡಬೇಕು. ತಕ್ಷಣವೇ ಚಾಕಿ ಸಾಕಾಣಿಕಾ ಕೇಂದ್ರವನ್ನು ಸೋಂಕು ನಿವಾರಣೆ ಮಾಡಬೇಕು

ಉದ್ದೇಶ

ಚಾಕಿ ಹುಳು ಬೆಳವಣಿಗೆ ಮತ್ತು ಆರೋಗ್ಯ ಸ್ಥಿತಿ ಪ್ರಮಾಣೀಕರಿಸಿ ಉತ್ತಮ ಗುಣಮಟ್ಟದ ಚಾಕಿ ಹುಳುಗಳನ್ನು ರೈತರಿಗೆ ವಿತರಿಸಲು ಅನುಕೂಲವಾಗುತ್ತದೆ

ಇದನ್ನು ಮಾಡಿ

- ಹುಳುಗಳು ಎರಡನೇ ಜ್ವರದಲ್ಲಿರುವಾಗ ಅಥವಾ ಎರಡನೇ ಜ್ವರದಿಂದ ಹೊರಬಂದ ಕೂಡಲೇ ದೃಢೀಕರಣ ಮಾಡಿ
- ಹುಳುಗಳನ್ನು ಪರೀಕ್ಷಿಸಲು ಉತ್ತಮ ಸೂಕ್ಷ್ಮದರ್ಶಕ ಯಂತ್ರವನ್ನು (600x) ಬಳಸಿ

ಇದನ್ನು ಮಾಡಬೇಡಿ

- ಚಾಕಿ ಹುಳುಗಳು ಮೊದಲನೇ ಹಂತದಲ್ಲಿರುವಾಗ ದೃಢೀಕರಿಸಬೇಡಿ
- ಗಂಟು ರೋಗ ಕಂಡು ಬಂದಲ್ಲಿ ಹುಳುಗಳನ್ನು ರೈತರಿಗೆ ವಿತರಿಸಬೇಡಿ

ನ್ಯೂಟ್ರಿಡ್–ಚಾಕಿ ಹುಳು ಸಾಕಾಣಿಕೆಗೆ ಅರೆ ಸಂಶ್ಲೇಷಿತ ಆಹಾರ

- ಶಿಫಾರಸ್ಸು ಮಾಡಿದ ವರ್ಷ: 2001

ಪ್ರಮುಖ ಅಂಶಗಳು

- ನ್ಯೂಟ್ರಿಡ್ ಆಹಾರವನ್ನು ಉಪಯೋಗಿಸಿ, ಚಾಕಿ ಸಾಕಾಣಿಕೆದಾರರು ತಾವು ಇಚ್ಛಿಸುವ ಯಾವುದೇ ಮಿಶ್ರ ತಳಿಯನ್ನು ಎರಡನೇ ಜ್ವರದ ತನಕ ಬೆಳೆಸಬಹುದು.
- ಹುಳುಗಳ ಬೆಳವಣಿಗೆಯ ಆರಂಭಿಕ ಹಂತಗಳಲ್ಲಿ ಸೋಂಕುಗಳನ್ನು ಕಡಿಮೆ ಮಾಡುವ ಪೌಷ್ಟಿಕಾಂಶ ಮತ್ತು ಆರೋಗ್ಯಕರ ಅಂಶಗಳನ್ನು ಹೊಂದಿದೆ.

ಉಪಯೋಗಗಳು

- ಪ್ರತಿ ಹಂತದಲ್ಲಿ ಎರಡು ಬಾರಿ ಆಹಾರ ನೀಡಿದರೆ ಸಾಕು
- ಹುಳು ಸಾಕಾಣಿಕಾ ಹಾಸಿಗೆಗಳನ್ನು ಶುಚಿಗೊಳಿಸುವ ಅಣತ್ಯವಿಲ್ಲ
- ಸೋಂಕುನಿವಾರಕ ಅಥವಾ ಸುಣ್ಣವನ್ನು ಬಳಸುವ ಅಗತ್ಯವಿಲ್ಲ
- ಚಾಕಿ ಸಾಕಾಣಿಕೆಯಲ್ಲಿ ಒಟ್ಟು 70 ಮಾನವ ಶಕ್ತಿಯ ವೆಚ್ಚವನ್ನು ಉಳಿಸುತ್ತದೆ

ಮೊದಲನೇ ಮತ್ತು ಎರಡನೇ ಹಂತದ ಚಾಕಿ ಹುಳು ಸಾಕಾಣಿಕೆಗೆ ಶಿಫಾರಸ್ಸು ಮಾಡಲಾಗಿದೆ

ಇದನ್ನು ಮಾಡಿ

- ಚಾಕಿ ಸಾಕಾಣಿಕೆಗೆ ಬೇಕಾದ ಉಷ್ಣಾಂಶ ಮತ್ತು ತೇವಾಂಶವನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಿ
- ಹುಳು ಹಾಸಿಗೆಯಲ್ಲಿ ತೇವಾಂಶವನ್ನು ಸಂರಕ್ಷಿಸಲು ತಟ್ಟೆಗಳನ್ನು ಒಂದರ ಮೇಲೆ ಒಂದರಂತೆ ಇಡಿ
- ಹುಳು ಹಾಸಿಗೆಯಲ್ಲಿ ಒಣ ಅವಸ್ಥೆಯನ್ನು ಕಾಪಾಡಿಕೊಳ್ಳಲು, ಜ್ವರದಲ್ಲಿರುವಾಗ ತಟ್ಟೆಗಳನ್ನು ಸ್ಪ್ಯಾಂಡ್‌ಗೆ ವರ್ಗಾಯಿಸಿ

ಇದನ್ನು ಮಾಡಬೇಡಿ

- ಹುಳುಗಳು ಜ್ವರದಲ್ಲಿರುವಾಗ ಸಾಕಾಣಿಕಾ ಹಾಸಿಗೆಯನ್ನು ತೇವವಾಗಿ ಇಟ್ಟುಕೊಳ್ಳಬೇಡಿ
- ನ್ಯೂಟ್ರಿಡ್‌ನ್ನು ಹುಳುಗಳ ಮೇಲೆ ಹಾಕಬೇಡಿ, ಬದಲಾಗಿ ನ್ಯೂಟ್ರಿಡ್ ಮೇಲೆ ಹುಳುಗಳನ್ನು ಹಾಕಿ
- ಹುಳುಗಳು ಆಹಾರವನ್ನು ತಿನ್ನುವ ಹಂತದಲ್ಲಿರುವಾಗ ತಟ್ಟೆಗಳನ್ನು ತೆರೆದು ಇಡಬೇಡಿ

ಪ್ರೌಢ ಹಂತದ ಹುಳು ಸಾಕಾಣಿಕಾ ತಾಂತ್ರಿಕತೆ

- ಶಿಫಾರಸ್ಸು ಮಾಡಿದ ವರ್ಷ: 1997

ಪ್ರಮುಖ ಅಂಶಗಳು

- ರೇಷ್ಮೆ ಹುಳುಗಳನ್ನು 3 ನೇ ಹಂತದಿಂದ ಗೂಡು ಕಟ್ಟುವ ತನಕ ಬೆಳೆಸುವುದನ್ನು ಪ್ರೌಢ ಹಂತದ ಹುಳು ಸಾಕಣೆ ಎಂದು ಕರೆಯುತ್ತಾರೆ
- ಪ್ರೌಢ ಹಂತದ ಹುಳುಗಳ ಸಾಕಾಣಿಕೆಯನ್ನು ಸೋಂಕು ನಿವಾರಣೆ ಮಾಡಲು ಅನುಕೂಲವಿರುವ ಹಾಗೂ ಉತ್ತಮ ಗಾಳಿಯ ಸಂಚಾರವಿರುವ ಪ್ರತ್ಯೇಕ ಮನೆಗಳಲ್ಲಿ ಸಾಕಬೇಕು
- ಊಜಿ ನೊಣದ ಪ್ರವೇಶವನ್ನು ತಡೆಯಲು ಹುಳು ಸಾಕಣೆ ಮನೆಯ ದ್ವಾರಕ್ಕೆ ಎದುರಾಗಿ ಒಂದು ಉಪಕೋಣೆ ಇರಬೇಕು.
- ಗೂಡು ಕಟ್ಟಿಸಲು ಹಾಗೂ ಕೊಯಿಲು ಮಾಡಲು ಹುಳು ಸಾಕಣೆ ಮನೆಯ ಪೂರ್ವ ಮತ್ತು ಪಶ್ಚಿಮ ಗೋಡೆಗಳ ಉದ್ದಕ್ಕೂ ಜಗುಲಿ ಇರಬೇಕು

ಪ್ರೌಢ ಹಂತದ ಹುಳು ಸಾಕಾಣಿಕೆ

- ಯಾವಾಗಲೂ ಚಾಕಿ ಕೇಂದ್ರಗಳಲ್ಲಿ 2ನೇ ಜ್ವರದವರೆಗೆ ಸಾಕಣೆ ಮಾಡಿದ ಹುಳುಗಳನ್ನೇ ಉಪಯೋಗಿಸಿ
- 2 ನೇ ಜ್ವರದ ನಂತರ ಸೊಪ್ಪು ನೀಡುವ 30 ನಿಮಿಷಗಳ ಮೊದಲು ಹುಳುಗಳನ್ನು ಹುಳು ಹಾಸಿಗೆಯ ಮೇಲೆ ಹರಡಿ ಸೋಂಕು ನಿವಾರಕವನ್ನು ಉದುರಿಸಿ
- ಪ್ರತಿ ದಿನ ಎರಡು ಬಾರಿ ತಾಜಾ ಸೊಪ್ಪನ್ನು (ಒರಟಾದ ಎಲೆಗಳು) ನೀಡಿ.
- ಸೂಕ್ತ ವಿಧಾನಗಳನ್ನು ಅಳವಡಿಸಿಕೊಂಡು ಹುಳು ಸಾಕಣೆ ಮನೆಯಲ್ಲಿ ತಾಪಮಾನ (24–26 ಸೆಂಟಿ ಗ್ರೇಡ್) ಮತ್ತು ಆರ್ದ್ರತೆ (75–80%) ನಿರ್ವಹಿಸಿ
- ಹುಳುಗಳು ಜ್ವರಕ್ಕೆ ಕುಳಿತಾಗ ಸುಟ್ಟ ಸುಣ್ಣವನ್ನು ಉದುರಿಸಿ ಹಾಗೂ ಜ್ವರದಿಂದ ಹೊರಬಂದಾಗ ಹಾಸಿಗೆ ಸೋಂಕು ನಿವಾರಕವನ್ನು ಉದುರಿಸಿ
- ಹುಳುಗಳ ಸೂಕ್ತ ಬೆಳವಣಿಗೆಗೆ ಸಾಕಷ್ಟು ಸ್ಥಳಾವಕಾಶ ಒದಗಿಸಿ. ರೆಂಬೆ ಸಾಕಾಣಿಕೆ ಪದ್ಧತಿಯಲ್ಲಿ ಒಂದು ಮೊಟ್ಟೆಗೆ 3 ಚ.ಅಡಿ ಹಾಗೂ ತಟ್ಟೆ ಸಾಕಾಣಿಕೆ ಪದ್ಧತಿಯಲ್ಲಿ ಒಂದು ಮೊಟ್ಟೆಗೆ 2 ಚ.ಅಡಿಯಂತೆ ಸ್ಥಳಾವಕಾಶ ಕಲ್ಪಿಸಿ

ಪ್ರೌಢ ಹಂತದ ಹುಳು ಸಾಕಾಣಿಕಾ ತಾಂತ್ರಿಕತೆ....

- 100 ಮೊಟ್ಟೆ ಸಾಕಾಣಿಕೆಗೆ 700–800 ಚ.ಅಡಿ ಸ್ಥಳಾವಕಾಶ ಕಲ್ಪಿಸಿ
- ನೀರಾವರಿ ಹಿಪ್ಪುನೇರಳೆ ತೋಟದಿಂದ ಗುಣಮಟ್ಟದ ಸೊಪ್ಪು ಇರುವ ರೆಂಬೆಗಳನ್ನು ಸಾಕಷ್ಟು ನೀಡಿ

ರೆಂಬೆ ಪದ್ಧತಿಯಲ್ಲಿ ಆಹಾರ ನೀಡುವಿಕೆ ಹಾಗು ಶೆಲ್ಫ್(ಅಂತಸ್ತು)ಗಳಲ್ಲಿ ಸಾಕಾಣಿಕೆಯಿಂದ ರೇಷ್ಮೆ ಗೂಡಿನ ಇಳುವರಿ ಮತ್ತು ಗುಣಮಟ್ಟ ಸುಧಾರಿಸುವುದಲ್ಲದೆ ಉತ್ಪಾದನೆಯ ವೆಚ್ಚ ಮತ್ತು ಶ್ರಮ ಕಡಿಮೆಯಾಗುತ್ತದೆ

ಇದನ್ನು ಮಾಡಿ

- ಹರಿತವಾದ ಗರಗಸ ಅಥವಾ ಬುಷ್ ಕಟರ್ ಉಪಯೋಗಿಸಿ ದಿನದ ತಂಪಾದ ಹೊತ್ತಿನಲ್ಲಿ ಸೊಪ್ಪನ್ನು ಕೊಯಿಲು ಮಾಡಿ
- ರೆಂಬೆಗಳನ್ನು ಹೊರೆ ಮಾಡಿ, ಒದ್ದೆ ಮಾಡಿದ ಗೋಣಿ ತಾಟಿನಲ್ಲಿ ಸುತ್ತಿ ನೆಟ್ಟಗೆ ನಿಲ್ಲಿಸಿ
- ರೆಂಬೆ ಪದ್ಧತಿಯ ಹುಳು ಸಾಕಾಣಿಕೆಯು ಕಾರ್ಮಿಕ ವೆಚ್ಚ ಹಾಗೂ ಸಮಯ ಉಳಿಸುವುದಲ್ಲದೆ ಸೋಂಕು ತಗಲುವ ಸಾಧ್ಯತೆ ತುಂಬಾ ಕಡಿಮೆ ಇರುತ್ತದೆ
- ಚದರ ಅಡಿಗೆ 50–70 ಹುಳುಗಳಂತೆ ಅವಕಾಶ ಕಲ್ಪಿಸಿ ಅಸಮಾನ/ರೋಗ ತಗುಲಿರುವ ಹುಳುಗಳನ್ನು ಸಂಗ್ರಹಿಸಿ ನಾಶ ಮಾಡಿ
- ರೋಗಗಳನ್ನು ತಡೆಗಟ್ಟಲು ಹಾಗು ನೈರ್ಮಲ್ಯತೆ ಕಾಪಾಡಲು ಸರಿಯಾದ ಹಾಸಿಗೆ ಸೋಂಕು ನಿವಾರಕಗಳನ್ನು ಉಪಯೋಗಿಸಿ
- ಶೇ.40ಕ್ಕಿಂತ ಹೆಚ್ಚು ಹುಳುಗಳು ಬಲಿತ ನಂತರ ಸೂಕ್ತವಾದ ಚಂದ್ರಿಕೆಗಳನ್ನು ಉಪಯೋಗಿಸಿ ಗೂಡು ಕಟ್ಟಿಸಿ

ಇದನ್ನು ಮಾಡಬೇಡಿ

- ಹುಳುಗಳು ಸೊಪ್ಪು ತಿನ್ನುತ್ತಿರುವಾಗ ಸೋಂಕು ನಿವಾರಕಗಳನ್ನು ಉದುರಿಸಬೇಡಿ
- ಸೋಂಕು ನಿವಾರಕಗಳನ್ನು ಉದುರಿಸಿದ ನಂತರ ಸೊಪ್ಪು ನೀಡುವುದನ್ನು ತಡ ಮಾಡಬೇಡಿ

ಗೂಡು ಕಟ್ಟಿಸುವ ಮತ್ತು ಕೊಯಿಲು ಮಾಡುವ ತಾಂತ್ರಿಕತೆ

- ಶಿಫಾರಸ್ಸು ಮಾಡಿದ ವರ್ಷ: 1997

ಪ್ರಮುಖ ಅಂಶಗಳು

- ಉತ್ತಮ ಗುಣಮಟ್ಟದ ಗೂಡುಗಳನ್ನು ಪಡೆಯಲು ಗೂಡು ಕಟ್ಟಿಸುವ ಹಜಾರದಲ್ಲಿ 20° ಸೆಂಟಿ ಗ್ರೇಡ್ ತಾಪಮಾನ, 60–65% ಆರ್ದ್ರತೆ, ಉತ್ತಮ ಗಾಳಿ ಸಂಚಾರ ಮತ್ತು ಒಂದೇ ಸಮನಾದ ಬೆಳಕು ಅವಶ್ಯಕ
- ಪ್ರೌಢ ಹುಳುಗಳನ್ನು ಮಾತ್ರ ಗೂಡು ಕಟ್ಟಿಸಲು ಬಳಸಿ. ಕಾಯಿ ಗೂಡು ಮತ್ತು ಅತಿಯಾಗಿ ಬಲಿತ ಹುಳುಗಳಿಂದ ದೋಷಯುಕ್ತ ಮತ್ತು ದೋಷಪೂರಿತ ಗೂಡುಗಳು ಉಂಟಾಗುತ್ತವೆ
- ಪ್ರಸ್ತುತ ಬಿದಿರಿನ ಚಂದ್ರಿಕೆಗಳು, ಮಡಚಿಡಬಹುದಾದ ಪ್ಲಾಸ್ಟಿಕ್ ಚಂದ್ರಿಕೆಗಳು ಹಾಗೂ ತಿರುಗುವ (ರೋಟರಿ) ಚಂದ್ರಿಕೆಗಳು ಉಪಯೋಗದಲ್ಲಿವೆ
- ರೋಟರಿ ಚಂದ್ರಿಕೆಗಳು ಏಕರೂಪದ ಗಾತ್ರ ಮತ್ತು ಹೆಚ್ಚು ನೂಲು ಒದಗಿಸುವ ಗೂಡುಗಳ ಉತ್ಪಾದನೆಗೆ ಸೂಕ್ತ
- ಬಿದಿರಿನ ಚಂದ್ರಿಕೆಗಳಲ್ಲಿ ಗೂಡು ಕಟ್ಟಿಸಿದರೆ ಹೆಚ್ಚಿನ ದೋಷಯುಕ್ತ ಹಾಗೂ ಗಾತ್ರ ಮತ್ತು ಆಕಾರದಲ್ಲಿ ಹೆಚ್ಚು ವ್ಯತ್ಯಾಸಗಳನ್ನು ಹೊಂದಿರುವ ಗೂಡುಗಳು ದೊರಕುತ್ತವೆ
- ಮಡಚಿಡಬಹುದಾದ ಪ್ಲಾಸ್ಟಿಕ್ ಚಂದ್ರಿಕೆಗಳಲ್ಲಿ ರೇಷ್ಮೆ ಹುಳುಗಳು ತಾವಾಗಿಯೇ ಗೂಡು ಕಟ್ಟಲು ಹತ್ತಿಕೊಳ್ಳುವುದರಿಂದ ಖರ್ಚು ಉಳಿಯುತ್ತದೆ
- ಗೂಡುಗಳ ಗುಣಮಟ್ಟದಲ್ಲಿ ರೋಟರಿ ಚಂದ್ರಿಕೆಗಳಲ್ಲಿ ಬೆಳೆದ ಗೂಡುಗಳಿಗಿಂತ ಮಡಚಿಡಬಹುದಾದ ಪ್ಲಾಸ್ಟಿಕ್ ಚಂದ್ರಿಕೆಗಳಲ್ಲಿ ಬೆಳೆಸಿದ ಗೂಡುಗಳು ಕೀಳುಮಟ್ಟದ್ದಾಗಿರುತ್ತವೆ
- ಕೋಶ ಪರಿವರ್ತನೆ ಆದ ನಂತರ (ಹಣ್ಣಾದ 6ನೇ ದಿನ) ಗೂಡನ್ನು ಕೈಯಿಂದ ಅಥವಾ ಗೂಡು ಬಿಡಿಸುವ ಯಂತ್ರದಿಂದ ಬಿಡಿಸಬೇಕು

ಗೂಡು ಕಟ್ಟಿಸುವ ಮತ್ತು ಕೊಯಿಲು ಮಾಡುವ ತಾಂತ್ರಿಕತೆ...

ಸೂಕ್ತ ರೀತಿಯಲ್ಲಿ ಗೂಡು ಕಟ್ಟಿಸುವಿಕೆಯಿಂದ ಹಾಗೂ ಕೊಯಿಲಿನಿಂದ ಅಧಿಕ ಲಾಭ ದೊರಕುತ್ತದೆ

ಇದನ್ನು ಮಾಡಿ

- ಗುಣಮಟ್ಟದ ಗೂಡನ್ನು ಉತ್ಪಾದಿಸಲು ಗೂಡು ಕಟ್ಟಿಸುವಾಗ 25 ಸೆಂಟಿ ಗ್ರೇಡ್ ಹಾಗು 65% ಆರ್ದ್ರತೆ ಯನ್ನು ನಿರ್ವಹಿಸಬೇಕು
- ಗೂಡು ಕಟ್ಟಿಸುವ ಹಜಾರದಲ್ಲಿ ಉತ್ತಮ ಗಾಳಿ ಸಂಚಾರ ಮತ್ತು ಏಕ ರೂಪದ ಬೆಳಕು ಒದಗಿಸಬೇಕು
- ತ್ವರಿತ ಹಾಗೂ ಏಕರೂಪತೆಯಲ್ಲಿ ಹಣ್ಣಾಗಲು ಜ್ವರದ ಪ್ರಚೋದಕವನ್ನು (ಸಂಪೂರ್ಣ) ಉಪಯೋಗಿಸಬಹುದು
- ಗೂಡಿನಿಂದ ಗುಂಜನ್ನು ಬಿಡಿಸಲು ಗುಂಜು ತೆಗೆಯುವ ಯಂತ್ರವನ್ನು ಉಪಯೋಗಿಸಿ

ಇದನ್ನು ಮಾಡಬೇಡಿ

- ಗೂಡು ಕಟ್ಟುವಾಗ ಚಂದ್ರಿಕೆಗಳನ್ನು ಸೂರ್ಯನ ಬೆಳಕಿಗೆ ನೇರವಾಗಿ ಒಡ್ಡಬೇಡಿ
- ಬಿದಿರಿನ ಚಂದ್ರಿಕೆಗಳನ್ನು ಒಂದರ ಮೇಲೆ ಒಂದರಂತೆ ಗುಪ್ಪೆ ಮಾಡಬೇಡಿ
- ಪೂರ್ಣವಾಗಿ ಕೋಶವಾಗದ ಹೊರತು ಗೂಡುಗಳನ್ನು ಬಿಡಿಸಬೇಡಿ



ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಬ್ಲೀಚಿಂಗ್ ಪುಡಿ ಉಪಯೋಗಿಸಿ ಸೋಂಕು ನಿವಾರಣೆ ಮತ್ತು ನೈರ್ಮಲ್ಯತೆ

- ಶಿಫಾರಸ್ಸು ಮಾಡಿದ ವರ್ಷ: 1992

ಪ್ರಮುಖ ಅಂಶಗಳು

- ಬ್ಲೀಚಿಂಗ್ ಪುಡಿ ರೇಷ್ಮೆ ಹುಳುವಿನ ಎಲ್ಲಾ ರೋಗಾಣುಗಳ ಪರಿಣಾಮಕಾರಿ ಸೋಂಕು ನಿವಾರಕ
- ಬೆಲೆ ಹೆಚ್ಚೇನಿಲ್ಲದ ಕ್ಲೋರಿನ್ ಆಧಾರಿತ ಸೋಂಕು ನಿವಾರಕ
- ಶೇ. 2 ರ ಬ್ಲೀಚಿಂಗ್ ಪುಡಿಯನ್ನು ಶೇ. 0.3ರ ಸುಟ್ಟ ಸುಣ್ಣದೊಡನೆ ಮಿಶ್ರಣ ಮಾಡಿ ಉಪಯೋಗಿಸಬೇಕು

ತಯಾರಿಕೆಯ ವಿಧಾನ

- 100 ಲೀ. ಸೋಂಕು ನಿವಾರಕ ದ್ರಾವಣವನ್ನು ತಯಾರಿಸಲು 2 ಕೆ. ಜಿ. ಬ್ಲೀಚಿಂಗ್ ಪೌಡರ್ ಮತ್ತು 300 ಗ್ರಾಂ. ಸುಟ್ಟ ಸುಣ್ಣದ ಪುಡಿಯನ್ನು 100 ಲೀ. ನೀರಿನಲ್ಲಿ ಬೆರೆಸಿ

- ಹುಳು ಸಾಕಾಣಿಕೆ ಮನೆ, ಸಲಕರಣೆಗಳು ಮತ್ತು ಮನೆಯ ಸುತ್ತ ಮುತ್ತ ಸೋಂಕು ನಿವಾರಣೆ
- ವೈಯುಕ್ತಿಕ ಮತ್ತು ಹುಳುಸಾಕಾಣಿಕೆಯಲ್ಲಿ ನೈರ್ಮಲ್ಯ ನಿರ್ವಹಣೆ

ವೆಚ್ಚ: 100 ಮೊಟ್ಟೆ ಸಾಕಾಣಿಕೆಗೆ ` 140/-

ಖರ್ಚು ಲಾಭದ ಅನುಪಾತ: 1:7

ಇದನ್ನು ಮಾಡಿ

- ಗುಣಮಟ್ಟದ ಬ್ಲೀಚಿಂಗ್ ಪುಡಿ (30–32% ಕ್ಲೋರಿನ್ ಲಭ್ಯವಿರುವ) ಬಳಸಿ
- ಬ್ಲೀಚಿಂಗ್ ಪುಡಿಯ ಜೊತೆ ಮಿಶ್ರಣ ಮಾಡಲು ತಾಜಾ ಸುಣ್ಣದ ಪುಡಿ ಉಪಯೋಗಿಸಿ
- ಸಿಂಪಡಿಸುವಾಗ ಮುಖವಾಡ ಬಳಸಿ

ಇದನ್ನು ಮಾಡಬೇಡಿ

- ದ್ರಾವಣನ್ನು ಬಿಸಿಲಿನಲ್ಲಿ ತಯಾರಿಸಬೇಡಿ
- ದ್ರಾವಣವನ್ನು ಲೋಹದ ವಸ್ತುಗಳ ಮೇಲೆ ಸಿಂಪಡಿಸಬೇಡಿ
- ಮಣ್ಣು ಮಿಶ್ರಿತ ಮತ್ತು ಅಶುದ್ಧ ನೀರನ್ನು ಉಪಯೋಗಿಸಬೇಡಿ
- ಹಳೆಯದಾದ ಬ್ಲೀಚಿಂಗ್ ಪುಡಿ ಬಳಸಬೇಡಿ

ರೈತರು ಹುಳು ಸಾಕಾಣಿಕೆಯಲ್ಲಿ ಕ್ಲೋರಿನ್-ಡೈ-ಆಕ್ಸೈಡ್ (ಸ್ಯಾನಿಟೆಕ್/ಸೆರಿಕ್ಲೋರ್) ಉಪಯೋಗಿಸಿ ಸೋಂಕು ನಿವಾರಣೆ ಮತ್ತು ನೈರ್ಮಲ್ಯತೆ

- ಅಭಿವೃದ್ಧಿಪಡಿಸಿದ ವರ್ಷ: 1996

ಪ್ರಮುಖ ಅಂಶಗಳು

- ಕ್ಲೋರಿನ್-ಡೈ-ಆಕ್ಸೈಡ್ ವಾಣಿಜ್ಯವಾಗಿ ಸ್ಯಾನಿಟೆಕ್/ಸೆರಿಕ್ಲೋರ್ (20000 ಪಿ.ಪಿ.ಎಮ್. ನಲ್ಲಿ) ಎಂಬ ಹೆಸರಿನಲ್ಲಿ ಲಭ್ಯವಿದೆ
- ಇದು ಹೆಚ್ಚು ರೋಗಾಣುಕಾರಕ ಆಗಿದ್ದು ಲೋಹಗಳ ಮೇಲೆ ಮತ್ತು ಮಾನವನ ಆರೋಗ್ಯದ ಮೇಲೆ ಹೆಚ್ಚು ದುಷ್ಪರಿಣಾಮ ಬೀರುವುದಿಲ್ಲ

100 ಲೀಟರ್ 500 ಪಿ.ಪಿ.ಎಮ್. ಕ್ಲೋರಿನ್ ಡೈ ಆಕ್ಸೈಡ್ ತಯಾರಿಕೆ

- ಆಕ್ಟಿವೇಟರ್ ಹರಳುಗಳನ್ನು ಒಂದು ಬಕೆಟ್‌ನಲ್ಲಿ ತೆಗೆದುಕೊಳ್ಳಿ
- 2.5 ಲೀಟರ್ ಸ್ಯಾನಿಟೆಕ್/ಸೆರಿಕ್ಲೋರ್ ದ್ರಾವಣವನ್ನು ಇದಕ್ಕೆ ಬೆರೆಸಿ
- 10 ನಿಮಿಷಗಳ ಕಾಲ ಹಾಗೆಯೇ ಬಿಡಿ
- ಸಕ್ರಿಯ ಸ್ಯಾನಿಟೆಕ್/ಸೆರಿಕ್ಲೋರ್ ದ್ರಾವಣವನ್ನು 97.5 ಲೀಟರ್ ನೀರಿನಲ್ಲಿ ಬೆರೆಸಿ
- 500 ಗ್ರಾಂ ಸುಣ್ಣದ ಪುಡಿಯನ್ನು ಬೆರೆಸಿ
- ಚೆನ್ನಾಗಿ ಮಿಶ್ರಣ ಮಾಡಿ ಸೋಂಕು ನಿವಾರಣೆಗೆ ಬಳಸಿ

- ಹುಳು ಸಾಕಾಣಿಕೆ ಮನೆ, ಸಲಕರಣೆಗಳು ಮತ್ತು ಮನೆಯ ಸುತ್ತ-ಮುತ್ತ ಸೋಂಕು ನಿವಾರಣೆಗೆ
- ವೈಯುಕ್ತಿಕ ಮತ್ತು ಹುಳು ಸಾಕಾಣಿಕೆಯಲ್ಲಿ ನೈರ್ಮಲ್ಯತೆಯ ನಿರ್ವಹಣೆ

- ವೆಚ್ಚ: 100 ಮೊಟ್ಟೆ ಸಾಕಾಣಿಕೆಗೆ ` 500/-
- ಖರ್ಚು ಲಾಭದ ಅನುಪಾತ: 1:8

ಇದನ್ನು ಮಾಡಿ

- ಆಕ್ಟಿವೇಟರ್ ಹರಳುಗಳಿಗೆ ಸ್ಯಾನಿಟೆಕ್ ಸೇರಿಸಿದಾಗ ಹಳದಿ ಬಣ್ಣಕ್ಕೆ ತಿರುಗುವುದನ್ನು ಖಚಿತಪಡಿಸಿಕೊಳ್ಳಿ
- ಶಿಫಾರಸ್ಸು ಮಾಡಿರುವಷ್ಟೇ ಪ್ರಮಾಣದ ಆಕ್ಟಿವೇಟರ್ ಹರಳುಗಳನ್ನು ಉಪಯೋಗಿಸಿ
- ಸಿಂಪಡಿಸುವಾಗ ಮುಖವಾಡ ಧರಿಸಿ

ಇದನ್ನು ಮಾಡಬೇಡಿ

- ದ್ರಾವಣನ್ನು ಬಿಸಿಲಿನಲ್ಲಿ ತಯಾರಿಸಬೇಡಿ
- ಸ್ಯಾನಿಟೆಕ್/ಸೆರಿಕ್ಲೋರ್ ದ್ರಾವಣ, ಆಕ್ಟಿವೇಟರ್ ಹರಳು ಮತ್ತು ಸುಣ್ಣದ ಪುಡಿಯನ್ನು ಒಟ್ಟಿಗೆ ಮಿಶ್ರಣ ಮಾಡಬೇಡಿ
- ಕ್ಲೋರಿನ್ ಅಂಶದ ಬಿಡುಗಡೆಯ ಮುನ್ನವೇ ಘಟಕಗಳನ್ನು ನೀರಿಗೆ ಹಾಕಬೇಡಿ
- ಮಣ್ಣು ಮಿಶ್ರಿತ ಮತ್ತು ಅಶುದ್ಧ ನೀರನ್ನು ಉಪಯೋಗಿಸಬೇಡಿ



ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಅಸ್ತ್ರ ಉಪಯೋಗಿಸಿ ಸೋಂಕು ನಿವಾರಣೆ ಮತ್ತು ನೈರ್ಮಲ್ಯತೆ

- ಅಭಿವೃದ್ಧಿಪಡಿಸಿದ ವರ್ಷ: 2009

ಪ್ರಮುಖ ಅಂಶಗಳು

- ರೇಷ್ಮೆ ಕೃಷಿಯ ಒಂದು ಸಾಮಾನ್ಯ ಸೋಂಕು ನಿವಾರಕ
- ಶೇ. 0.05 ಸಾಂದ್ರತೆಯಲ್ಲಿ ರೇಷ್ಮೆ ಹುಳುವಿನ ಎಲ್ಲಾ ರೋಗಾಣುಗಳಿಗೂ ಪರಿಣಾಮಕಾರಿ

ತಯಾರಿಕೆಯ ವಿಧಾನ

- 0.05% ಸಾಂದ್ರತೆಯ ಸೋಂಕು ನಿವಾರಕ ದ್ರಾವಣವನ್ನು ತಯಾರಿಸಲು 50 ಗ್ರಾಂ ಅಸ್ತ್ರ ಪುಡಿಯನ್ನು 100 ಲೀಟರ್ ನೀರಿನಲ್ಲಿ ಬೆರೆಸಿ ಚೆನ್ನಾಗಿ ಕಲಕಿ
- ಎರಡು ಗಂಟೆಗಳ ಕಾಲ ಹಾಗೆಯೇ ಬಿಟ್ಟು ನಂತರ ಸಿಂಪಡಣೆ ಮಾಡಲು ಉಪಯೋಗಿಸಿ

- ಹುಳು ಸಾಕಾಣಿಕೆ ಮನೆ, ಸಲಕರಣೆಗಳು ಮತ್ತು ಮನೆಯ ಸುತ್ತ ಮುತ್ತ ಸೋಂಕು ನಿವಾರಣೆ
- ವೈಯುಕ್ತಿಕ ಮತ್ತು ಹುಳುಸಾಕಾಣಿಕೆಯಲ್ಲಿ ನೈರ್ಮಲ್ಯ ನಿರ್ವಹಣೆ

- ವೆಚ್ಚ: 100 ಮೊಟ್ಟೆ ಸಾಕಾಣಿಕೆಗೆ ` 200/-
- ಖರ್ಚು ಲಾಭದ ಅನುಪಾತ: 1:9

ಇದನ್ನು ಮಾಡಿ

- ಸೋಂಕು ನಿವಾರಕ ದ್ರಾವಣವನ್ನು ಅಸ್ತ್ರ ಪೌಡರ್ ಬೆರೆಸಿದ 2 ಗಂಟೆಗಳ ನಂತರವೇ ಉಪಯೋಗಿಸಿ
- ಸಿಂಪಡಿಸುವಾಗ ಮುಖವಾಡ ಧರಿಸಿ

ಇದನ್ನು ಮಾಡಬೇಡಿ

- ಮಣ್ಣು ಮಿಶ್ರಿತ ಮತ್ತು ಅಶುದ್ಧ ನೀರನ್ನು ಉಪಯೋಗಿಸಬೇಡಿ

ರಿಫ್ಲೆಹಳು ಸಾಕಾಣಿಕೆಯಲ್ಲಿ ಸ್ಯಾನಿಟೆಕ್ ಸೂಪರ್ (ಕ್ಲೋರಿನ್-ಡೈ-ಆಕ್ಸೈಡ್) ಉಪಯೋಗಿಸಿ ಸೋಂಕು ನಿವಾರಣೆಮತ್ತು ನೈರ್ಮಲ್ಯತೆ

- ಅಭಿವೃದ್ಧಿಪಡಿಸಿದ ವರ್ಷ: 2014

ಪ್ರಮುಖ ಅಂಶಗಳು

- ಕ್ಲೋರಿನ್-ಡೈ-ಆಕ್ಸೈಡ್ ವಾಣಿಜ್ಯವಾಗಿ ಸ್ಯಾನಿಟೆಕ್ ಸೂಪರ್ (4,000ಪಿ.ಪಿ.ಎಮ್.ನಲ್ಲಿ) ಎಂಬ ಹೆಸರಿನಲ್ಲಿ ಲಭ್ಯವಿದೆ
- ಇದು ಹೆಚ್ಚು ರೋಗಾಣುಕಾರಕ ಆಗಿದ್ದು ಲೋಹಗಳ ಮೇಲೆ ಮತ್ತು ಮಾನವನ ಆರೋಗ್ಯದ ಮೇಲೆ ಹೆಚ್ಚು ದುಷ್ಪರಿಣಾಮ ಬೀರುವುದಿಲ್ಲ
- 0.5% ಸುಟ್ಟ ಸುಣ್ಣದೊಂದಿಗೆ 1.25% ಸ್ಯಾನಿಟೆಕ್ ಸೂಪರ್ (500 ಪಿ.ಪಿ.ಎಮ್. ಕ್ಲೋರಿನ್ ಡೈ ಆಕ್ಸೈಡ್) ಬೆರೆಸಿ ಚದರ ಮೀಟರ್‌ಗೆ 1.5 ಲೀ. ನಂತೆ ಸಿಂಪಡಣೆ ಮಾಡಿ

100 ಲೀಟರ್ ಸ್ಯಾನಿಟೆಕ್ ಸೂಪರ್ ತಯಾರಿಸುವ ವಿಧಾನ

- 125 ಗ್ರಾಂ. ಆಕ್ಟಿವೇಟರ್ ಹರಳುಗಳನ್ನು ಒಂದು ಬಕೆಟ್/ಬೇಸಿನ್‌ನಲ್ಲಿ ತೆಗೆದುಕೊಳ್ಳಿ
- ಇದಕ್ಕೆ 1.25 ಲೀಟರ್ ಸ್ಯಾನಿಟೆಕ್ ಸೂಪರ್ ದ್ರಾವಣವನ್ನು ಬೆರೆಸಿ
- 10 ನಿಮಿಷಗಳ ಕಾಲ ಹಾಗೆಯೇ ಇಡಿ
- ಸಕ್ರಿಯ ದ್ರಾವಣವನ್ನು 98.75 ಲೀಟರ್ ನೀರಿನಲ್ಲಿ ಬೆರೆಸಿ
- 500 ಗ್ರಾಂ. ಸುಣ್ಣದ ಪುಡಿಯನ್ನು ಬೆರೆಸಿ
- ಚೆನ್ನಾಗಿ ಮಿಶ್ರಣ ಮಾಡಿ ಸೋಂಕು ನಿವಾರಣೆಗೆ ಬಳಸಿ

- ಹುಳು ಸಾಕಾಣಿಕೆ ಮನೆ, ಸಲಕರಣೆಗಳು ಮತ್ತು ಮನೆಯ ಸುತ್ತ ಮುತ್ತ ಸೋಂಕು ನಿವಾರಣೆ
- ವೈಯುಕ್ತಿಕ ಮತ್ತು ಹುಳುಸಾಕಾಣಿಕೆಯಲ್ಲಿ ನೈರ್ಮಲ್ಯತೆ ನಿರ್ವಹಣೆ

- ವೆಚ್ಚ : 100 ಮೊಟ್ಟೆ ಸಾಕಾಣಿಕೆಗೆ ` 350/-
- ಖರ್ಚು ಲಾಭದ ಅನುಪಾತ: 1:8

ಇದನ್ನು ಮಾಡಿ

- ಆಕ್ಟಿವೇಟರ್ ಹರಳುಗಳಿಗೆ ಸ್ಯಾನಿಟೆಕ್ ಸೇರಿಸಿದಾಗ ಹಳದಿ ಬಣ್ಣಕ್ಕೆ ತಿರುಗುವುದನ್ನು ಖಚಿತಪಡಿಸಿಕೊಳ್ಳಿ
- ಶಿಫಾರಸ್ಸು ಮಾಡಿರುವಷ್ಟೇ ಪ್ರಮಾಣದ ಆಕ್ಟಿವೇಟರ್ ಹರಳುಗಳನ್ನು ಉಪಯೋಗಿಸಿ
- ಸಿಂಪಡಿಸುವಾಗ ಮುಖವಾಡ ಧರಿಸಿ

ಇದನ್ನು ಮಾಡಬೇಡಿ

- ದ್ರಾವಣನ್ನು ಬಿಸಿಲಿನಲ್ಲಿ ತಯಾರಿಸಬೇಡಿ
- ಸ್ಯಾನಿಟೆಕ್ ಸೂಪರ್ ದ್ರಾವಣ, ಆಕ್ಟಿವೇಟರ್ ಹರಳು ಮತ್ತು ಸುಣ್ಣದ ಪುಡಿಯನ್ನು ಒಟ್ಟಿಗೆ ಮಿಶ್ರಣ ಮಾಡಬೇಡಿ

ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಸೆರಿಫ್ಲಿಟ್ ಉಪಯೋಗಿಸಿ ಸೋಂಕು ನಿವಾರಣೆ ಮತ್ತು ನೈರ್ಮಲ್ಯತೆ

- ಅಭಿವೃದ್ಧಿಪಡಿಸಿದ ವರ್ಷ: 2015

ಪ್ರಮುಖ ಅಂಶಗಳು

- ಬೇರೆ ಯಾವುದೇ ಸೋಂಕು ನಿವಾರಕದ ಹಾಗೆಯೇ ಸೆರಿಫ್ಲಿಟ್ ಸಹ ರೇಷ್ಮೆ ಹುಳುವಿನ ಎಲ್ಲಾ ಸಾಮಾನ್ಯ ರೋಗಾಣುಗಳ ವಿರುದ್ಧ ಪರಿಣಾಮಕಾರಿಯಾಗಿದೆ
- ಇದು ಎಲ್ಲಾ ರೀತಿಯ ಹುಳು ಸಾಕಾಣಿಕೆ ಮನೆಗಳಿಗೆ ಮತ್ತು ಎಲ್ಲಾ ರೀತಿಯ ವಾತಾವರಣಗಳಿಗೆ ಸೂಕ್ತ ಹಾಗೂ ಏರ್ ಟೈಟ್ ಪರಿಸ್ಥಿತಿಯ ಅವಶ್ಯಕತೆ ಇರುವುದಿಲ್ಲ
- ಇದು ಹೆಚ್ಚು ರೋಗಾಣುಕಾರಕ ಆಗಿದ್ದು ಲೋಹಗಳ ಮೇಲೆ ಮತ್ತು ಮಾನವನ ಆರೋಗ್ಯದ ಮೇಲೆ ಹೆಚ್ಚು ದುಷ್ಪರಿಣಾಮ ಬೀರುವುದಿಲ್ಲ
- 0.2% ಸೆರಿಫ್ಲಿಟ್ ದ್ರಾವಣವನ್ನು ಹುಳುಸಾಕಾಣಿಕೆ ಮನೆ ಮತ್ತು ಸಲಕರಣೆಗಳನ್ನು ಸೋಂಕು ನಿವಾರಣೆ ಮಾಡಲು ಬಳಸಿ (ಚದರ ಮೀಟರ್‌ಗೆ 1.5 ಲೀ.)

100 ಲೀಟರ್ ಶೇ. 0.2 ರ ಸೆರಿಫ್ಲಿಟ್ ದ್ರಾವಣ ತಯಾರಿಕೆ ವಿಧಾನ

- 200 ಗ್ರಾಂ. ಸೆರಿಫ್ಲಿಟ್ ಹರಳುಗಳನ್ನು 100 ಲೀಟರ್ ನೀರಿನಲ್ಲಿ ಬೆರೆಸಿ
- 30 ನಿಮಿಷ ಹಾಗೆಯೇ ಕರಗಲು ಬಿಟ್ಟು ನಂತರ ಉಪಯೋಗಿಸಿ

- ಹುಳು ಸಾಕಾಣಿಕೆ ಮನೆ, ಸಲಕರಣೆಗಳು ಮತ್ತು ಮನೆಯ ಸುತ್ತ ಮುತ್ತ ಸೋಂಕು ನಿವಾರಣೆ
- ವೈಯುಕ್ತಿಕ ಮತ್ತು ಹುಳುಸಾಕಾಣಿಕೆಯಲ್ಲಿ ನೈರ್ಮಲ್ಯ ನಿರ್ವಹಣೆ

- ವೆಚ್ಚ: 100 ಮೊಟ್ಟೆ ಸಾಕಾಣಿಕೆಗೆ ` 180/-
- ಖರ್ಚು ಲಾಭದ ಅನುಪಾತ : 1: 9

ಇದನ್ನು ಮಾಡಿ

- ಸೆರಿಫ್ಲಿಟ್ ಹರಳುಗಳನ್ನು ಬೆರೆಸಿದ ಮೇಲೆ ದ್ರಾವಣವನ್ನು 30 ನಿಮಿಷಗಳ ನಂತರ ಉಪಯೋಗಿಸಿ
- ಸಿಂಪಡಿಸುವಾಗ ಮುಖವಾಡ ಧರಿಸಿ

ಇದನ್ನು ಮಾಡಬೇಡಿ

- ಮಣ್ಣು ಮಿಶ್ರಿತ ಮತ್ತು ಅಶುದ್ಧ ನೀರನ್ನು ಉಪಯೋಗಿಸಬೇಡಿ



ವಿಜೇತದಿಂದ ಸಾಮಾನ್ಯ ರೇಷ್ಮೆಹುಳು ರೋಗಗಳನ್ನು ತಡೆಗಟ್ಟುವಿಕೆ

- ಅಭಿವೃದ್ಧಿಪಡಿಸಿದ ವರ್ಷ: 1995

ಪ್ರಮುಖ ಅಂಶಗಳು

- ರೇಷ್ಮೆ ಹುಳು ರೋಗಗಳ ವಿರುದ್ಧ ಇರುವ ಹುಳುಗಳ ಶರೀರ ಮತ್ತು ಹುಳು ಹಾಸಿಗೆಯ ಸೋಂಕು ನಿವಾರಕ
- ರೇಷ್ಮೆ ಹುಳುವಿನ ರೋಗಗಳನ್ನು ತಡೆಯಲು ಉಪಯೋಗಿಸಲ್ಪಟ್ಟ ಪ್ರಪ್ರಥಮ ಔಷಧೀಯ ಪುಡಿ
- ಇದು ಪೇಟೆಂಟ್ ಆಗಿರುವ ಒಂದು ತಾಂತ್ರಿಕತೆ (ಭಾರತೀಯ ಪೇಟೆಂಟ್ ಸಂಖ್ಯೆ: 186852/28೦9–1998)

ಬಳಕೆ

- ಪ್ರತೀ ಜ್ವರದ ನಂತರ, ಸೊಪ್ಪು ಕೊಡುವ ಮುನ್ನ ಹಾಗೂ 5ನೇ ಹಂತದ 4 ನೇ ದಿನ ಹುಳು ಹಾಸಿಗೆಯಲ್ಲಿ ಯಾವುದೇ ಸೊಪ್ಪು ಇಲ್ಲದಿರುವುದನ್ನು ಖಾತರಿಪಡಿಸಿಕೊಂಡು ವಿಜೇತ ಉದುರಿಸಿ
- ರೇಷ್ಮೆ ಹುಳುವಿನ ಶರೀರದ ಮೇಲೆ ಹಾಗೂ ಹುಳು ಹಾಸಿಗೆಯ ಮೇಲೆ 1 ನೇ ಮತ್ತು 2 ನೇ ಹಂತದಲ್ಲಿ ಚದರ ಅಡಿಗೆ 3 ಗ್ರಾಂ. ನಂತೆ ಹಾಗೂ 3, 4, 5ನೇ ಹಂತದಲ್ಲಿ ಚದರ ಅಡಿಗೆ 5 ಗ್ರಾಂ. ನಂತೆ ಬಳಸಿ

ರೇಷ್ಮೆ ಹುಳುಗಳ ಸಾಮಾನ್ಯ ರೋಗಗಳ ತಡೆಗಟ್ಟುವಿಕೆಗೆ

- ವೆಚ್ಚ: 100 ಮೊಟ್ಟೆ ಸಾಕಾಣಿಕೆಗೆ ` 300/-
- ಖರ್ಚು ಲಾಭದ ಅನುಪಾತ: 1:6

ಇದನ್ನು ಮಾಡಿ

- ವಿಜೇತ ಧೂಳೀಕರಿಸಿದ 30 ನಿಮಿಷಗಳ ನಂತರ ಸೊಪ್ಪು ನೀಡಿ
- ಧೂಳು ಉದುರಿಸುವಾಗ ಮುಖವಾಡ ಧರಿಸಿ
- ಸೋಂಕುನಿವಾರಕ ಪುಡಿಯನ್ನು ಗಾಳಿಯಾಡದ ಡಬ್ಬಿಗಳಲ್ಲಿ ಇಡಿ
- ಶಿಫಾರಸ್ಸು ಮಾಡಲಾಗಿರುವ ಪ್ರಮಾಣವನ್ನಷ್ಟೇ ಬಳಸಿ

ಇದನ್ನು ಮಾಡಬೇಡಿ

- ತಿನ್ನುತ್ತಿರುವ ಹುಳುಗಳ ಮೇಲೆ ಉದುರಿಸಬೇಡಿ
- ಧೂಳು ಉದುರಿಸಿದ ನಂತರ ತಟ್ಟೆಗಳನ್ನು ಮುಚ್ಚಬೇಡಿ
- ಬಳಕೆಯ ಅವಧಿಯ ದಿನಾಂಕ ಮುಗಿದಿರುವ ವಿಜೇತ ಪುಡಿಯನ್ನು ಉಪಯೋಗಿಸಬೇಡಿ

ವಿಜೇತ ಸಪ್ಲಿಮೆಂಟ್ ನಿಂದ ಸುಣ್ಣಕಟ್ಟು ರೋಗ ತಡೆಗಟ್ಟುವಿಕೆ

- ಅಭಿವೃದ್ಧಿಪಡಿಸಿದ ವರ್ಷ: 2001

ಪ್ರಮುಖ ಅಂಶಗಳು

- ಇದು ಸುಣ್ಣಕಟ್ಟು ರೋಗ ಹರಡುವುದನ್ನು ತಡೆಯಲು ಇರುವ ಶಿಲೀಂಧ್ರ ವಿರೋಧಿ ಔಷಧೀಯ ಪುಡಿ
- ಇದು ಮಳೆಗಾಲ ಹಾಗೂ ಚಳಿಗಾಲದಲ್ಲಿ ಸುಣ್ಣಕಟ್ಟು ರೋಗ ತಡೆಯಲು ಒಂದು ನಿರ್ದಿಷ್ಟ ಹಾಸಿಗೆ ಸೋಂಕು ನಿವಾರಕ
- ಬಳಸುವ ವಿಧಾನ – 100 ಮೊಟ್ಟೆ ಸಾಕಾಣಿಕೆಗೆ ಬೇಕಾಗುವ ಪ್ರಮಾಣ (ಗ್ರಾಂ ನಲ್ಲಿ)

ಹುಳುವಿನ ಹಂತ	ತಟ್ಟೆ ಪದ್ಧತಿ	ರೆಂಬೆ ಪದ್ಧತಿ
4 ನೇ ಹಂತದ 3 ನೇ ದಿನ	600	900
5 ನೇ ಹಂತದ 2 ನೇ ದಿನ	1,000	1,300
5 ನೇ ಹಂತದ 6 ನೇ ದಿನ	1,400	1,800
ಒಟ್ಟು	3,000	4,000

ರೇಷ್ಮೆ ಹುಳುಗಳ ಸುಣ್ಣಕಟ್ಟು ರೋಗ ತಡೆಗಟ್ಟುವಿಕೆ

- ವೆಚ್ಚ: 100 ಮೊಟ್ಟೆ ಸಾಕಾಣಿಕೆಗೆ ` 300/-
- ಖರ್ಚು ಲಾಭದ ಅನುಪಾತ : 1:5

ಇದನ್ನು ಮಾಡಿ

- ರೇಷ್ಮೆ ಹುಳುಗಳ ಶರೀರದ ಮೇಲೆ ಹಾಗೂ ಹುಳು ಹಾಸಿಗೆಯ ಮೇಲೆ ಉದುರಿಸಿ (ಚದರ ಅಡಿಗೆ 3 ಗ್ರಾಂ ನಂತೆ)
- ಉದುರಿಸಿದ 30 ನಿಮಿಷಗಳ ನಂತರ ಸೊಪ್ಪು ನೀಡಿ
- ಉದುರಿಸುವಾಗ ಮುಖವಾಡ ಧರಿಸಿ
- ಸೋಂಕುನಿವಾರಕ ಪುಡಿಯನ್ನು ಗಾಳಿಯಾಡದ ಡಬ್ಬಿಗಳಲ್ಲಿ ಇಡಿ

ಇದನ್ನು ಮಾಡಬೇಡಿ

- ತಿನ್ನುತ್ತಿರುವ ಹುಳುಗಳ ಮೇಲೆ ಬಳಸಬೇಡಿ
- ಉದುರಿಸಿದ ನಂತರ ತಟ್ಟೆಗಳನ್ನು ಮುಚ್ಚಬೇಡಿ
- ರೇಷ್ಮೆ ಹುಳುಗಳು ಜ್ವರದಲ್ಲಿರುವಾಗ ಅಥವಾ ತಿನ್ನಬಹುದಾದ ಸೊಪ್ಪು ಇರುವಾಗ ಬಳಸಬೇಡಿ

ಅಂಕುಶ್ ಉಪಯೋಗಿಸಿ ರೇಷ್ಮೆ ಹುಳುಗಳ ಎಲ್ಲಾ ಸಾಮಾನ್ಯ ರೋಗಗಳ ತಡೆಗಟ್ಟುವಿಕೆ

- ಅಭಿವೃದ್ಧಿಪಡಿಸಿದ ವರ್ಷ: 2003

ಪ್ರಮುಖ ಅಂಶಗಳು

- ಪರಿಸರ ಮತ್ತು ಬಳಕೆದಾರ ಸ್ನೇಹಿ ರೇಷ್ಮೆ ಹುಳುವಿನ ಶರೀರ ಮತ್ತು ಹಾಸಿಗೆ ಸೋಂಕು ನಿವಾರಕ
- ರೇಷ್ಮೆ ಹುಳುಗಳ ಎಲ್ಲಾ ಪ್ರಮುಖ ರೋಗಗಳಿಗೆ ಪರಿಣಾಮಕಾರಿಯಾಗಿದೆ
- ಘಟಕಾಂಶಗಳು ಪರಿಸರ ಸ್ನೇಹಿಯಾಗಿದ್ದು ಜೈವಿಕವಾಗಿ ವಿಭಜನೆ ಹೊಂದುತ್ತವೆ

ಬಳಸುವ ವಿಧಾನ – 100 ಮೊಟ್ಟೆ ಸಾಕಾಣಿಕೆಗೆ ಬೇಕಾಗುವ ಪ್ರಮಾಣ (ಗ್ರಾಂ ನಲ್ಲಿ)

ರೇಷ್ಮೆ ಹುಳುಗಳ ಎಲ್ಲಾ ರೋಗಗಳ ತಡೆಗಟ್ಟುವಿಕೆಗೆ

ಹುಳುವಿನ ಹಂತ	ಸಾಕಾಣಿಕಾ ಪದ್ಧತಿ	
	ತಟ್ಟೆ	ರೆಂಬೆ
1 ನೇ ಜ್ವರದ ನಂತರ*	72	72
2 ನೇ ಜ್ವರದ ನಂತರ*	144	144
3 ನೇ ಜ್ವರದ ನಂತರ*	288	540
4 ನೇ ಜ್ವರದ ನಂತರ*	768	1,440
5 ನೇ ಹಂತದ 3 ನೇ ದಿನ	1,076	1,600
5 ನೇ ಹಂತದ 5 ನೇ ದಿನ	1,348	2,160
Total	3,696	5,956

* ಸೊಪ್ಪು ಕೊಡುವ ಮುನ್ನ

- ವೆಚ್ಚ: 100 ಮೊಟ್ಟೆ ಸಾಕಾಣಿಕೆಗೆ ` 300/-
- ಖರ್ಚು ಲಾಭದ ಅನುಪಾತ: 1:7

ಇದನ್ನು ಮಾಡಿ

- ಇದು ರೇಷ್ಮೆ ಹುಳುಗಳ ಎಲ್ಲಾ ಸಾಮಾನ್ಯ ರೋಗಗಳಿಗೂ ಹಾಸಿಗೆ ಸೋಂಕು ನಿವಾರಕವಾಗಿದೆ
- ಬಳಸುವಾಗ ಮುಖವಾಡ ಧರಿಸಿ
- ಉದುರಿಸಿದ 30 ನಿಮಿಷಗಳ ನಂತರ ಸೊಪ್ಪು ನೀಡಿ

ಇದನ್ನು ಮಾಡಬೇಡಿ

- ತಿನ್ನುತ್ತಿರುವ ಹುಳುಗಳ ಮೇಲೆ ಬಳಸಬೇಡಿ
- ಉದುರಿಸಿದ ನಂತರ ತಟ್ಟೆಗಳನ್ನು ಮುಚ್ಚಬೇಡಿ

ಅಮೃತ್ ಉಪಯೋಗಿಸಿ ರೇಷ್ಮೆ ಹುಳುಗಳ ಹಾಲು ತೊಂಡೆ ಮತ್ತು ಸಪ್ಪೆ ರೋಗಗಳ ನಿಗ್ರಹ

- ಅಭಿವೃದ್ಧಿಪಡಿಸಿದ ವರ್ಷ: 2003

ಪ್ರಮುಖ ಅಂಶಗಳು

- ಇದು ಹಾಲು ತೊಂಡೆ ಮತ್ತು ಸಪ್ಪೆ ರೋಗಗಳ ನಿಗ್ರಹಕ್ಕಾಗಿ ತಯಾರಿಸಲ್ಪಟ್ಟಿರುವ ಪರಿಸರ ಮತ್ತು ಬಳಕೆದಾರ ಸ್ನೇಹಿ ಸಸ್ಯ ಮೂಲಾಧಾರಿತ ಔಷಧಿ
- ರೇಷ್ಮೆ ಹುಳುವಿನ ರೋಗಗಳನ್ನು ಗುಣಪಡಿಸಲು ತಯಾರು ಮಾಡಿರುವ ಪ್ರಪ್ರಥಮ ಔಷಧೀಯ ಪುಡಿ

ತಯಾರಿಕೆ ಮತ್ತು ಬಳಕೆ

- 20 ಗ್ರಾಂ ಅಮೃತ್ ಪುಡಿಯನ್ನು 1 ಲೀಟರ್ ನೀರಿನಲ್ಲಿ ಕರಗಿಸಿ. ಒಂದು ಕೆ.ಜಿ. ಹಿಪ್ಪುನೇರಳೆ ಸೊಪ್ಪಿಗೆ ಅಥವಾ ರೆಂಬೆಗೆ 70 ಮಿ.ಲೀ. ನಷ್ಟು ಕೈಯಿಂದ ಚಿಮುಕಿಸಬೇಕು

ಹುಳುವಿನ ಹಂತ	ಅಮೃತ್ (ಗ್ರಾಂ)	ನೀರಿನ (ಎಂ.ಲೀ.)	ಎಲೆಯ/ರೆಂಬೆಯ (ಕೆ.ಜಿ)
2 ನೇ ಜ್ವರದ ನಂತರ 2 ನೇ ಸೊಪ್ಪು ಕೊಡುವಾಗ	07	350	5
3 ನೇ ಜ್ವರದ ನಂತರ 2 ನೇ ಸೊಪ್ಪು ಕೊಡುವಾಗ	53	2,650	38
4 ನೇ ಜ್ವರದ ನಂತರ 2 ನೇ ಸೊಪ್ಪು ಕೊಡುವಾಗ	90	4,500	67
ಒಟ್ಟು	150	7,500	110

ರೇಷ್ಮೆ ಹುಳುಗಳ ಹಾಲು ತೊಂಡೆ ಮತ್ತು ಸಪ್ಪೆ ರೋಗ ನಿಗ್ರಹಿಸಲು

- ವೆಚ್ಚ: 100 ಮೊಟ್ಟೆ ಸಾಕಾಣಿಕೆಗೆ ` 150/-
- ಖರ್ಚು ಲಾಭದ ಅನುಪಾತ: 1:5

ಇದನ್ನು ಮಾಡಿ

- ಹೊಸದಾಗಿ ತಯಾರಿಸಿದ ದ್ರಾವಣವನ್ನು ಉಪಯೋಗಿಸಿ
- ಕೈಯನ್ನು ಉಪಯೋಗಿಸಿ ಮಿಶ್ರಣ ಮಾಡಿ

ಇದನ್ನು ಮಾಡಬೇಡಿ

- ದ್ರಾವಣವನ್ನು ಚಿಮುಕಿಸಲು ಸ್ಪ್ರೇಯರ್ ಉಪಯೋಗಿಸಬೇಡಿ
- ಸೊಪ್ಪನ್ನು ಹೆಚ್ಚು ಕಾಲ ಒಣಗಲು ಬಿಡಬೇಡಿ

ಊಜಿ ನೊಣದ ಸಮಗ್ರ ನಿಯಂತ್ರಣ

- ಶಿಫಾರಸ್ಸು ಮಾಡಿದ ವರ್ಷ: 2002

ಪ್ರಮುಖ ಅಂಶಗಳು

- ಊಜಿ ನೊಣವು ರೇಷ್ಮೆ ಹುಳುವಿನ ಪರಾವಲಂಬಿ ಕೀಟ
- ರೇಷ್ಮೆ ಗೂಡಿನ ಇಳುವರಿಯಲ್ಲಿ 10–15% ನಷ್ಟವನ್ನು ಉಂಟುಮಾಡುತ್ತದೆ
- ವರ್ಷಪೂರ್ತಿ ಕಾಣಿಸಿಕೊಂಡರೂ ಮಳೆಗಾಲದಲ್ಲಿ ಇದರ ಬಾಧೆ ಹೆಚ್ಚು
- ಇದು 400–500 ಮೊಟ್ಟೆಗಳನ್ನಿಡುತ್ತದೆ ಹಾಗೂ 2–3 ದಿನಗಳಲ್ಲಿ ಅವು ಒಡೆಯುತ್ತವೆ
- ಮರಿಹುಳುವಿನ ಅವಧಿ 6–8 ದಿನಗಳು ಹಾಗೂ ಕೋಶಾವಸ್ಥೆ 10–12 ದಿನಗಳು
- ಜೀವನ ಚಕ್ರ 18–20 ದಿನಗಳು
- ಊಜಿ ನೊಣಗಳು 15–21 ದಿನಗಳ ತನಕ ಬದುಕಿರುತ್ತವೆ

ನಿರ್ವಹಣಾ ಕ್ರಮಗಳು

ಊಜಿ ನೊಣ ಒಳ ಸೇರದಂತೆ ಮಾಡುವ ವಿಧಾನ

- ಎಲ್ಲಾ ಕಿಟಕಿ ಹಾಗೂ ಬಾಗಿಲುಗಳಿಗೆ ತಂತಿ ಜಾಲರಿ ಅಥವಾ ನೈಲಾನ್ ಪರದೆ ಅಳವಡಿಸಿ
- ಬಾಗಿಲು ತಾನಾಗಿಯೇ ಮುಚ್ಚಿಕೊಳ್ಳುವ ವ್ಯವಸ್ಥೆ ಮಾಡಿಕೊಳ್ಳಿ
- ಹುಳು ಸಾಕಾಣಿಕೆ ಮನೆಯ ಪ್ರವೇಶ ದ್ವಾರದ ಎದುರಿನಲ್ಲಿ ನೈಲಾನ್ ಪರದೆಯ ಉಪಕೋಣೆ ನಿರ್ಮಿಸಿ

ಊಜಿ ಟ್ರ್ಯಾಪ್ ಬಳಕೆ

- ಒಂದು ಲೀಟರ್ ನೀರಿನಲ್ಲಿ ಒಂದು ಮಾತ್ರೆಯನ್ನು ಕರಗಿಸಿ ತಯಾರಿಸಿದ ಹಳದಿ ಬಣ್ಣದ ದ್ರಾವಣವನ್ನು ಬಿಳಿ ಬಣ್ಣದ ತಟ್ಟೆಯಲ್ಲಿ ಹಾಕಿ ಹುಳು ಸಾಕಾಣಿಕೆ ಮನೆಯ ಹೊರಗಡೆ ಎಲ್ಲಾ ಕಿಟಕಿಗಳ ಬುಡದಲ್ಲಿ ಹಾಗೂ ಒಳಗಡೆ ಬೆಳಕು ಇರುವ ಎತ್ತರದ ಸ್ಥಳಗಳಲ್ಲಿ ಇಡಬೇಕು. ಪ್ರತೀ ಬೆಳೆಯ ಅಂತ್ಯದಲ್ಲಿ ಕಸ ತೆಗೆಯುವವರೆಗೂ ಇಡಬೇಕು.

ಜೈವಿಕ ವಿಧಾನ

- ರೇಷ್ಮೆ ಹುಳುವಿನ 5 ನೇ ಹಂತದಲ್ಲಿ ಕೋಶ ಪರತಂತ್ರ ಜೀವಿಯಾದ ನಿಸೋಲಿಂಕ್ಸ್ ಥೈಮಸ್‌ನ್ನು (ಎನ್.ಟಿ) 100 ಮೊಟ್ಟೆಗೆ 2 ಪ್ಯಾಕೆಟ್‌ಗಳಂತೆ ಹುಳು ಸಾಕಾಣಿಕೆ ಮನೆಯೊಳಗೆ ಬಿಡುಗಡೆ ಮಾಡಿ
- ಪ್ರತೀ ಪ್ಯಾಕೆಟ್ ನಿಂದ ಸುಮಾರು 10,000 ಎನ್.ಟಿ. ಜೀವಿಗಳು ಹೊರಬರುತ್ತವೆ
- ಒಂದು ಎನ್.ಟಿ. ಕೀಟವು ಸುಮಾರು 4–5 ಊಜಿ ಕೋಶಗಳ ಒಳಗೆ ತನ್ನ ಮೊಟ್ಟೆಗಳನ್ನು ಇಡುತ್ತದೆ

ಊಜಿ ನೊಣದ ಸಮಗ್ರ ನಿಯಂತ್ರಣ....

- ಒಂದು ಊಜಿ ಕೋಶದ ಒಳಗೆ ಸುಮಾರು 40–60 ಎನ್.ಟಿ ಕೀಟಗಳು ಅಭಿವೃದ್ಧಿ ಹೊಂದುತ್ತವೆ
- ರೇಷ್ಮೆ ಹುಳುಗಳು ಹಣ್ಣಾದ ನಂತರ ಎನ್.ಟಿ. ಪ್ಯಾಕೆಟ್‌ಗಳನ್ನು ಚಂದ್ರಿಕೆಗಳ ಬಳಿ ಇಡಿ
- ಗೂಡು ಕೊಯಿಲು ಆದ ನಂತರ ಈ ಪ್ಯಾಕೆಟ್ ಗಳನ್ನು ಗೊಬ್ಬರದ ಗುಂಡಿಗೆ ಹಾಕಿ

ವ್ಯವಸಾಯಿಕ ಪದ್ಧತಿ

- ರೇಷ್ಮೆ ಹುಳು ಸಾಕಾಣಿಕೆಯ ನಂತರ ಹಿಪ್ಪುನೇರಳೆ ರೆಂಬೆಗಳನ್ನು ಹಿಕ್ಕೆ ಮತ್ತು ತಿಂದುಳಿದ ಎಲೆಗಳಿಂದ ಬೇರ್ಪಡಿಸಿ
- ಹಿಕ್ಕೆ ಮತ್ತು ತಿಂದುಳಿದ ಎಲೆಗಳನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿಸಿ ಬಿಗಿಯಾಗಿ ಕಟ್ಟಿ ಕನಿಷ್ಟ 15 ದಿನಗಳ ತನಕ ಇಟ್ಟು ಅನಂತರ ಗೊಬ್ಬರದ ಗುಂಡಿಗೆ ಎಸೆಯಬೇಕು
- ಬದಲಾಗಿ ಈ ತ್ಯಾಜ್ಯವನ್ನು ಗುಂಡಿ ತೋಡಿ ಹೂತು ಹಾಕಲೂಬಹುದು

ಉಪಯೋಗಗಳು

- ಊಜಿ ನೊಣದ ಬಾಧೆಯು ಸತತವಾಗಿ ಶೇ. 2 ಕ್ಕಿಂತ ಕಡಿಮೆ ಇರುತ್ತದೆ
- ಪರಿಸರ ಸ್ನೇಹಿ, ಪರಿಣಾಮಕಾರಿ ಹಾಗೂ ಮಿತವ್ಯಯಕಾರಿ
- ಬಳಸಲು ಸುಲಭ, ಅಪಾಯಕಾರಿ ಅಲ್ಲದ ಬಳಕೆದಾರ ಸ್ನೇಹಿ ವಿಧಾನ

ಉಪಯುಕ್ತತೆ

ಊಜಿ ನೊಣದ ಪರಿಣಾಮಕಾರಿ ನಿಯಂತ್ರಣ

- ವೆಚ್ಚ: 100 ಮೊಟ್ಟೆ ಸಾಕಾಣಿಕೆಗೆ ` 150/-
- ಖರ್ಚು ಲಾಭದ ಅನುಪಾತ: 1:5

ಇದನ್ನು ಮಾಡಿ

- ಗೂಡು ಕಟ್ಟಲು ಪಾರಂಭಿಸಿದ 15 ದಿನಗಳ ವರೆಗೂ ಊಜಿ ಟ್ರ್ಯಾಪ್ ಗಳನ್ನು ಹುಳು ಸಾಕಾಣಿಕೆ ಮನೆಯೊಳಗೆ ಇಡುವುದನ್ನು ಮುಂದುವರಿಸಿ, ಇದರಿಂದ ಸಾಕಾಣಿಕೆ ಮನೆಯೊಳಗೆ ಲಭ್ಯವಿರುವ ಕೋಶಗಳಿಂದ ಹೊರಬರುವ ಊಜಿ ನೊಣಗಳನ್ನು ಆಕರ್ಷಿಸಿ ಕೊಲ್ಲಬಹುದು
- ಹುಳು ಸಾಕಾಣಿಕೆ ಮನೆಯೊಳಗೆ, ಗೂಡು ಕಟ್ಟಿಸುವ ಸ್ಥಳ ಹಾಗೂ ಗೂಡು ಬಿಡಿಸುವ ಸ್ಥಳದಲ್ಲಿ ಸಿಗುವ ಊಜಿ ಕೋಶಗಳನ್ನು ಸಂಗ್ರಹಿಸಿ ಸುಟ್ಟುಬಿಡಿ

ಇದನ್ನು ಮಾಡಬೇಡಿ

- ಊಜಿ ಬಾಧಿತ ರೇಷ್ಮೆ ಹುಳುಗಳನ್ನು ಹೊರಗಡೆ ಎಸೆಯಬೇಡಿ, ಬದಲಾಗಿ ಸುಟ್ಟುಬಿಡಿ ಅಥವಾ ಬ್ಲೀಚಿಂಗ್ ಪುಡಿ ಜೊತೆ ಬೆರೆಸಿ ಹೂತುಹಾಕಿ
- ಹುಳು ಸಾಕಾಣಿಕೆ ಮುಗಿದ ನಂತರವೂ ಬಾಗಿಲನ್ನು ತೆರೆದು ಇಡಬೇಡಿ, ಇದರಿಂದ ಊಜಿ ನೊಣಗಳು ಹೊರಗಡೆ ತಪ್ಪಿಸಿಕೊಂಡು ಹೋಗುತ್ತವೆ.

ಸಂಪೂರ್ಣ – ರೇಷ್ಮೆ ಹುಳುಗಳು ಏಕ ಕಾಲಕ್ಕೆ ಹಣ್ಣಾಗಲು ಉಪಯೋಗಿಸುವ ಪ್ರಚೋದಕ

- ಅಭಿವೃದ್ಧಿಪಡಿಸಿದ ವರ್ಷ: 2003

ಪ್ರಮುಖ ಅಂಶಗಳು

- ನೀರು ಬೆರೆಸಿ ಸಾರಗುಂದಿಸಿದ ಸಂಪೂರ್ಣವನ್ನು ಹಿಪ್ಪುನೇರಳೆ ಸೊಪ್ಪಿನ ಮೇಲೆ ಸಿಂಪಡಿಸಿ ರೇಷ್ಮೆ ಹುಳುಗಳಿಗೆ ತಿನ್ನಿಸಿ
- ಇದಾದ 18–24 ಗಂಟೆಗಳಲ್ಲಿ ಎಲ್ಲಾ ಹುಳುಗಳೂ ಹಣ್ಣಾಗುತ್ತವೆ
- ಕ್ಲಿಷ್ಟಕರ ಪರಿಸ್ಥಿತಿಗಳಲ್ಲಿ (ಏಕಾ ಏಕಿ ರೋಗ ಉಂಟಾದಾಗ ಅಥವಾ ಸೊಪ್ಪಿನ ಕೊರತೆ ಕಂಡುಬಂದಾಗ) ಇದನ್ನು ಉಪಯೋಗಿಸಿ ಬೆಳೆಯನ್ನು ಉಳಿಸಿಕೊಳ್ಳಬಹುದು

ಉಪಯೋಗಗಳು

- ಗೂಡು ಕಟ್ಟುವಿಕೆಯು 12–18 ಗಂಟೆಗಳಲ್ಲಿ ಆರಂಭಗೊಳ್ಳುತ್ತದೆ
- ಕೋಶಾವಸ್ಥೆಯ ಪರಿವರ್ತನಾ ಪ್ರಮಾಣವು ಹೆಚ್ಚುತ್ತದೆ
- ಗೂಡಿನ ಇಳುವರಿ ಮತ್ತು ಬೆಲೆಯಲ್ಲಿ ಕನಿಷ್ಠ ಹೆಚ್ಚಳ
- ದೋಷಪೂರಿತ ಗೂಡುಗಳ ಪ್ರಮಾಣ ಕಡಿಮೆಯಾಗುತ್ತದೆ
- ಗೂಡುಗಳನ್ನು ಒಂದು ದಿನ ಮುಂಚಿತವಾಗಿ ಮಾರಾಟ ಮಾಡಬಹುದು

ರೇಷ್ಮೆ ಹುಳುಗಳು ಬೇಗನೆ ಹಾಗೂ ಏಕ ಕಾಲಕ್ಕೆ ಹಣ್ಣಾಗುತ್ತವೆ

ಇದನ್ನು ಮಾಡಿ

- ಒಂದು ಆಂಪ್ಯೂಲ್ ಸಂಪೂರ್ಣವನ್ನು 2 ಲೀಟರ್ ನೀರಿನೊಂದಿಗೆ ಬೆರೆಸಬೇಕು
- ಪ್ರತೀ ಆಂಪ್ಯೂಲ್ (10 ಮಿ.ಲೀ.) ಸಂಪೂರ್ಣವನ್ನು ಸುಮಾರು 20,000 ಹುಳುಗಳಿಗೆ ಬಳಸಿ
- ಈ ಪ್ರಚೋದಕವನ್ನು ಬಲಿತ ಹುಳುಗಳಿಗೆ ಆಗ ತಾನೇ ಕೊಟ್ಟ ಸೊಪ್ಪಿನ ಮೇಲೆ ಸಿಂಪಡಿಸಬೇಕು
- ದ್ರಾವಕವನ್ನು ತಯಾರಿಸುವಾಗ ಕೈಗಳಿಗೆ ಕೈಚೀಲ (ಗ್ಲೋವ್ಸ್) ತೊಟ್ಟಿರಬೇಕು

ಇದನ್ನು ಮಾಡಬೇಡಿ

- ದ್ರಾವಕವನ್ನು ಹುಳುಗಳ ಮೇಲೆ ನೇರವಾಗಿ ಸಿಂಪಡಿಸಬೇಡಿ
- ಸಂಪೂರ್ಣ ಸಿಂಪಡಿಸುವಾಗ ಜಾಸ್ತಿ ಪ್ರಮಾಣದಲ್ಲಿ ಸೊಪ್ಪನ್ನು ನೀಡಬಾರದು

ಸಮೃದ್ಧಿ–ಹೆಚ್ಚಿನ ಗೂಡು ಮತ್ತು ರೇಷ್ಮೆ ಉತ್ಪಾದನೆಗೆ (ಜುವೆನೈಲ್ ಪ್ರಚೋದಕ)

- ಅಭಿವೃದ್ಧಿಪಡಿಸಿದ ವರ್ಷ: 2007

ಪ್ರಮುಖ ಅಂಶಗಳು

- ಸಮೃದ್ಧಿಯನ್ನು ಯಾವುದೇ ರೇಷ್ಮೆ ತಳಿ ಅಥವಾ ಹೈಬ್ರಿಡ್‌ನ ಸಾಕಾಣಿಕೆಯಲ್ಲಿ ಉಪಯೋಗಿಸಬಹುದು
- 5 ನೇ ಹಂತದ ಹುಳುವಿನ ಅವಧಿಯನ್ನು 12–24 ಗಂಟೆ ದೀರ್ಘಗೊಳಿಸುವುದರಿಂದ ಎರಡು ಹೆಚ್ಚುವರಿ ಆಹಾರವನ್ನು ಕೊಡಬೇಕಾಗುವುದು

ಉಪಯೋಗಿಸುವ ವಿಧಾನ

- ಒಂದು ಆಂಪ್ಯೂಲ್ ಸಮೃದ್ಧಿಯನ್ನು (5 ಮಿ.ಲೀ.) 2.5 ಲೀ. ನೀರಿನಲ್ಲಿ ಮಿಶ್ರಣ ಮಾಡಿದಾಗ ಅದು ಹಾಲಿನಂಥ ದ್ರಾವಣವಾಗುತ್ತದೆ
- 5 ನೇ ಹಂತದಲ್ಲಿ 48 ಗಂಟೆಗಳನ್ನು ಕಳೆದ 50 ಮೊಟ್ಟೆಗಳಿಂದ ಬೆಳೆದ ಹುಳುಗಳ ಮೇಲೆ ಸಿಂಪಡಿಸಿ

ಉಪಯೋಗಗಳು

- 100 ಮೊಟ್ಟೆಗೆ 1 ಕೆ.ಜಿ.ಯಷ್ಟು ರೇಷ್ಮೆ ಅಥವಾ 6–12 ಕೆ.ಜಿ.ಯಷ್ಟು ಗೂಡಿನ ಇಳುವರಿಯಲ್ಲಿ ಹೆಚ್ಚಳ
- ಗೂಡಿನ ಇಳುವರಿ ಶೇ. 15 ರವರೆಗೆ ಹೆಚ್ಚಾಗುತ್ತದೆ
- 100 ಮೊಟ್ಟೆಗೆ ನಿವ್ವಳ ಲಾಭ ರೂ. 700–1,200

ಉಪಯುಕ್ತ

ಶೇಕಡಾವಾರು ಕವಚದ ಅಂಶದ ಮೇಲೆ ಯಾವುದೆ ವ್ಯತಿರಿಕ್ತ ಪರಿಣಾಮ ಉಂಟಾಗದೆ ಗೂಡು ಮತ್ತು ಕವಚದ ತೂಕವನ್ನು ಶೇ. 12–15 ರಷ್ಟು ಹೆಚ್ಚಿಸುತ್ತದೆ

ಇದನ್ನು ಮಾಡಿ

- ಸಮೃದ್ಧಿಯನ್ನು 5ನೇ ಹಂತದಲ್ಲಿ 48 ಗಂಟೆಗಳನ್ನು ಕಳೆದ ದ್ವಿತಳಿ ಅಥವಾ 24 ಗಂಟೆಗಳನ್ನು ಕಳೆದ ಮಿಶ್ರ ತಳಿ ರೇಷ್ಮೆ ಹುಳುಗಳ ಮೇಲೆ ಉಪಯೋಗಿಸಿ
- ಸಮೃದ್ಧಿಯನ್ನು ನೀರಿನಲ್ಲಿ ಸಂಪೂರ್ಣವಾಗಿ ಮಿಶ್ರಣ ಮಾಡಿದ ನಂತರವಷ್ಟೇ ರೇಷ್ಮೆ ಹುಳುಗಳ ಮೇಲೆ ಸಿಂಪಡಿಸಿ
- ಸಮೃದ್ಧಿಯನ್ನು ಸೊಪ್ಪು ಕೊಡುವುದಕ್ಕೂ ಮೊದಲೇ (ಬೆಳಗಿನ ಹೊತ್ತಿನಲ್ಲಿ) ಸಿಂಪಡಿಸಿ

ಇದನ್ನು ಮಾಡಬೇಡಿ

- ಸೊಪ್ಪು ಸಾಕಷ್ಟು ಪ್ರಮಾಣದಲ್ಲಿ ಇಲ್ಲದಿದ್ದಲ್ಲಿ ಸಮೃದ್ಧಿಯನ್ನು ಉಪಯೋಗಿಸಬಾರದು
- ಸಿಂಪಡಿಸಿದ ತಕ್ಷಣ ಹುಳುಗಳಿಗೆ ಸೊಪ್ಪನ್ನು ನೀಡಬಾರದು, ಕನಿಷ್ಠ 30 ನಿ. ಕಾಯಬೇಕು
- ಸಿಂಪಡಣೆಗೊಳಗಾದ ಹುಳುಗಳನ್ನು ಹಣ್ಣಾಗುವವರೆಗೂ ಚಂದ್ರಿಕೆಯ ಮೇಲೆ ಬಿಡಬಾರದು

ಚಾಕಿ ರೇಷ್ಮೆಹುಳು ಸಾಕಾಣಿಕಾ ಮನೆಗಳು

- ಅಭಿವೃದ್ಧಿಪಡಿಸಿದ ವರ್ಷ: 2002

ಪ್ರಮುಖ ಅಂಶಗಳು

- ಚಾಕಿ ಹುಳು ಸಾಕಾಣಿಕೆಗೆ ಅಗತ್ಯವಿರುವ ಉಷ್ಣಾಂಶ (27-28^0 ಸೆಂಟಿ ಗ್ರೇಡ್) ಮತ್ತು ಶೈತ್ಯಾಂಶ (85-90%) ವನ್ನು ಸೃಷ್ಟಿಸಬಹುದು ಹಾಗೂ ನಿರ್ವಹಿಸಬಹುದು
- ಚಾಕಿ ಸಾಕಾಣಿಕೆಯ ಹಜಾರ: ಗೋಡೆಯಿಂದ ಗೋಡೆಗೆ 8 ಮೀ × 8 ಮೀ (25 ಅಡಿ × 25 ಅಡಿ), ಎತ್ತರ ಗೋಡೆಗಳ ಬದಿಯಲ್ಲಿ 10 ಅಡಿ ಹಾಗೂ ಮಧ್ಯ ಭಾಗದಲ್ಲಿ 14 ಅಡಿ. ಈ ಅಳತೆ 5,000 ಮೊಟ್ಟೆಗಳನ್ನು ಚಾಕಿ ಸಾಕಾಣಿಕೆ ಮಾಡಲು ಸಾಕಾಗುತ್ತದೆ
- ಸೊಪ್ಪು ಮತ್ತು ಉಪಕರಣಗಳನ್ನು ಸಂಗ್ರಹಿಸಲು ಪ್ರತ್ಯೇಕ ಕೊಠಡಿಗಳು ಅವಶ್ಯಕ
- ನೈರ್ಮಲ್ಯತೆಯನ್ನು ಕಾಪಾಡಿಕೊಳ್ಳಲು ಪ್ರವೇಶ ದ್ವಾರದಲ್ಲಿ ಒಂದು ಉಪಕೋಣೆಯ ವ್ಯವಸ್ಥೆ ಇರಬೇಕು
- ಹುಳು ಸಾಕಣೆ ಹಜಾರದ ಸುತ್ತ ಮುಕ್ತ ಜಗುಲಿ

ಉಪಯೋಗಗಳು

- ಅಗತ್ಯವಿರುವ ಶೈತ್ಯಾಂಶ ಮತ್ತು ಉಷ್ಣಾಂಶವನ್ನು ನಿರ್ವಹಿಸಲು ಅನುಕೂಲಕರವಾಗಿದೆ
- ಸಂಪೂರ್ಣ ಸೋಂಕು ನಿವಾರಣೆ ಹಾಗೂ ನೈರ್ಮಲ್ಯತೆಯ ನಿರ್ವಹಣೆ ಸಾಧ್ಯ

ದೊಡ್ಡ ಪ್ರಮಾಣದಲ್ಲಿ ವಾಣಿಜ್ಯ ಚಾಕಿ ಸಾಕಣೆಗೆ ಸೂಕ್ತ

ಬೆಲೆ: ` 3.0 ಲಕ್ಷ ರೂ.ಗಳು

ಇದನ್ನು ಮಾಡಿ

- ಕಟ್ಟಡವನ್ನು ಯೋಜನೆ ಪ್ರಕಾರ ಕಟ್ಟಿರಿ
- ಸಾಕಷ್ಟು ಗಾಳಿಯ ಸಂಚಾರ ಮತ್ತು ಬೆಳಕು ಇರುವಂತೆ ನೋಡಿಕೊಳ್ಳಿ

ಇದನ್ನು ಮಾಡಬೇಡಿ

- ಹುಳು ಸಾಕಣೆ ಮನೆಯೊಳಗೆ ಸೊಪ್ಪನ್ನು ಸಂಗ್ರಹಿಸಬೇಡಿ



ಪ್ರೌಢ ಹಂತದ ರೇಷ್ಮೆಹುಳು ಸಾಕಾಣಿಕಾ ಮನೆಗಳು

- ಅಭಿವೃದ್ಧಿಪಡಿಸಿದ ವರ್ಷ: 2007

ಪ್ರಮುಖ ಅಂಶಗಳು

- ರೇಷ್ಮೆ ಹುಳು ಸಾಕಾಣಿಕೆಗೆ ಅಗತ್ಯವಿರುವ ಪರಿಸರ ಸ್ಥಿತಿಗತಿಗಳ ನಿರ್ವಹಣೆ ಸುಗಮಗೊಳಿಸುತ್ತದೆ
- ದ್ವಿತಳಿ ಮತ್ತು ಮಿಶ್ರತಳಿ ಎರಡನ್ನೂ ಬೆಳೆಸಲು ಸೂಕ್ತವಾಗಿದೆ
- ಹುಳು ಸಾಕಾಣಿಕೆಯ ಹಜಾರದ ಅಳತೆ: 6 ಮೀ × 6 ಮೀ (20 × 20 ಅಡಿ) ಇದು 100 ಮೊಟ್ಟೆ ಸಾಕಾಣಿಕೆಗೆ; ಪ್ರತೀ ಹೆಚ್ಚುವರಿ 100 ಮೊಟ್ಟೆಗೆ ಹಜಾರದ ಉದ್ದವನ್ನು 6 ಮೀಟರ್‌ನಷ್ಟು ವಿಸ್ತರಿಸಿ
- ಎತ್ತರ: ಮಧ್ಯದಲ್ಲಿ 14 ಅಡಿ ಮತ್ತು ಗೋಡೆಗಳ ಬದಿಯಲ್ಲಿ 10 ಅಡಿ (ಸ್ಲಾ್ಯಂಡ್‌ನ 5 ಹಂತಗಳು ಹಿಡಿಸುವಂತೆ)

ಉಪಯೋಗಗಳು

- ಸೊಪ್ಪಿನ ಸಂಗ್ರಹಣೆಗೆ ಪ್ರತ್ಯೇಕ ಕೋಣೆ, ನೈರ್ಮಲ್ಯತೆ ಕಾಪಾಡಲು ಮತ್ತು ಕೀಟಪೀಡೆ ಹಾಗೂ ಭಕ್ಷಕ ಜೀವಿಗಳ ಪ್ರವೇಶ ನಿರ್ಬಂಧಿಸಲು ಉಪಕೋಣೆ ಅನುಕೂಲಕರವಾಗಿದೆ
- ಪರಿಣಾಮಕಾರಿ ಸೋಂಕು ನಿವಾರಣೆ ಹಾಗೂ ಹುಳು ಸಾಕಣೆ ಪರಿಸರದ ನಿರ್ವಹಣೆ ಸಾಧ್ಯ

ಉಪಯುಕ್ತತೆ

ಗುಣಮಟ್ಟದ ರೇಷ್ಮೆ ಗೂಡಿನ ಉತ್ಪಾದನೆ ಮೂಲಕ ದೀರ್ಘಾವಧಿಯ ಪ್ರಯೋಜನಗಳು

ಬೆಲೆ: 1000 ಚದರ ಅಡಿಗೆ ` 4.0 ಲಕ್ಷ ರೂಗಳು (250 ಮೊಟ್ಟೆ ಸಾಕಾಣಿಕೆಗೆ)

ಇದನ್ನು ಮಾಡಿ

- ಯೋಜನೆಯ ರೀತಿಯಲ್ಲಿಯೇ ಕಟ್ಟಡವನ್ನು ಕಟ್ಟಿರಿ

ಇದನ್ನು ಮಾಡಬೇಡಿ

- ಹುಳು ಸಾಕಣೆ ಮನೆಯೊಳಗೆ ಸೊಪ್ಪನ್ನು ಸಂಗ್ರಹಿಸಬೇಡಿ

ಚಾಕಿ ಹುಳು ಸಾಕಾಣಿಕೆಗೆ ಪಿವಿಸಿ ನಿಲುವುಗಳು (ಸ್ಟ್ಯಾಂಡ್‌ಗಳು)

- ಅಭಿವೃದ್ಧಿಪಡಿಸಿದ ವರ್ಷ: 2004

ಪ್ರಮುಖ ಅಂಶಗಳು

- ರೇಷ್ಮೆ ಬೆಳೆಗಾರರು ಖಿದ್ದಾಗಿ ತಾವೇ ಹುಳು ಸಾಕಾಣಿಕಾ ಮನೆಯೊಳಗೆ ನಿಲುವುಗಳನ್ನು ಜೋಡಿಸಿಕೊಳ್ಳಬಹುದು
- ತುಕ್ಕು ಹಿಡಿಯುವ ಸಂಭವವೇ ಇಲ್ಲದಿರುವುದರಿಂದ ಸೋಂಕು ನಿವಾರಕಗಳು ನಿಲುವುಗಳಿಗೆ ಯಾವುದೇ ರೀತಿಯ ಹಾನಿಯನ್ನು ಉಂಟುಮಾಡುವುದಿಲ್ಲ
- ಲೋಹದ ನಿಲುವುಗಳಿಗಿಂತ ಪಿವಿಸಿ ನಿಲುವುಗಳು ಶೇ. 40 ರಷ್ಟು ಅಗ್ಗವಾಗಿದೆ
- ತೂಕದಲ್ಲಿ ಬಹಳ ಹಗುರವಾದ್ದರಿಂದ ಸುಲಭವಾಗಿ ಸ್ಥಳಾಂತರಿಸಬಹುದಾಗಿದೆ
- ಶಾಖವನ್ನು ಹೀರಿಕೊಳ್ಳುವುದಿಲ್ಲ ಅಥವಾ ಬಿಟ್ಟುಕೊಡುವುದಿಲ್ಲ. ಆದ್ದರಿಂದ ಒಳಗೆ ಇರುವ ಉಷ್ಣಾಂಶದಲ್ಲಿ ಯಾವುದೇ ಬದಲಾವಣೆ ತರುವುದಿಲ್ಲ

ಉಪಯೋಗಗಳು

- ನಿರ್ವಹಣೆ ಸರಾಗ ಹಾಗೂ ಧೀರ್ಘಕಾಲ ಬಾಳಿಕೆ ಬರುವುದರಿಂದ ಲಾಭದಾಯಕವಾಗಿದೆ

ವಾಣಿಜ್ಯ ಚಾಕಿ ಸಾಕಾಣಿಕಾ ಕೇಂದ್ರಗಳಿಗೆ ಹೆಚ್ಚು ಸೂಕ್ತ

ಬೆಲೆ: 100 ತಟ್ಟೆಗಳನ್ನಿಡಲು ಸಾಧ್ಯವಿರುವ ಒಂದು ನಿಲುವಿಗೆ ರೂ. ` 12,000/-

ಇದನ್ನು ಮಾಡಿ

- ಜೋಡಣೆಗೆ ಗುಣಮಟ್ಟದ ವಸ್ತುಗಳನ್ನೇ ಉಪಯೋಗಿಸಿ

ಇದನ್ನು ಮಾಡಬೇಡಿ

- ಪಿವಿಸಿ ಯೂನಿಟ್‌ಗಳನ್ನು ಸೋಂಕು ನಿವಾರಣೆ ಮಾಡಲು ಫ್ಲೇಮ್ ಗನ್ ಉಪಯೋಗಿಸಬೇಡಿ

ಪ್ರೌಢ ಹಂತದ ರೇಷ್ಮೆ ಹುಳು ಸಾಕಾಣಿಕೆಗೆ ಪಿವಿಸಿ ನಿಲುವುಗಳು

- ಅಭಿವೃದ್ಧಿಪಡಿಸಿದ ವರ್ಷ: 2016

ಪ್ರಮುಖ ಅಂಶಗಳು

- ಹೆಚ್ಚು ಕಾಲ ಬಾಳಿಕೆ ಬರುತ್ತವೆ
- ತೂಕದಲ್ಲಿ ಹಗುರ
- ತುಕ್ಕು ಹಿಡಿಯುವುದಿಲ್ಲ
- ಸ್ವಚ್ಚ ಮಾಡಲು ಹಾಗೂ ಸೋಂಕು ನಿವಾರಣೆ ಮಾಡಲು ಸುಲಭ
- ನಿಲುವುಗಳನ್ನು ರಚಿಸಲು ಸುಲಭ

ಉಪಯೋಗಗಳು

- ಯಾವುದೇ ರೇಷ್ಮೆ ಹುಳು ಸಾಕಾಣಿಕಾ ವಿದ್ಯಮಾನದಲ್ಲೂ ನಿರ್ವಹಣೆ ಸುಲಭ
- ಪಿವಿಸಿ ಶಾಖವನ್ನು ಹೀರಿಕೊಳ್ಳುವುದಿಲ್ಲವಾದ್ದರಿಂದ ಶಕ್ತಿಯ ಉಳಿತಾಯವಾಗಲಿದೆ
- ಚರಣಿಗೆಗಳ ನಡುವಿನ ಅಂತರವನ್ನು ಅವಶ್ಯಕತೆಗೆ ಅನುಗುಣವಾಗಿ ಬದಲಾಯಿಸಿ ಕೊಳ್ಳಬಹುದು

ದೊಡ್ಡ ಪ್ರಮಾಣದ ರೇಷ್ಮೆ ಹುಳು ಸಾಕಾಣಿಕೆಗೆ ಸೂಕ್ತ

ಬೆಲೆ: ಒಂದು ಚದರ ಅಡಿಗೆ ` 60/-

ಇದನ್ನು ಮಾಡಿ

- ಜೋಡಣೆಗೆ ಒಳ್ಳೆಯ ಗುಣಮಟ್ಟದ ವಸ್ತುಗಳನ್ನೇ ಉಪಯೋಗಿಸಿ

ಇದನ್ನು ಮಾಡಬೇಡಿ

- ಪಿವಿಸಿ ಯೂನಿಟ್‌ಗಳನ್ನು ಸೋಂಕು ನಿವಾರಣೆ ಮಾಡಲು ಫ್ಲೇಮ್ ಗನ್ ಉಪಯೋಗಿಸಬೇಡಿ

ಯಾಂತ್ರೀಕರಣ

ಹಿಪ್ಪುನೇರಳೆ ಬಿತ್ತನೆ ಕಡ್ಡಿ ತಯಾರಿಸುವ ಯಂತ್ರ

- ಅಭಿವೃದ್ಧಿಪಡಿಸಿದ ವರ್ಷ: 1995

ಪ್ರಮುಖ ಅಂಶಗಳು

- ಹಿಪ್ಪುನೇರಳೆ ಬಿತ್ತನೆ ಕಡ್ಡಿ ತಯಾರಿಕೆಯು ವೇಗವಾಗಿ ಮತ್ತು ಪರಿಣಾಮಕಾರಿಯಾಗಿ ಆಗುತ್ತದೆ
- ತಯಾರಿಸಿದ ಕಡ್ಡಿಗಳು ಯಾವುದೇ ಗಾಯಗಳಿಲ್ಲದೆ ಉತ್ತಮ ಗುಣಮಟ್ಟದ್ದಾಗಿರುತ್ತವೆ
- ಇದು ಒಂದು ವಿದ್ಯುತ್ ಚಾಲಿತ ಯಂತ್ರ

ಉಪಯೋಗಗಳು

- ಒಬ್ಬ ಕೆಲಸಗಾರನು ಒಂದು ದಿನಕ್ಕೆ 1,500–2,000 ಕಡ್ಡಿಗಳನ್ನು ತಯಾರಿಸಬಹುದು, ಆದರೆ ಈ ಯಂತ್ರವು ಒಂದು ಗಂಟೆಗೆ 1,200–1,400 ಕಡ್ಡಿಗಳನ್ನು ತಯಾರಿಸುತ್ತದೆ
- ಈ ಯಂತ್ರವು ಬಿತ್ತನೆ ಕಡ್ಡಿ ತಯಾರಿಕೆಯಲ್ಲಿನ ಪರಿಶ್ರಮವನ್ನು ಕಡಿಮೆ ಮಾಡುತ್ತದೆ

- ಬಿತ್ತನೆ ಕಡ್ಡಿ ತಯಾರಿಕೆ ಬಹಳ ಸುಲಭ
- ಕಾರ್ಮಿಕ ವೆಚ್ಚ ಹಾಗೂ ಸಮಯದಲ್ಲಿ ಉಳಿತಾಯ
- ಕಡ್ಡಿಗಳಿಗೆ ಹಾನಿಯಾಗುವುದನ್ನು ತಪ್ಪಿಸುತ್ತದೆ

ಬೆಲೆ: ` 10,000/-

ಇದನ್ನು ಮಾಡಿ

- ಕತ್ತರಿಸುವ ಬ್ಲೇಡ್ ವಿರುದ್ಧ ರೆಂಬೆಗಳನ್ನು ದೃಢವಾಗಿ ಹಿಡಿಯಿರಿ

ಇದನ್ನು ಮಾಡಬೇಡಿ

- ಬಿತ್ತನೆ ಕಡ್ಡಿ ತಯಾರಿಸುವಾಗ ತುಂಬಾ ದಪ್ಪಗಿರುವ ರೆಂಬೆಗಳನ್ನು ಬಳಸಬೇಡಿ

ಹಿಪ್ಪುನೇರಳೆ ಸೊಪ್ಪು ಕತ್ತರಿಸುವ ಯಂತ್ರ

- ಅಭಿವೃದ್ಧಿಪಡಿಸಿದ ವರ್ಷ: 2001

ಪ್ರಮುಖ ಅಂಶಗಳು

- ಒಂದು ಗಂಟೆಗೆ 150–175 ಕೆ.ಜಿ. ಹಿಪ್ಪುನೇರಳೆ ಸೊಪ್ಪನ್ನು ಕತ್ತರಿಸಬಹುದು
- ಈ ಯಂತ್ರವು 1/2 ಹೆಚ್.ಪಿ. ವಿದ್ಯುಚ್ಛಕ್ತಿ ಮೋಟರ್‌ನಿಂದ ಓಡುತ್ತದೆ
- ಈ ಯಂತ್ರವನ್ನು ಕೈಯಿಂದಲೂ ಕೂಡ ಚಲಾಯಿಸಬಹುದು

ಉಪಯೋಗಗಳು

- ಕಡಿಮೆ ಸಮಯದಲ್ಲಿ ಹೆಚ್ಚು ಪ್ರಮಾಣದ ಹಿಪ್ಪುನೇರಳೆ ಸೊಪ್ಪನ್ನು ಕತ್ತರಿಸಬಹುದು
- ಸೊಪ್ಪನ್ನು ಹುಳುಗಳ ಹಂತಕ್ಕನುಗುಣವಾಗಿ ಬೇರೆ ಬೇರೆ ಗಾತ್ರಗಳಲ್ಲಿ ಕತ್ತರಿಸಬಹುದು

- ಅಲ್ಪ ಅವಧಿಯಲ್ಲಿ ಬೃಹತ್ ಪ್ರಮಾಣದ ಸೊಪ್ಪನ್ನು ಕತ್ತರಿಸಲು ಅನುಕೂಲ
- ವಾಣಿಜ್ಯ ಚಾಕಿ ಕೇಂದ್ರಗಳಲ್ಲಿ ಹೆಚ್ಚು ಪ್ರಮಾಣದ ಹುಳುಗಳನ್ನು ನಿರ್ವಹಿಸಲು ಉಪಯುಕ್ತ

ಬೆಲೆ: ` 30,000/-

ಇದನ್ನು ಮಾಡಿ

- ಕತ್ತರಿಸುವ ಸಲುವಾಗಿ ಎಲೆಗಳನ್ನು ಯಂತ್ರದೊಳಗೆ ನವಿರಾಗಿ ಹಾಕಿ
- ಯಂತ್ರದ ಸುತ್ತ ಮುತ್ತ ಕೆಲಸ ಮಾಡಲು ಸಾಕಷ್ಟು ಸ್ಥಳಾವಕಾಶ ಕಲ್ಪಿಸಿ

ಇದನ್ನು ಮಾಡಬೇಡಿ

- ಕೈಯಿಂದ ಕಾರ್ಯ ನಿರ್ವಹಿಸುವಾಗ ವಿದ್ಯುತ್ ಪೂರೈಕೆ ಕೊಡಬೇಡಿ

ಹಿಪ್ಪುನೇರಳೆ ರೆಂಬೆ ಪುಡಿಮಾಡುವ ಯಂತ್ರ

- ಅಭಿವೃದ್ಧಿಪಡಿಸಿದ ವರ್ಷ: 1995

ಪ್ರಮುಖ ಅಂಶಗಳು

- ಈ ಯಂತ್ರವು ರೇಷ್ಮೆ ಕೃಷಿಯಲ್ಲಿ ದೊರಕುವ ತ್ಯಾಜ್ಯ ವಸ್ತುವಿನಿಂದ ಗೊಬ್ಬರ ಹಾಗೂ ಎರೆ ಗೊಬ್ಬರ ತಯಾರಿಸಲು ಉಪಯೋಗವಾಗುತ್ತದೆ
- ಈ ಯಂತ್ರವು ತೆಂಗಿನ ಸೋಗೆಯೂ ಸೇರಿದಂತೆ ಎಲ್ಲಾ ತರಹದ ಸಸ್ಯ ಪದಾರ್ಥಗಳನ್ನು ಕತ್ತರಿಸಿ ಪುಡಿ ಮಾಡುತ್ತದೆ
- ಈ ಯಂತ್ರವು 5 ಹೆಚ್.ಪಿ. ವಿದ್ಯುಚ್ಛಕ್ತಿ ಮೋಟರ್‌ನಿಂದ ಓಡುತ್ತದೆ

ಉಪಯೋಗಗಳು

- ಜೈವಿಕ ವಿಭಜಕ ವಸ್ತುಗಳನ್ನು ಗೊಬ್ಬರ ಅಥವಾ ಎರೆಗೊಬ್ಬರವಾಗಿ ಪರಿವರ್ತನೆಗೊಳ್ಳಲು ಅನುಕೂಲ ಮಾಡಿಕೊಡುತ್ತದೆ
- ಸಮಯ ಮತ್ತು ಶಕ್ತಿಯನ್ನು ಉಳಿಸುತ್ತದೆ

ಈ ಯಂತ್ರವು ಹಿಪ್ಪುನೇರಳೆ ರೆಂಬೆಗಳನ್ನು ಸಣ್ಣ ಸಣ್ಣ ತುಂಡುಗಳನ್ನಾಗಿ ಕತ್ತರಿಸಿ ಬಹಳ ಬೇಗನೆ ವಿಭಜನೆ ಹೊಂದಲು ಅನುವು ಮಾಡಿಕೊಡುತ್ತದೆ

ಬೆಲೆ: ` 40,000/-

ಇದನ್ನು ಮಾಡಿ

- ಪುಡಿಮಾಡಲು ರೆಂಬೆಗಳನ್ನು ಮಧ್ಯಮ ಪ್ರಮಾಣದಲ್ಲಿ ತುಂಬಿರಿ

ಇದನ್ನು ಮಾಡಬೇಡಿ

- ತುಂಬಾ ಗಟ್ಟಿಯಾಗಿರುವ ಮರದ ಭಾಗಗಳನ್ನು ಯಂತ್ರದ ಒಳಗೆ ತುಂಬಬಾರದು

ಚಾಕಿ ಸಾಕಾಣಿಕೆಯಲ್ಲಿ ಧೂಳು ಉದುರಿಸುವ ಯಂತ್ರ

- ಅಭಿವೃದ್ಧಿಪಡಿಸಿದ ವರ್ಷ: 2014

ಪ್ರಮುಖ ಅಂಶಗಳು

- ಚಾಕಿ ರೇಷ್ಮೆ ಹುಳುಗಳ ಮೇಲೆ ಸುಣ್ಣ ಹಾಗೂ ಹಾಸಿಗೆ ಸೋಂಕು ನಿವಾರಕಗಳನ್ನು ಉದುರಿಸಲು ಅನುವು ಮಾಡಿಕೊಡುತ್ತದೆ
- ಇದು ಒಂದು ವಿದ್ಯುತ್ ಚಾಲಿತ ಯಂತ್ರ

ಉಪಯೋಗಗಳು

- ದಕ್ಷ ಮತ್ತು ಧೀರ್ಘಕಾಲ ಬಾಳಿಕೆ ಬರುವಂಥದ್ದಾಗಿದೆ
- ಬಳಕೆದಾರ ಸ್ನೇಹಿ ಯಂತ್ರ

ಚಾಕಿ ಸಾಕಾಣಿಕಾ ಕೇಂದ್ರಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ತಟ್ಟೆಗಳನ್ನು ನಿರ್ವಹಿಸಬೇಕಾಗಿರುವುದರಿಂದ ಇದು ತುಂಬಾ ಪ್ರಯೋಜನಕಾರಿ ಸಮರ್ಥ ಮತ್ತು ವಿಕರೂಪದಲ್ಲಿ ಧೂಳು ಉದುರುವುದನ್ನು ಖಾತ್ರಿಗೊಳಿಸುತ್ತದೆ.

ಬೆಲೆ: ` 30,000/-

ಇದನ್ನು ಮಾಡಿ

- ನಯವಾದ ಮತ್ತು ಉಂಡೆಗಳಿಲ್ಲದ ಸುಣ್ಣ ಮತ್ತು ಹಾಸಿಗೆ ಸೋಂಕು ನಿವಾರಕಗಳನ್ನು ಬಳಸಿ

ಇದನ್ನು ಮಾಡಬೇಡಿ

- ತೇವ ಮತ್ತು ಒದ್ದೆಯಾಗಿರುವ ಪುಡಿಗಳನ್ನು ಈ ಯಂತ್ರದಲ್ಲಿ ಬಳಸಬೇಡಿ

ಹಣ್ಣು ಹುಳು ವಿಂಗಡಕ

- ಅಭಿವೃದ್ಧಿಪಡಿಸಿದ ವರ್ಷ: 2002

ಪ್ರಮುಖ ಅಂಶಗಳು

- ಸಣ್ಣ ಮತ್ತು ಮಧ್ಯಮ ಪ್ರಮಾಣದ ರೈತರಿಗೆ ಮಾನವ ಚಾಲಿತ ಹಾಗೂ ದೊಡ್ಡ ಪ್ರಮಾಣದ ರೈತರಿಗೆ ಮೋಟರ್ ಚಾಲಿತ ವಿಂಗಡಕಗಳು ಲಭ್ಯ

ಉಪಯೋಗಗಳು

- ಹಿಪ್ಪುನೇರಳೆ ರೆಂಬೆಗಳಿಂದ ಹಣ್ಣು ಹುಳುಗಳನ್ನು ಬೇರ್ಪಡಿಸಲು ಅನುವು ಮಾಡಿಕೊಡುತ್ತದೆ
- ಮಾನವ ಚಾಲಿತ ಯಂತ್ರವು ಒಂದು ಗಂಟೆಯಲ್ಲಿ ಸುಮಾರು 40–50 ಮೊಟ್ಟೆಯ ಹುಳುಗಳನ್ನು ವಿಂಗಡಣೆ ಮಾಡುತ್ತದೆ
- ಮೋಟರ್ ಚಾಲಿತ ಯಂತ್ರವು ಒಂದು ಗಂಟೆಯಲ್ಲಿ 125 ಕ್ಕೂ ಹೆಚ್ಚು ಮೊಟ್ಟೆಯ ಹುಳುಗಳನ್ನು ವಿಂಗಡಣೆ ಮಾಡುತ್ತದೆ

- ಸಮಯ ಮತ್ತು ಮಾನವ ಶಕ್ತಿಯ ಉಳಿತಾಯ
- ಹಾಸಿಗೆಯಲ್ಲಿ ಗೂಡು ಕಟ್ಟುವುದನ್ನು ತಪ್ಪಿಸಬಹುದು

ಬೆಲೆ: ಮಾನವ ಚಾಲಿತ ಯಂತ್ರ ` 6,000/-;
ಮೋಟರ್ ಚಾಲಿತ ಯಂತ್ರ ` 10,000/-

ಇದನ್ನು ಮಾಡಿ

- ವಿಂಗಡಣೆ ಮಾಡುವಾಗ ನವಿರಾಗಿ ಮಾಡಿದರೆ ಸಾಕು
- ಹುಳುಗಳಿಗೆ ಹಾನಿಯಾಗುವುದನ್ನು ತಪ್ಪಿಸಲು ಎಚ್ಚರಿಕೆಯಿಂದ ವಿಂಗಡಿಸಿ

ಇದನ್ನು ಮಾಡಬೇಡಿ

- ಹುಳು ಹಣ್ಣಾಗದ ಹೊರತು ಬೇರ್ಪಡಿಸಬೇಡಿ

ಕೋಣೆಯ ಉಷ್ಣಾಂಶ ಹೆಚ್ಚಿಸುವ ಯಂತ್ರ
(ಸೆರಿ ರೂಂ ಹೀಟರ್)

- ಅಭಿವೃದ್ಧಿಪಡಿಸಿದ ವರ್ಷ: 2006

ಪ್ರಮುಖ ಅಂಶಗಳು

- ಇದು ಒಂದು ವಿದ್ಯುತ್ ಚಾಲಿತ ಯಂತ್ರ
- ಹುಳುಸಾಕಾಣಿಕೆ ಮನೆಯೊಳಗೆ ಉಷ್ಣಾಂಶವನ್ನು ನಿರ್ವಹಿಸಲು ಸೂಕ್ತವಾಗಿದೆ

ಉಪಯೋಗಗಳು

- ದಕ್ಷ ಮತ್ತು ಧೀರ್ಘಕಾಲ ಬಾಳಿಕೆ ಬರುವಂಥದ್ದಾಗಿದೆ

ಹುಳುಸಾಕಾಣಿಕೆ ಮನೆಯಲ್ಲಿ ಅಗತ್ಯವಿರುವ ಉಷ್ಣಾಂಶವನ್ನು ನಿರ್ವಹಿಸುತ್ತದೆ

ಬೆಲೆ: ` 5,000/-

ಇದನ್ನು ಮಾಡಿ

- ಸಮತಟ್ಟಾದ ನೆಲದ ಮೇಲೆ ಇರಿಸಿ

ಇದನ್ನು ಮಾಡಬೇಡಿ

- ತೆರೆದ ರೀತಿಯ ಹುಳುಸಾಕಣೆ ಮನೆಗಳಲ್ಲಿ ಇದನ್ನು ಉಪಯೋಗಿಸಬೇಡಿ

ಶೈತ್ಯಾಂಶ ಮತ್ತು ಉಷ್ಣಾಂಶ ಹೆಚ್ಚಿಸುವ ಯಂತ್ರ

- ಅಭಿವೃದ್ಧಿಪಡಿಸಿದ ವರ್ಷ: 2007

ಪ್ರಮುಖ ಅಂಶಗಳು

- ಇದು ಶೈತ್ಯಾಂಶ ಮತ್ತು ಉಷ್ಣಾಂಶ ಎರಡನ್ನೂ ನಿರ್ವಹಿಸುವ ಯಂತ್ರ
- ಇದು ವಿದ್ಯುತ್ ಚಾಲಿತ ಯಂತ್ರ

ಉಪಯೋಗಗಳು

- ಹುಳುಸಾಕಾಣಿಕೆ ಮನೆಯೊಳಗೆ ಬಯಸಿದ ಶೈತ್ಯಾಂಶ ಮತ್ತು ಉಷ್ಣಾಂಶವನ್ನು ನಿರ್ವಹಿಸಬಹುದು

- ಚಾಕಿ ಹುಳು ಸಾಕಾಣಿಕೆಗೆ ಹೆಚ್ಚು ಸೂಕ್ತ
- ಬೇಸಿಗೆಯಲ್ಲಿ ಚಾಕಿ ಹುಳು ಸಾಕಾಣಿಗೆ ಅಗತ್ಯವಿರುವ ಶೈತ್ಯಾಂಶವನ್ನು ಕಾಪಾಡಿಕೊಳ್ಳಬಹುದು

ಬೆಲೆ: ` 16,000/-

ಇದನ್ನು ಮಾಡಿ

- ಯಂತ್ರದಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರು ಇರುವುದನ್ನು ಖಚಿತಪಡಿಸಿಕೊಳ್ಳಿ
- ಹುಳುವಿನ ಅಗತ್ಯಕ್ಕೆ ಹೊಂದಿಕೆಯಾಗುವಂತೆ ಉಷ್ಣಾಂಶವನ್ನು ಇಟ್ಟುಕೊಳ್ಳಿ

ಇದನ್ನು ಮಾಡಬೇಡಿ

- ತೆರೆದ ರೀತಿಯ ಹುಳುಸಾಕಣೆ ಮನೆಗಳಲ್ಲಿ ಇದನ್ನು ಉಪಯೋಗಿಸಬೇಡಿ

ಪ್ಲಾಸ್ಟಿಕ್ ತಟ್ಟೆಗಳ ಶುದ್ಧೀಕರಣ ಯಂತ್ರ

- ಅಭಿವೃದ್ಧಿಪಡಿಸಿದ ವರ್ಷ: 2015

ಪ್ರಮುಖ ಅಂಶಗಳು

- ಚಾಕಿ ಸಾಕಾಣಿಕಾ ಕೇಂದ್ರ ಹಾಗೂ ಮೊಟ್ಟೆ ಉತ್ಪಾದನಾ ಕೇಂದ್ರಗಳಲ್ಲಿ ನೈರ್ಮಲ್ಯತೆ ಕಾಪಾಡಲು ಅನುವು ಮಾಡಿಕೊಡುತ್ತದೆ
- ಚಾಕಿ ಸಾಕಾಣಿಕಾ ಕೇಂದ್ರಗಳಲ್ಲಿ ಪರಿಣಾಮಕಾರಿ ನಿರ್ವಹಣೆಗೆ ನೆರವಾಗುತ್ತದೆ
- ಒತ್ತಡದಿಂದ ನೀರನ್ನು ಸಿಂಪಡಿಸುವ ಮತ್ತು ಸುಸಜ್ಜಿತವಾಗಿ ಉಜ್ಜುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ

ಉಪಯೋಗಗಳು

- ತ್ವರಿತ ಮತ್ತು ಕಾರ್ಮಿಕ ವೆಚ್ಚ ಉಳಿಸುವ ಸಾಧನ
- ಖಾತರಿ ನೈರ್ಮಲ್ಯ ನಿರ್ವಹಣೆ

- ಚಾಕಿ ಸಾಕಾಣಿಕಾ ಕೇಂದ್ರ ಹಾಗೂ ಮೊಟ್ಟೆ ಉತ್ಪಾದನಾ ಕೇಂದ್ರಗಳಲ್ಲಿ ನೈರ್ಮಲ್ಯತೆ ಕಾಪಾಡಲು
- ಒಂದು ಗಂಟೆಗೆ ಸುಮಾರು 100 ತಟ್ಟೆಗಳನ್ನು ಶುದ್ಧಗೊಳಿಸುತ್ತದೆ

ಬೆಲೆ: ` 35,000/-

ಇದನ್ನು ಮಾಡಿ

- ಸಾಕಷ್ಟು ಪ್ರಮಾಣದಲ್ಲಿ ನೀರು ಮತ್ತು ಸೋಂಕುನಿವಾರಕಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಿ

ಇದನ್ನು ಮಾಡಬೇಡಿ

- ನಿರ್ದಿಷ್ಟ ಪಡಿಸಿದ ತಟ್ಟೆಗಳನ್ನು ಬಿಟ್ಟು ವಿವಿಧ ಆಯಾಮದ ತಟ್ಟೆಗಳನ್ನು ಇಡಬೇಡಿ

ರೋಟರಿ ಚಂದ್ರಿಕೆಗಳಿಂದ ಗೂಡುಗಳನ್ನು ಬಿಡಿಸುವ ಯಂತ್ರ

- ಅಭಿವೃದ್ಧಿಪಡಿಸಿದ ವರ್ಷ: 2001

ಪ್ರಮುಖ ಅಂಶಗಳು

- ರೋಟರಿ ಚಂದ್ರಿಕೆಗಳಿಂದ ಸುಲಭವಾಗಿ ಮತ್ತು ವೇಗವಾಗಿ ಗೂಡು ಬಿಡಿಸಲು ಅನುವು ಮಾಡಿಕೊಡುತ್ತದೆ
- ಕೈ ಚಾಲಿತ ಮತ್ತು ಕಾಲಿನಿಂದ ಕಾರ್ಯ ನಿರ್ವಹಿಸುವ ಯಂತ್ರಗಳು ಲಭ್ಯವಿದೆ

ಉಪಯೋಗಗಳು

- ಸಮಯ ಮತ್ತು ಮಾನವ ಶಕ್ತಿಯ ಉಳಿತಾಯ
- ಗೂಡು ಬಿಡಿಸುವಾಗ ಗೂಡುಗಳಿಗೆ ಯಾವುದೇ ಹಾನಿ ಉಂಟಾಗುವುದಿಲ್ಲ

ರೋಟರಿ ಚಂದ್ರಿಕೆಗಳಿಂದ ಗೂಡುಗಳನ್ನು ಸುಲಭವಾಗಿ ಮತ್ತು ವೇಗವಾಗಿ ಬಿಡಿಸಬಹುದು

ಬೆಲೆ: ` 8,000/-

ಇದನ್ನು ಮಾಡಿ

- ನವಿರಾಗಿ ಒತ್ತಡ ಹಾಕಿ
- ಗೂಡುಗಳನ್ನು ಹೊಂದಿರುವ ರೋಟರಿ ಫ್ರೇಮ್‌ಗಳನ್ನು ಸ್ಲಾಟ್‌ಗಳಲ್ಲಿ ಸರಿಯಾಗಿ ಕೂರಿಸಿ

ಇದನ್ನು ಮಾಡಬೇಡಿ

- ಕೈ ಚಾಲಿತ ಗೂಡು ಬಿಡಿಸುವ ಯಂತ್ರದಲ್ಲಿ ಒಂದೇ ಕಡೆ ಒತ್ತಡವನ್ನು ಹಾಕಬಾರದು

ಪ್ಲಾಸ್ಟಿಕ್ ಚಂದ್ರಿಕೆಯಿಂದ ಗೂಡುಗಳನ್ನು ಬಿಡಿಸುವ ಯಂತ್ರ

- ಅಭಿವೃದ್ಧಿಪಡಿಸಿದ ವರ್ಷ: 2015

ಪ್ರಮುಖ ಅಂಶಗಳು

- ವಿದ್ಯುತ್ ಚಾಲಿತ ಯಂತ್ರ
- ಸಮಯ ಮತ್ತು ಕಾರ್ಮಿಕ ಶ್ರಮದಲ್ಲಿ ಉಳಿತಾಯ

ಉಪಯೋಗಗಳು

- ಪ್ಲಾಸ್ಟಿಕ್ ಚಂದ್ರಿಕೆಗಳಿಂದ ಗೂಡುಗಳನ್ನು ಸುಲಭವಾಗಿ ಮತ್ತು ವೇಗವಾಗಿ ಬಿಡಿಸಬಹುದು
- ಒಂದು ಗಂಟೆಯಲ್ಲಿ 150–160 ಚಂದ್ರಿಕೆಗಳಲ್ಲಿ ಕಟ್ಟಿರುವ ಗೂಡುಗಳನ್ನು ಬಿಡಿಸಬಹುದು

ಪ್ಲಾಸ್ಟಿಕ್ ಚಂದ್ರಿಕೆಗಳಿಂದ ಸುಲಭವಾಗಿ ಗೂಡುಗಳನ್ನು ಬಿಡಿಸಬಹುದು

ಬೆಲೆ: ` 18,000/-

ಇದನ್ನು ಮಾಡಿ

- ಚಂದ್ರಿಕೆಗಳನ್ನು ಎರಡೂ ಶಾಫ್ಟ್/ಸರಳುಗಳ ಮಧ್ಯದಲ್ಲಿ ತೂರಿಸಿ ನಿಧಾನವಾಗಿ ತಳ್ಳಬೇಕು

ಇದನ್ನು ಮಾಡಬೇಡಿ

- ಒಮ್ಮೆಗೆ ಒಂದಕ್ಕಿಂತ ಹೆಚ್ಚು ಚಂದ್ರಿಕೆಗಳನ್ನು ಯಂತ್ರದೊಳಗೆ ಹಾಕಬೇಡಿ
- ಗೂಡು ಬಿಡಿಸುವ ಮುನ್ನ ಜಲ್ಲಿ ಹಾಗೂ ಜಂಟಿ ಗೂಡುಗಳನ್ನು ತೆಗೆದುಬಿಡಿ

ಗುಂಜು ಬಿಡಿಸುವ ಯಂತ್ರ

- ಅಭಿವೃದ್ಧಿಪಡಿಸಿದ ವರ್ಷ: 2002

ಪ್ರಮುಖ ಅಂಶಗಳು

- ನೇಯಲು ಅಸಾಧ್ಯವಾದ ಗುಂಜಿನ ಸಡಿಲ ಪದರವನ್ನು ಪರಿಣಾಮಕಾರಿಯಾಗಿ ತೆಗೆಯಬಹುದು
- ಮಾನವ ಚಾಲಿತ, ಮೋಟರ್ ಚಾಲಿತ ಹಾಗು ಮೋಟರ್ ಮತ್ತು ಕೈ ಚಾಲಿತ ಗುಂಜು ತೆಗೆಯುವ ಯಂತ್ರಗಳು ಲಭ್ಯವಿದೆ

ಉಪಯೋಗಗಳು

- ವೇಗವಾಗಿ ಕಾರ್ಯ ನಿರ್ವಹಿಸುವ ಮತ್ತು ಕಾರ್ಮಿಕ ಶ್ರಮ ಉಳಿತಾಯ ಸಾಧನ
- ಗುಂಜನ್ನು ಸಂಪೂರ್ಣವಾಗಿ ತೆಗೆಯುತ್ತದೆ
- ಕಡಿಮೆ ವೆಚ್ಚ

ನೇಯುವ ಮುನ್ನ ಗೂಡುಗಳನ್ನು ಗುಂಜು ತೆಗೆದು ಸ್ವಚ್ಚಗೊಳಿಸುತ್ತದೆ

ಬೆಲೆ: ಮಾನವ ಚಾಲಿತ ಯಂತ್ರ ` 2,500/-; ಮೋಟರ್ ಚಾಲಿತ ಯಂತ್ರ ` 17,000/- ಮೋಟರ್ ಮತ್ತು ಕೈ ಚಾಲಿತ ಯಂತ್ರ ` 10,000/-

ಇದನ್ನು ಮಾಡಿ

- ಗೂಡುಗಳನ್ನು ಒಂದೇ ಪದರದಲ್ಲಿ ತಳ್ಳಬೇಕು
- ಆಗಾಗ್ಗೆ ಸಂಗ್ರಹಗೊಂಡ ಗುಂಜನ್ನು ತೆಗೆದು ಸ್ವಚ್ಚಗೊಳಿಸುತ್ತಿರಬೇಕು

ಇದನ್ನು ಮಾಡಬೇಡಿ

- ಯಂತ್ರದ ಒಳಗೆ ಜಾಸ್ತಿ ಪ್ರಮಾಣದ ಗೂಡನ್ನು ಹಾಕಬೇಡಿ

ಪ್ಲಾಸ್ಟಿಕ್ ಚಂದ್ರಿಕೆ ಜೋಡಿಸುವ ಯಂತ್ರ

- ಅಭಿವೃದ್ಧಿಪಡಿಸಿದ ವರ್ಷ: 2002

ಪ್ರಮುಖ ಅಂಶಗಳು

- ಪ್ಲಾಸ್ಟಿಕ್ ಚಂದ್ರಿಕೆಗಳ ಆಕಾರವನ್ನು ನಿರ್ವಹಿಸಲು ಅನುವು ಮಾಡಿಕೊಡುತ್ತದೆ ಹೀಗೆ ಸಂಗ್ರಹಿಸಿಟ್ಟ ಪ್ಲಾಸ್ಟಿಕ್ ಚಂದ್ರಿಕೆಗಳ ಪರಿಣಾಮಕಾರಿತ್ವವು ಉತ್ತಮ ಗೂಡುಗಳನ್ನು ನೀಡುತ್ತದೆ

ಉಪಯೋಗಗಳು

- ಪ್ಲಾಸ್ಟಿಕ್ ಚಂದ್ರಿಕೆಗಳಲ್ಲಿ ಉತ್ತಮ ಆಕಾರ ನಿರ್ವಹಣೆಯಿಂದ ಒಳ್ಳೆಯ ಗೂಡುಗಳು ಉಂಟಾಗುತ್ತವೆ

ಪ್ಲಾಸ್ಟಿಕ್ ಚಂದ್ರಿಕೆಗಳನ್ನು ಮಡಿಸಿ, ಕಂತೆ ಕಟ್ಟಿ ಇರಿಸುವುದರಿಂದ ಉತ್ತಮ ಬಾಳಿಕೆ ಬರುತ್ತದೆ. ಪ್ಲಾಸ್ಟಿಕ್ ಚಂದ್ರಿಕೆಗಳು ಉಪಯೋಗದಲ್ಲಿ ಇಲ್ಲದಿದ್ದಾಗ ಸರಿಯಾಗಿ ಜೋಡಿಸಿ ಕಟ್ಟಿಡಲು ಅನುಕೂಲ

ಬೆಲೆ: ` 200/-

ಇದನ್ನು ಮಾಡಿ

- ಚಂದ್ರಿಕೆಗಳನ್ನು ಒಂದರ ನಂತರ ಒಂದರಂತೆ ಮಡಿಸಿ ಫ್ರೇಮ್‌ನೊಳಗೆ ಜೋಡಿಸಿ ಇಡಿ

ಇದನ್ನು ಮಾಡಬೇಡಿ

- ಮಡಿಸಿದ ನಂತರ ಹೊರೆಯನ್ನು ಮಾಡದೆ ಸಂರಕ್ಷಣೆ ಮಾಡಬೇಡಿ

ಬಿತ್ತನೆ ಗೂಡು ಕತ್ತರಿಸುವ ಯಂತ್ರ

- ಅಭಿವೃದ್ಧಿಪಡಿಸಿದ ವರ್ಷ: 1998

ಪ್ರಮುಖ ಅಂಶಗಳು

- ಮೊಟ್ಟೆ ಉತ್ಪಾದನಾ ಕೇಂದ್ರಗಳಲ್ಲಿ ಬಿತ್ತನೆ ಗೂಡುಗಳನ್ನು ಕತ್ತರಿಸಲು ಅನುಕೂಲ
- ಗೂಡು ಕತ್ತರಿಸುವಿಕೆಯಲ್ಲಿನ ಶ್ರಮವನ್ನು ಕಡಿಮೆ ಮಾಡುತ್ತದೆ
- ಗೂಡಿನ ಗಾತ್ರಕ್ಕನುಗುಣವಾಗಿ ಹೊಂದಿಕೆಯಾಗುತ್ತದೆ

ಉಪಯೋಗಗಳು

- ಬೀಜೋತ್ಪಾದನಾ ಕೇಂದ್ರಗಳಲ್ಲಿ ಸಮರ್ಥವಾದ ಬಿತ್ತನೆ ಗೂಡು ಕತ್ತರಿಸುವಿಕೆ
- ಒಂದು ಗಂಟೆಯಲ್ಲಿ 5,000–5,500 ಗೂಡುಗಳನ್ನು ಕತ್ತರಿಸಬಲ್ಲದು

ಉಪಯುಕ್ತತೆ

- ಬೀಜೋತ್ಪಾದನಾ ಕೇಂದ್ರಗಳಲ್ಲಿ ಬಿತ್ತನೆ ಗೂಡುಗಳನ್ನು ಸಮರ್ಥವಾಗಿ ಕತ್ತರಿಸಬಹುದು.

ಬೆಲೆ: ` 35,000/-

ಇದನ್ನು ಮಾಡಿ

- ಒಂದೇ ಸಮನಾದ ಗಾತ್ರದ ಗೂಡುಗಳನ್ನು ಆರಿಸಿ ಸ್ಲಾಟ್‌ನಲ್ಲಿ ಇರಿಸಿ

ಇದನ್ನು ಮಾಡಬೇಡಿ

- ಜಂಟಿ ಮತ್ತು ಜಲ್ಲಿ ಗೂಡುಗಳನ್ನು ಯಂತ್ರದಲ್ಲಿ ಬಿಡಬಾರದು

¹J¸ïDgïïnL-ªÀÉ¸ÆgÀ

»¥Á£ÃgÁ¼ gÀµÀ PÈ¶AiÀ°è GvÀ£µÁvAiÀqU

PÉÃAzÀægÉÃµÉà ¸ÀA±ÉÆÃzÀ£É ªÀÄvÀÄ vÀgÀ¨ÉÃw ¸ÀA¸É, ªÉÄÉ¸ÀÆgÀÄ £ÀªÀÄà zÉÃ±ÀzÀ »¥ÁæÃ£ÉÃgÁ¼É GzÀàªÀÄzÀ MmÁgÉ C©ªÀÈ¢ÛÁV ±ÀæïÄ¸ÀÄwgÀÄªÀ ¥ÀæªÀªÀiÁ£É£Ã±ÀPÀ ¸ÀA¸ÉÀ¤iÁVzÉ. gÉÃµÉà GvÁzÀPÀvÉ ªÀÄvÀÄ gÉÃµÉà PÀÈ¶PÀgÀ DzÁAiÀÄªÀ£ÀÄÐ ºÉà¸À®Ä ¥ÁÇtð ¥ÀæàÁtzÀ°è ¸ÀA±ÉÆÃzÀ£É, «¸ÀgÀuÉ ºÁUÀÆ ªÀåÁ£ÀªÀ ¸ÀA¥À£ÀÆà® C©ªÀÈ¢ÁÀÄ ¨ÉAS® ¤ÃqÀÄªÀ ¸ÀA¸ÉÀÀÄÆ ¸À°À DVgÀÄvÀzÉ. ¢ê½ gÉÃµÉà PÀÈ¶AiÀÄ°èMAzÀÄ GvÀ£µÀ CAvÀgÀ gÁ¶ÃAiÀÄ ¸ÀA¸ÉÀÀåÁUÀÄªÀ UÀÄ¸ AiÀÄ£ÀÄÐ ºÉÆEA¢zÀÄ ¹.J¸ï.Dgï.n.L., ªÉÄÉ¸ÀÆgÀÄ ªÀÄtÂAzÀ »rzÀÄ gÉÃµÉà GvÁzÀ£ÉÀiÀÄªÀgÉUÉ ªÉÊèÁ¤PÀ ªÀÄvÀÄ vÁAwÃPÀ £Á«£ÀàvÉUÀ¼ÀÄ, «¸ÀgÀuÁ ¤ªÀð°ÀuÉÀiÀÄ vÀAvÀÌÀ¼ÀÄ ªÀÄvÀÄ PË±À®è C©ªÀÈ¢ÀiÀÄ ªÀÄÆ®PÀ C¥ÁgÀ PÉÆqÀÄUÉ ¤Ãrzɹ

G£ÀßvÀ ¸ÀA±ÉÆÃzÀ£É£ÉUÀ¼À£ÀÄß £ÀqÉ¸À®Ä ¸ÀÄ¸ÀfvÀ ¥ÀÆÃ£ÉÆÃUÁ®AiÀÄUÀ¼ÀÄ, UÀÄtªÀÄ1¸zÀ »¥ÁæÃ£ÉÃgÁ¼É vÉÆÃ1UÀ¼ÀÄ, DzÀÄ¤PÀ UÀÆxÁ®AiÀÄ, PÀA¥ÀÇà1gï èÁ® ªÀÄvÀÄ §AÉÆÃ EÉÁªÉÃðÃnPï¹ PÉÃAzÀæ ¸ÁPÀµÀÄ ªÀÄÄÆ®¸ËPÀAiÀÄðUÀ¼ÀÄ EvÁ¢UÀ½AzÀ F ¸ÀA¸ÉÀiÀÄ ¸ÀÄ¸ÀfvÀªÁVzÉ. C©ªÀÈ¢¥Àrï¹zÀ vÁAwÃPÀvÉUÀ¼£ÀÄß ¥ÁæÃ£Ã²PÀ gÉÃµÉà ¸ÀA±ÉÆÃzÀ£É PÉÃAzÀæ °ÁUÀÆ ¸ÀA±ÉÆÃzÀ£É «¸ÀgÀuÁ PÉÃAzÀæGvÀ PÉÃAzÀÌÀ¼À°è ªÀåË°ãÁPÀj¸ÀÄªÀ ªÀåªÀ¸ÉÀiÀÄ£ÀÄß ªÀåÁqÀ¯ÁVzÉ. gÉÃµÉà PÀÈ¶ EAf¤AiÀÄj AUï «¨ÁUÀªÀÅ »¥ÁæÃ£ÉÃgÁ¼É ¨ÉÃ¸ÁAiÀÄ ªÀÄvÀÄ gÉÃµÉà ºÀÄ¼ÀÄ ¸ÁPÁtPÉAiÀÄ°è G¥ÀAiÀÄÄPÀªÁzÀ AiÀÄÄAvÀÌÀ¼À ªÀÄÄÆ® ªÀåÁzÀj UÀ¼À£ÀÄß «£Áà¸À ªÀåÁr vÀAiÀåÁgÀÄ ªÀåÁqÀÄÄwzÉ. ¸ÀA¸ÉÀiÀÄ vÀgÀ¨ÉÃw «¨ÁUÀªÀÅ gÉÃµÉà PÀÈ¶AiÀÄ°èC ªÀ®AC©vÀgÁzÀªÀj UÉ ºÁUÀÆ D¸ÀQ ºÉÆEA¢gÀÄªÀªÀj UÀµÉÃ C®zÉ ºÉÆgÀzÉÃ±ÀzÀ gÉÃµÉà G¢ªÉÃzÁgÀj UÀÆ ¸À°À F PÉÃvÀæÀ°è CªÀ±ÀåPÀªÁVgÀÄªÀ ¸ÁªÀÄxÀåð ªÀÄvÀÄ PË±À®è C©ªÀÈ¢ÁÀÄ §UÉ GvÀªÀÄªÁzÀ vÀgÀ¨ÉÃw ¤ÃqÀÄwzÉ. LJ¸ïM 9001:2015 ªÀåÁ£ÀåvÉ ºÉÆEA¢gÀÄªÀ F ¸ÀA¸ÉÀiÀ ¹§A¢ ªÀUÀðªÀÇ PÀÆqÀ ¨ÁgÀwÃAiÀÄ gÉÃµÉà PÀÈ¶AiÀÄÄ MAzÀÄ eÁUÀwPÀ ¸ÀzÁðvÀæPÀ GzÀàªÀÄªÁV GvÀÛ£µÀvÉ ¸Á¢ãÀ®Ä CªÀ±ÀåªÁzÀ ¨ÉAS®ªÀ£É£ÆÃßzÀV¸ÀÄªÀ°è¤¥ÁÌtgÁVgÀÄvÁgÉ.

qÁ. «. ²ªÀ¥ÀæÁzï
¤zÉðÃ±ÀPÀgÀÄ

Central Sericultural Research & Training Institute

ISO 9001 : 2015 Certified
Central Silk Board, Ministry of Textiles, Govt. of India,
Manandavadi Road, Srirampura, Mysuru - 570 008
Email: csrtimys.csb@nic.in www.csrtimys.res.in

September 2017

ಸಿಎಸ್‌ಆರ್‌ಟಿಐ–ಮೈಸೂರು

ದಕ್ಷಿಣ ವಲಯ
ಹಿಪ್ಪುನೇರಳೆ ರೇಷ್ಮೆ ಕೃಷಿ

ತಂತ್ರಜ್ಞಾನ ವಿವರಕ

ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ (ಸಿ.ಎಸ್.ಆರ್.ಟಿ.ಐ.)
ಐ ಎಸ್ ಓ 9001:2015 ದೃಢೀಕರಣಗೊಂಡಿದೆ
ಕೇಂದ್ರ ರೇಷ್ಮೆ ಮಂಡಳಿ (ಸಿ.ಎಸ್.ಬಿ), ಜವಳಿ ಸಚಿವಾಲಯ, ಭಾರತ ಸರ್ಕಾರ
ಮಾನಂದವಾಡಿ ರಸ್ತೆ, ಶ್ರೀರಾಂಪುರ, ಮೈಸೂರು–570008, ಕರ್ನಾಟಕ

ದಕ್ಷಿಣ ವಲಯ ಹಿಪ್ಪುನೇರಳೆ ರೇಷ್ಮೆ ಕೃಷಿ
ತಂತ್ರಜ್ಞಾನ ವಿವರಕ

ಮೊದಲನೆ ಮುದ್ರಣ: ಡಿಸಂಬರ್ 2016
ಎರಡನೆ ಮುದ್ರಣ: ಸಪ್ಟೆಂಬರ್ 2017

ಪ್ರತಿಗಳು: 1000

ಭಾಷೆ: ಕನ್ನಡ

© ಎಲ್ಲಾ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ

ಸಂಯೋಜಕರು
ಬಾಲವೆಂಕಟಸುಬ್ಬಯ್ಯ ಎಮ್
ಮಾಲ್ ರೆಡ್ಡಿ ಎನ್
ಮೊಗಿಲಿ ಟಿ
ಮುನಿರತ್ನಂ ರೆಡ್ಡಿ ಎಮ್
ನರೇಂದ್ರ ಕುಮಾರ್ ಜೆ ಬಿ
ರಾಜಶೇಖರ್ ಕೆ
ಸತೀಶ್ ವರ್ಮ

ಕನ್ನಡ ಅನುವಾದ
ನರೇಂದ್ರ ಕುಮಾರ್ ಜೆ ಬಿ
ರಾಜಶೇಖರ್ ಕೆ

ವಿನ್ಯಾಸ
ಜಸ್ಟಿನ್ ಕುಮಾರ್ ಜೆ

ಸಂಪಾದಕರು
ಡಾ. ವಿ. ಶಿವಪ್ರಸಾದ್
ನಿರ್ದೇಶಕರು
ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ (ಸಿ.ಎಸ್.ಆರ್.ಟಿ.ಐ.)
ಕೇಂದ್ರ ರೇಷ್ಮೆ ಮಂಡಳಿ, ಜವಳಿ ಸಚಿವಾಲಯ, ಭಾರತ ಸರ್ಕಾರ
ಮಾನಂದವಾಡಿ ರಸ್ತೆ, ಶ್ರೀರಾಂಪುರ, ಮೈಸೂರು–570008, ಕರ್ನಾಟಕ

ಮುನ್ನುಡಿ

ಹಿಪ್ಪುನೇರಳೆ ರೇಷ್ಮೆ ಕೃಷಿಯಲ್ಲಿ ಯಶಸ್ವಿಯಾಗಿ ಅಳವಡಿಸಿಕೊಂಡಿರುವ ತಾಂತ್ರಿಕತೆಗಳು ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯಲ್ಲಿ ಆವಿಷ್ಕಾರಗೊಂಡು ಶಿಫಾರಸ್ಸು ಮಾಡಲ್ಪಟ್ಟಿರುತ್ತವೆ. ಸಂಸ್ಥೆಯು ದಕ್ಷಿಣದ ರಾಜ್ಯಗಳಲ್ಲಿನ ರೇಷ್ಮೆ ಕೃಷಿಯ ಪ್ರಗತಿಗೆ ಅಗತ್ಯವಿರುವ ಪ್ರೇರಣೆಯನ್ನು ನೀಡುವುದಲ್ಲದೆ ದೇಶದಲ್ಲಿನ ಅಗಾಧ ರೇಷ್ಮೆ ಉತ್ಪಾದನೆಗೆ ಹಲವಾರು ಕೊಡುಗೆಗಳನ್ನೂ ಸಹ ನೀಡಿದೆ. ತಂತ್ರಜ್ಞಾನ ಪರಿಷ್ಕರಣೆ, ಸಮಯೋಚಿತ ಮಧ್ಯವರ್ತಿ ಹಾಗೂ ಅಭಿವೃದ್ಧಿಯ ಮೂಲಕ ಉತ್ಪಾದಕತೆಯಲ್ಲಿ ಉತ್ತಮ ಏಳಿಗೆ ಸಾಧಿಸಲು ಸಾಧ್ಯವಾಗಿದೆ. ರೇಷ್ಮೆ ಕೃಷಿಕರು ರೇಷ್ಮೆ ಹುಳುವಿನ ಹೊಸ ತಳಿಗಳು, ಹಿಪ್ಪುನೇರಳೆ ತಳಿಗಳು, ಯಂತ್ರಗಳು ಮತ್ತು ಉತ್ಪನ್ನಗಳು, ಬೆಳೆ ಉತ್ಪಾದನಾ ಮತ್ತು ಸಂರಕ್ಷಣಾ ತಾಂತ್ರಿಕತೆಗಳು ಇತ್ಯಾದಿಗಳನ್ನು ಅಳವಡಿಸಿಕೊಂಡು ಉತ್ತಮ ಲಾಭವನ್ನು ಪಡೆದುಕೊಳ್ಳುತ್ತಿದ್ದಾರೆ. ರೇಷ್ಮೆ ಕೃಷಿಯಲ್ಲಿ ಶಿಫಾರಸ್ಸು ಮಾಡಲಾಗಿರುವ ಸುಧಾರಿತ ಬೇಸಾಯ ಪದ್ಧತಿಗಳಿಂದ ಹೆಚ್ಚಿನ ಉತ್ಪಾದಕತೆ ಮತ್ತು ಸ್ಥಿರತೆಯನ್ನು ಪಡೆದುಕೊಂಡಿರುವ ಮೂಲಕ ಹೊಸದಾಗಿ ಅಭಿವೃದ್ಧಿಪಡಿಸಿದ ಹಿಪ್ಪುನೇರಳೆ ತಳಿಗಳ ಮತ್ತು ಹೈಬ್ರಿಡ್ ರೇಷ್ಮೆ ತಳಿಗಳ ಸಾಮರ್ಥ್ಯವನ್ನು ಕ್ಷೇತ್ರಮಟ್ಟದಲ್ಲಿ ಸಾದರಪಡಿಸಲು ಸಾಧ್ಯವಾಗಿದೆ.

ಸಿಎಸ್‌ಆರ್‌ಟಿಐ ಒಂದು ಪ್ರಧಾನ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯಾಗಿದ್ದು, ದಕ್ಷಿಣ ಭಾರತದ ರಾಜ್ಯಗಳಲ್ಲಿ ಹಾಗೂ ಇಡೀ ದೇಶದಲ್ಲಿನ ರೇಷ್ಮೆ ಕೃಷಿಯಲ್ಲಿ ಹೆಚ್ಚಳಗೊಂಡ ಉತ್ಪಾದಕತೆ ಬಗ್ಗೆ ಹೆಮ್ಮೆ ಪಡುತ್ತದೆ. "ದಕ್ಷಿಣ ವಲಯ ಹಿಪ್ಪುನೇರಳೆ ರೇಷ್ಮೆ ಕೃಷಿ ತಂತ್ರಜ್ಞಾನ ವಿವರಕ" ಎಂಬ ಈ ಪುಸ್ತಕವು ದಕ್ಷಿಣದ ರಾಜ್ಯಗಳಲ್ಲಿನ ರೇಷ್ಮೆ ಕೃಷಿಕರು ವ್ಯಾಪಕವಾಗಿ ಅಂಗೀಕರಿಸಿದ ತಂತ್ರಜ್ಞಾನಗಳ ಅಂಶಗಳನ್ನು ತಿಳಿಸಿಕೊಡುತ್ತದೆ. ಈ ನಿಟ್ಟಿನಲ್ಲಿ ಸಿಎಸ್‌ಆರ್‌ಟಿಐ, ಮೈಸೂರಿನ ವಿಜ್ಞಾನಿಗಳು ಮತ್ತು ತಾಂತ್ರಿಕ ಸಿಬ್ಬಂದಿ ವರ್ಗದವರ ಕೊಡುಗೆಗಳ ಬಗ್ಗೆ ಅಪಾರ ಮೆಚ್ಚುಗೆ ವ್ಯಕ್ತಪಡಿಸುತ್ತೇನೆ. ಸುಸಂಗತವಾದ ರೀತಿಯಲ್ಲಿ ಬೆಂಬಲ ನೀಡಿ ಈ ಪ್ರಕಟಣೆಯನ್ನು ಹೊರತರಲು ಸಹಕರಿಸಿದ ಶ್ರೀ. ಹನುಮಂತರಾಯಪ್ಪ, ಅಧ್ಯಕ್ಷರು, ಕೇಂದ್ರ ರೇಷ್ಮೆ ಮಂಡಳಿ ಮತ್ತು ಡಾ. ಎಚ್. ನಾಗೇಶ್ ಪ್ರಭು, ಐ.ಎಫ್.ಎಸ್., ಸದಸ್ಯ ಕಾರ್ಯದರ್ಶಿ, ಕೇಂದ್ರ ರೇಷ್ಮೆ ಮಂಡಳಿ ಇವರನ್ನು ಅಭಿನಂದಿಸುತ್ತೇನೆ. ಈ ಪುಸ್ತಕವು ರೇಷ್ಮೆ ಕೃಷಿಕರಿಗೆ, ಸಿಬ್ಬಂದಿ ಮತ್ತು ಇತರೆ ಭಾಗೀದಾರರಿಗೆ ಅಪಾರವಾದ ಸಹಾಯವನ್ನು ನೀಡಲಿದೆ ಎಂದು ನಂಬಿರುತ್ತೇನೆ.

ವಿ. ಶಿವಪ್ರಸಾದ್
ನಿರ್ದೇಶಕರು
ಸಿ.ಎಸ್.ಆರ್.ಟಿ.ಐ., ಮೈಸೂರು

ಪರಿವಿಡಿ

ಹಿಪ್ಪುನೇರಳೆ ತಳಿಗಳು 01-12

ಹಿಪ್ಪುನೇರಳೆ: ಉತ್ಪಾದನೆ ಮತ್ತು ಸಂರಕ್ಷಣೆ 13-33

ಸಂಕರಣ ರೇಷ್ಮೆ ತಳಿಗಳು 34-43

ರೇಷ್ಮೆಹುಳು ಸಾಕಾಣಿಕೆ: ಉತ್ಪಾದನೆ & ಸಂರಕ್ಷಣೆ 44-69

ಯಾಂತ್ರೀಕರಣ 70-83

ಹಿಪ್ಪುನೇರಳೆ ತಳಿಗಳು

ವಿ1

- ಶಿಫಾರಸ್ಸು ಮಾಡಿದ ವರ್ಷ: 1997
- ಪಿತೃತ್ವ: ಎಸ್ 30 × ಸಿ776

ಪ್ರಮುಖ ಅಂಶಗಳು

- ಕಟಾವಿನ ಅಥವಾ ಎಲೆ ಬಿಡಿಸಿದ ನಂತರ ತ್ವರಿತ ಚಿಗುರುವಿಕೆ
- ಹೆಚ್ಚು ಬೇರೂರುವ ಕ್ಷಮತೆ (94%)
- ಎಲೆಯ ಲಕ್ಷಣಗಳು: ದೊಡ್ಡದಾದ, ಪೂರ್ತಿಯಾದ, ಅಂಡಾಕಾರದ, ನುಣುಪಾದ, ಹೊಳಪು ಮತ್ತು ದಟ್ಟ ಹಸಿರು ಬಣ್ಣದಿಂದ ಕೂಡಿದೆ.
- ಗಿಣ್ಣುಗಳ ನಡುವಿನ ಅಂತರ: 5.2 ಸೆಂ.ಮೀ.
- ತಡೆದುಕೊಳ್ಳುವ ಶಕ್ತಿ –
  - ಚುಕ್ಕೆ ರೋಗ
  - ಬೂದಿ ರೋಗ
  - ತುಕ್ಕು ರೋಗ
- ಬೆಂಕಿ ರೋಗಕ್ಕೆ ಸಾಧಾರಣ ಸಹಿಷ್ಣುತೆ
- ವಾರ್ಷಿಕ ಇಳುವರಿ ಸಾಮರ್ಥ್ಯ: 50–60 ಮೆ.ಟನ್/ಹೆಕ್ಟೇರ್



ಶಿಫಾರಸ್ಸು ಮಾಡಲಾಗಿರುವ ಪ್ರದೇಶ

ಎಲ್ಲಾ ದಕ್ಷಿಣದ ರಾಜ್ಯಗಳ ನೀರಾವರಿ ಪ್ರದೇಶಗಳು

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ಸುಧಾರಿತ ಬೇಸಾಯ ಪದ್ಧತಿ ಅಳವಡಿಸಿಕೊಳ್ಳಿ

- ಶಿಫಾರಸ್ಸು ಮಾಡಿದ ವರ್ಷ: 2003
- ಪಿತೃತ್ವ: ಮೋರಸ್ ಮಲ್ಟಿಕಾಲಿಸ್ × ಎಸ್ 13

ಪ್ರಮುಖ ಅಂಶಗಳು

- ಕಟಾವಿನ ಅಥವಾ ಎಲೆ ಬಿಡಿಸಿದ ನಂತರ ತ್ವರಿತ ಚಿಗುರುವಿಕೆ
- ಹೆಚ್ಚು ಬೇರೂರುವ ಕ್ಷಮತೆ (92%)
- ಎಲೆಯ ಗುಣಲಕ್ಷಣಗಳು: ದೊಡ್ಡದಾದ, ಪೂರ್ಣವಾದ, ಹೃದಯಾಕಾರವನ್ನು ಹೊಂದಿದ್ದು, ನಯವಾದ ಹೊಳಪು, ಅಲೆಯಂತಹ ಮೇಲ್ಮೈ ಮತ್ತು ದಟ್ಟ ಹಸಿರು ಬಣ್ಣದಿಂದ ಕೂಡಿದೆ
- ಗಿಣ್ಣುಗಳ ನಡುವಿನ ಅಂತರ: 3.9 ಸೆಂ.ಮೀ.
- ತಡೆದುಕೊಳ್ಳುವ ಶಕ್ತಿ –
  - ಚುಕ್ಕೆ ರೋಗ
- ತುಕ್ಕು ರೋಗಕ್ಕೆ ಸಹಿಷ್ಣುತೆ
- ವಾರ್ಷಿಕ ಇಳುವರಿ ಸಾಮರ್ಥ್ಯ: 65 ಮೆ.ಟನ್/ಹೆಕ್ಟೇರ್



ಶಿಫಾರಸ್ಸು ಮಾಡಲಾಗಿರುವ ಪ್ರದೇಶ

ದಕ್ಷಿಣದ ರಾಜ್ಯಗಳ ನೀರಾವರಿ ಪ್ರದೇಶಗಳು

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ಸುಧಾರಿತ ಬೇಸಾಯ ಪದ್ಧತಿ ಅಳವಡಿಸಿಕೊಳ್ಳಿ

ಎಸ್13

- ಶಿಫಾರಸ್ಸು ಮಾಡಿದ ವರ್ಷ: 1990
- ಪಿತೃತ್ವ: ಕಣ್ವ 2 ರ ಮುಕ್ತ ಪರಾಗಸ್ಪರ್ಷ

ಪ್ರಮುಖ ಅಂಶಗಳು

- ಕಟಾವಿನ ಅಥವಾ ಎಲೆ ಬಿಡಿಸಿದ ನಂತರ ತ್ವರಿತ ಚಿಗುರುವಿಕೆ
- ಹೆಚ್ಚು ಬೇರೂರುವ ಕ್ಷಮತೆ (80%)
- ಎಲೆ: ಅಂಡಾಕಾರದ, ಸಣ್ಣ, ಪೂರ್ತಿಯಾದ ಎಲೆಗಳು
- ಗಿಣ್ಣುಗಳ ನಡುವಿನ ಅಂತರ : 3.2 ಸೆಂ.ಮೀ.
- ತಡೆದುಕೊಳ್ಳುವ ಶಕ್ತಿ –
  - ಚುಕ್ಕೆ ರೋಗ
  - ಬೂದಿ ರೋಗ
  - ತುಕ್ಕು ರೋಗ
- ತುಕ್ರಾ ಬೂಸ್ಟು ತಿಗಣೆಗೆ ಸಾಧಾರಣ ಸಹಿಷ್ಣುತೆ
- ವಾರ್ಷಿಕ ಇಳುವರಿ ಸಾಮರ್ಥ್ಯ: 13–16 ಮೆ.ಟನ್/ಹೆಕ್ಟೇರ್



ಶಿಫಾರಸ್ಸು ಮಾಡಲಾಗಿರುವ ಪ್ರದೇಶ

ದಕ್ಷಿಣದ ರಾಜ್ಯಗಳ ಕೆಂಪು ಮಣ್ಣುಳ್ಳ ಅರೆ ಶುಷ್ಕ ಪ್ರದೇಶಗಳು

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ಸುಧಾರಿತ ಬೇಸಾಯ ಪದ್ಧತಿ ಅಳವಡಿಸಿಕೊಳ್ಳಿ

ಎಸ್ 34

- ಶಿಫಾರಸ್ಸು ಮಾಡಿದ ವರ್ಷ: 1990
- ಪಿತೃತ್ವ: ಎಸ್ 30 × ಸಿ776

ಪ್ರಮುಖ ಅಂಶಗಳು

- ಕಟಾವಿನ ಅಥವಾ ಎಲೆ ಬಿಡಿಸಿದ ನಂತರ ತ್ವರಿತ ಚಿಗುರುವಿಕೆ
- ಹೆಚ್ಚು ಬೇರೂರುವ ಕ್ಷಮತೆ (75%)
- ಎಲೆಯ ಆಕಾರ: ಹೃದಯಾಕಾರದ, ಸಣ್ಣ ಮತ್ತು ಪೂರ್ತಿಯಾದ ಎಲೆಗಳು
- ಗಿಣ್ಣುಗಳ ನಡುವಿನ ಅಂತರ : 3.4 ಸೆಂ.ಮೀ.
- ತಡೆದುಕೊಳ್ಳುವ ಶಕ್ತಿ –
  - ಚುಕ್ಕೆ ರೋಗ
  - ಬೂದಿ ರೋಗ
  - ತುಕ್ಕು ರೋಗ
- ವಾರ್ಷಿಕ ಇಳುವರಿ ಸಾಮರ್ಥ್ಯ: 13–16 ಮೆ.ಟನ್/ಹೆಕ್ಟೇರ್



ಶಿಫಾರಸ್ಸು ಮಾಡಲಾಗಿರುವ ಪ್ರದೇಶ

ದಕ್ಷಿಣದ ರಾಜ್ಯಗಳ ಕಪ್ಪು ಮಣ್ಣುಳ್ಳ ಅರೆ ಶುಷ್ಕ ಪ್ರದೇಶಗಳು

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ಸುಧಾರಿತ ಬೇಸಾಯ ಪದ್ಧತಿ ಅಳವಡಿಸಿಕೊಳ್ಳಿ



ಎಮ್ ಎಸ್ ಜಿ 2

- ಶಿಫಾರಸ್ಸು ಮಾಡಿದ ವರ್ಷ: 2015
- ಪಿತೃತ್ವ: ಬಿಆರ್4 × ಎಸ್13

ಪ್ರಮುಖ ಅಂಶಗಳು

- ಕಟಾವಿನ ಅಥವಾ ಎಲೆ ಬಿಡಿಸಿದ ನಂತರ ತ್ವರಿತ ಚಿಗುರುವಿಕೆ
- ಹೆಚ್ಚು ಬೇರೂರುವ ಕ್ಷಮತೆ (89%)
- ಎಲೆಯ ಗುಣಲಕ್ಷಣಗಳು: ದೊಡ್ಡದಾದ, ಪೂರ್ತಿಯಾದ, ಹೃದಯಾಕಾರವನ್ನು ಹೊಂದಿದ್ದು, ನಯವಾದ, ದಟ್ಟ ಹಸಿರು ಬಣ್ಣದಿಂದ ಕೂಡಿದೆ
- ಗಿಣ್ಣುಗಳ ನಡುವಿನ ಅಂತರ: 4.5 ಸೆಂ.ಮೀ.
- ಮಧ್ಯಮ ತಡೆದುಕೊಳ್ಳುವ ಶಕ್ತಿ –
  - ಚುಕ್ಕೆ ರೋಗ
  - ಬೂದಿ ರೋಗಗಳನ್ನು
- ವಾರ್ಷಿಕ ಇಳುವರಿ ಸಾಮರ್ಥ್ಯ: 22–23 ಮೆ.ಟನ್/ಹೆಕ್ಟೇರ್



ಶಿಫಾರಸ್ಸು ಮಾಡಲಾಗಿರುವ ಪ್ರದೇಶ

ದಕ್ಷಿಣದ ರಾಜ್ಯಗಳ ಅರೆ ಶುಷ್ಕ ಪ್ರದೇಶಗಳಿಗೆ

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ರಕ್ಷಣಾತ್ಮಕ ನೀರಾವರಿಯಲ್ಲಿ ಸಣ್ಣ ಮರಗಳಾಗಿ ಬೆಳೆಸಲು ಈ ತಳಿ ಸೂಕ್ತ



ಎಸ್ 36

- ಶಿಫಾರಸ್ಸು ಮಾಡಿದ ವರ್ಷ: 1986
- ಪಿತೃತ್ವ: ಬೆರ್ಹಾಂಪುರ್ ಲೋಕಲ್‌ನ ಉತ್ಪರಿವರ್ತನೆ (ಮ್ಯೂಟೆಂಟ್)

ಪ್ರಮುಖ ಅಂಶಗಳು

- ಕಟಾವಿನ ಅಥವಾ ಎಲೆ ಬಿಡಿಸಿದ ನಂತರ ತ್ವರಿತ ಚಿಗುರುವಿಕೆ
- ಕಡಿಮೆ ಬೇರೂರುವ ಕ್ಷಮತೆ (48%)
- ಎಲೆಯ ಗುಣಲಕ್ಷಣಗಳು: ದೊಡ್ಡದಾದ, ಪೂರ್ತಿಯಾದ, ಹೃದಯಾಕಾರವನ್ನು ಹೊಂದಿದ್ದು, ನುಣುಪಾದ ಹೊಳಪು ಮತ್ತು ತಿಳಿ ಹಸಿರು ಬಣ್ಣದಿಂದ ಕೂಡಿದೆ
- ಗಿಣ್ಣುಗಳ ನಡುವಿನ ಅಂತರ ಕಡಿಮೆ : 3.53 ಸೆಂ.ಮೀ.
- ತಡೆದುಕೊಳ್ಳುವ ಶಕ್ತಿ –
  - ಜಿಕ್ಕೆ ರೋಗ
  - ಬೂದಿ ರೋಗ
  - ತುಕ್ಕು ರೋಗ
- ಬೆಂಕಿ ರೋಗಕ್ಕೆ ಸಾಧಾರಣ ಸಹಿಷ್ಣುತೆ
- ವಾರ್ಷಿಕ ಇಳುವರಿ ಸಾಮರ್ಥ್ಯ: 28 ಮೆ.ಟನ್/ಹೆಕ್ಟೇರ್



ಶಿಫಾರಸ್ಸು ಮಾಡಲಾಗಿರುವ ಪ್ರದೇಶ

ಕರ್ನಾಟಕ, ತಮಿಳುನಾಡು, ತೆಲಂಗಾಣ ಹಾಗೂ ಆಂಧ್ರ ಪ್ರದೇಶ ರಾಜ್ಯಗಳ ಜಂಬು ಮಣ್ಣುಳ್ಳ ಚಾಕಿ ಹಿಪ್ಪುನೇರಳೆ ತೋಟಗಳು

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ಸುಧಾರಿತ ಬೇಸಾಯ ಪದ್ಧತಿ ಅಳವಡಿಸಿಕೊಳ್ಳಿ

ಜಿ2

- ಶಿಫಾರಸ್ಸು ಮಾಡಿದ ವರ್ಷ: 2004
- ಪಿತೃತ್ವ: ಮೋರಸ್ ಮಲ್ಟಿಕಾಲಿಸ್ × ಎಸ್34

ಪ್ರಮುಖ ಅಂಶಗಳು

- ಕಟಾವಿನ ಅಥವಾ ಎಲೆ ಬಿಡಿಸಿದ ನಂತರ ತ್ವರಿತ ಚಿಗುರುವಿಕೆ
- ಹೆಚ್ಚು ಬೇರೂರುವ ಕ್ಷಮತೆ (94%)
- ಎಲೆಯ ಗುಣಲಕ್ಷಣಗಳು: ದೊಡ್ಡದಾದ, ಪೂರ್ಣವಾದ, ಹೃದಯಾಕಾರವನ್ನು ಹೊಂದಿದ್ದು, ನಯವಾದ ಹೊಳಪು, ಸಾಧಾರಣ ಅಲೆಯಂತಹ ಮೇಲ್ಮೈ ಮತ್ತು ದಟ್ಟ ಹಸಿರು ಬಣ್ಣದಿಂದ ಕೂಡಿದೆ
- ಗಿಣ್ಣುಗಳ ನಡುವಿನ ಅಂತರ: 4.5 ಸೆಂ.ಮೀ.
- ತಡೆದುಕೊಳ್ಳುವ ಶಕ್ತಿ –
  - ಚುಕ್ಕೆ ರೋಗ
  - ಬೂದಿ ರೋಗ
- ವಾರ್ಷಿಕ ಇಳುವರಿ ಸಾಮರ್ಥ್ಯ: 36–38 ಮೆ.ಟನ್/ಹೆಕ್ಟೇರ್ (ಸೊಪ್ಪು ಬಿಡಿಸುವುದು ಮತ್ತು ರೆಂಬೆ ಕತ್ತರಿಸುವುದು ಕ್ರಮವಾಗಿ ಒಂದರ ನಂತರ ಒಂದರಂತೆ ವರ್ಷಕ್ಕೆ ನಿಗದಿತ 8 ಬೆಳೆಗಳು)



ಶಿಫಾರಸ್ಸು ಮಾಡಲಾಗಿರುವ ಪ್ರದೇಶ

ವಿಶೇಷವಾಗಿ ಚಾಕಿ ತೋಟಗಳಿಗೆ, ಅದರಲ್ಲೂ ದಕ್ಷಿಣದ ರಾಜ್ಯಗಳ ಕೆಂಪು ಜಂಬು ಮಣ್ಣುಳ್ಳ ಹಿಪ್ಪುನೇರಳೆ ತೋಟಗಳು

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ಸುಧಾರಿತ ಬೇಸಾಯ ಪದ್ಧತಿ ಅಳವಡಿಸಿಕೊಳ್ಳಿ



ಆರ್‌ಸಿ1

- ಶಿಫಾರಸ್ಸು ಮಾಡಿದ ವರ್ಷ: 2003
- ಪಿತೃತ್ವ: ಪಂಜಾಬ್ ಲೋಕಲ್ × ಕೋಸೆನ್

ಪ್ರಮುಖ ಅಂಶಗಳು

- ಕಟಾವಿನ ಅಥವಾ ಎಲೆ ಬಿಡಿಸಿದ ನಂತರ ತ್ವರಿತ ಚಿಗುರುವಿಕೆ
- ಹೆಚ್ಚು ಬೇರೂರುವ ಸಾಮರ್ಥ್ಯ (85%)
- ಎಲೆಯ ಗುಣಲಕ್ಷಣಗಳು: ದೊಡ್ಡದಾದ, ಪೂರ್ತಿಯಾದ, ಹೃದಯಾಕಾರವನ್ನು ಹೊಂದಿದ್ದು, ನಯವಾದ ಮತ್ತು ದಟ್ಟ ಹಸಿರು ಬಣ್ಣದಿಂದ ಕೂಡಿದೆ
- ಗಿಣ್ಣುಗಳ ನಡುವಿನ ಅಂತರ: 4.3 ಸೆಂ.ಮೀ.
- ತಡೆದುಕೊಳ್ಳುವ ಶಕ್ತಿ –
  - ಚುಕ್ಕೆ ರೋಗ
  - ತುಕ್ಕು ರೋಗಕ್ಕೆ ಸಾಧಾರಣ ಸಹಿಷ್ಣುತೆ
- ವಾರ್ಷಿಕ ಇಳುವರಿ ಸಾಮರ್ಥ್ಯ: 23–25 ಮೆ.ಟನ್/ಹೆಕ್ಟೇರ್



ಶಿಫಾರಸ್ಸು ಮಾಡಲಾಗಿರುವ ಪ್ರದೇಶ

ಸಂಪನ್ಮೂಲ ನಿರ್ಬಂಧ ಪರಿಸ್ಥಿತಿಗಳಿಗೆ (ಶೇ. 50 ರಷ್ಟು ನೀರಾವರಿ ಮತ್ತು ರಸಗೊಬ್ಬರ ಬಳಸಲ್ಪಟ್ಟಾಗ)

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ಸುಧಾರಿತ ಬೇಸಾಯ ಪದ್ಧತಿ ಅಳವಡಿಸಿಕೊಳ್ಳಿ

ಆರ್‌ಸಿ2

- ಶಿಫಾರಸ್ಸು ಮಾಡಿದ ವರ್ಷ: 2004
- ಪಿತೃತ್ವ: ಪಂಜಾಬ್ ಲೋಕಲ್ × ಕೋಸೆನ್

ಪ್ರಮುಖ ಅಂಶಗಳು

- ಕಟಾವಿನ ಅಥವಾ ಎಲೆ ಬಿಡಿಸಿದ ನಂತರ ತ್ವರಿತ ಚಿಗುರುವಿಕೆ
- ಹೆಚ್ಚು ಬೇರೂರುವ ಸಾಮರ್ಥ್ಯ (89%)
- ಎಲೆಯ ಗುಣಲಕ್ಷಣಗಳು: ಮಧ್ಯಮ, ಪೂರ್ತಿಯಾದ, ಹೃದಯಾಕಾರವನ್ನು ಹೊಂದಿದ್ದು, ನಯವಾದ ಮತ್ತು ಹಸಿರು ಬಣ್ಣದಿಂದ ಕೂಡಿದೆ
- ಗಿಣ್ಣುಗಳ ನಡುವಿನ ಅಂತರ : 4.4 ಸೆಂ.ಮೀ.
- ತಡೆದುಕೊಳ್ಳುವ ಶಕ್ತಿ –
  - ಚುಕ್ಕೆ ರೋಗ
  - ತುಕ್ಕು ರೋಗ
    ಸಾಧಾರಣ ಸಹಿಷ್ಣುತೆ
- ವಾರ್ಷಿಕ ಇಳುವರಿ ಸಾಮರ್ಥ್ಯ: 21–23 ಮೆ.ಟನ್/ಹೆಕ್ಟೇರ್



ಶಿಫಾರಸ್ಸು ಮಾಡಲಾಗಿರುವ ಪ್ರದೇಶ

ಸಂಪನ್ಮೂಲ ನಿರ್ಬಂಧ ಪರಿಸ್ಥಿತಿಗಳಿಗೆ (ಶೇ.50 ರಷ್ಟು ನೀರಾವರಿ ಮತ್ತು ರಸಗೊಬ್ಬರ ಬಳಸಲ್ಪಟ್ಟಾಗ)

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ಸುಧಾರಿತ ಬೇಸಾಯ ಪದ್ಧತಿ ಅಳವಡಿಸಿಕೊಳ್ಳಿ

ಎ ಆರ್ 12

- ಶಿಫಾರಸ್ಸು ಮಾಡಿದ ವರ್ಷ: 2004
- ಪಿತೃತ್ವ: ಎಸ್41 (4×) × ಸಿ776 (2×)

ಪ್ರಮುಖ ಅಂಶಗಳು

- ಕಟಾವಿನ ಅಥವಾ ಎಲೆ ಬಿಡಿಸಿದ ನಂತರ ತ್ವರಿತ ಚಿಗುರುವಿಕೆ
- ಹೆಚ್ಚು ಬೇರೂರುವ ಕ್ಷಮತೆ (90%)
- ಎಲೆಯ ಗುಣಲಕ್ಷಣಗಳು: ದೊಡ್ಡದಾದ, ಪೂರ್ತಿಯಾದ, ಹೃದಯಾಕಾರವನ್ನು ಹೊಂದಿದ್ದು, ನಯವಾದ ಮತ್ತು ಹಸಿರು ಬಣ್ಣದಿಂದ ಕೂಡಿದೆ
- ಗಿಣ್ಣುಗಳ ನಡುವಿನ ಅಂತರ: 3.75 ಸೆಂ.ಮೀ.
- ತಡೆದುಕೊಳ್ಳುವ ಶಕ್ತಿ –
  - ಚುಕ್ಕೆ ರೋಗ
  - ತುಕ್ಕು ರೋಗ ಸಹಿಷ್ಣುತೆ



- ವಾರ್ಷಿಕ ಇಳುವರಿ ಸಾಮರ್ಥ್ಯ: ಕ್ಷಾರೀಯ ಮಣ್ಣಿನಲ್ಲಿ 16–17 ಮೆ.ಟನ್/ಹೆಕ್ಟೇರ್ ಸುಧಾರಣೆ ಮಾಡಿದ ಕ್ಷಾರೀಯ ಮಣ್ಣಿನಲ್ಲಿ 22–24 ಮೆ.ಟನ್/ಹೆಕ್ಟೇರ್

ಶಿಫಾರಸ್ಸು ಮಾಡಲಾಗಿರುವ ಪ್ರದೇಶ

ದಕ್ಷಿಣದ ರಾಜ್ಯಗಳ ಸಾಧಾರಣ ಕ್ಷಾರೀಯ ಮಣ್ಣಿನ ಪ್ರದೇಶಗಳು (ರಸಸಾರ 9.5ರ ತನಕ)

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ಸುಧಾರಿತ ಬೇಸಾಯ ಪದ್ಧತಿ ಅಳವಡಿಸಿಕೊಳ್ಳಿ

ಸಹನ

- ಶಿಫಾರಸ್ಸು ಮಾಡಿದ ವರ್ಷ: 2004
- ಪಿತೃತ್ವ: ಕೆ2 × ಕೋಸೆನ್

ಪ್ರಮುಖ ಅಂಶಗಳು

- ಕಟಾವಿನ ಅಥವಾ ಎಲೆ ಬಿಡಿಸಿದ ನಂತರ ತ್ವರಿತ ಚಿಗುರುವಿಕೆ
- ಹೆಚ್ಚು ಬೇರೂರುವ ಕ್ಷಮತೆ (80%)
- ಎಲೆಯ ಗುಣಲಕ್ಷಣಗಳು: ದೊಡ್ಡದಾದ, ಪೂರ್ತಿಯಾದ, ಹೃದಯಾಕಾರವನ್ನು ಹೊಂದಿದ್ದು, ನುಣುಪಾದ ಹೊಳಪು ಮತ್ತು ದಟ್ಟ ಹಸಿರು ಬಣ್ಣದಿಂದ ಕೂಡಿದೆ
- ಗಿಣ್ಣುಗಳ ನಡುವಿನ ಅಂತರ: 4.81 ಸೆಂ.ಮೀ.
- ತಡೆದುಕೊಳ್ಳುವ ಶಕ್ತಿ –
  - ಚುಕ್ಕೆ ರೋಗ
  - ತುಕ್ಕು ರೋಗ
    ಮಧ್ಯಮ ನಿರೋಧಕತೆ
  - ತುಕ್ರಾ ಬೂಸ್ಟು ತಿಗಣೆಗೆ ಸಾಧಾರಣ (ಮಧ್ಯಮ) ಸಹಿಷ್ಣುತೆ
- ವಾರ್ಷಿಕ ಇಳುವರಿ ಸಾಮರ್ಥ್ಯ: ತೆಂಗಿನ ತೋಟದ ನೆರಳಲ್ಲಿ ಅಂತರ ಬೆಳೆಯಾಗಿ 25–30 ಮೆ.ಟನ್/ಹೆಕ್ಟೇರ್



ಶಿಫಾರಸ್ಸು ಮಾಡಲಾಗಿರುವ ಪ್ರದೇಶ

ತೆಂಗಿನ ತೋಟದಲ್ಲಿ ಅಂತರ ಬೆಳೆಯಾಗಿ

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ಸುಧಾರಿತ ಬೇಸಾಯ ಪದ್ಧತಿ ಅಳವಡಿಸಿಕೊಳ್ಳಿ

ಹಿಪ್ಪುನೇರಳೆ:
ಉತ್ಪಾದನೆ ಮತ್ತು ಸಂರಕ್ಷಣೆ

ಹಿಪ್ಪುನೇರಳೆ ಸಸಿ ಮಡಿಗಳು (ನರ್ಸರಿ)

- ಶಿಫಾರಸ್ಸು ಮಾಡಿದ ವರ್ಷ: 1992

ಪ್ರಮುಖ ಅಂಶಗಳು

- ಸಸಿ ಮಡಿ ತಯಾರಿಕೆಗೆ ನೀರು ಸುಲಭವಾಗಿ ಬಸಿದುಹೋಗುವಂತಹ ಮರಳು ಮಿಶ್ರಿತ ಗೋಡು ಮಣ್ಣು ಹೆಚ್ಚು ಸೂಕ್ತ
- ಭೂಮಿಯನ್ನು 30–40 ಸೆಂ.ಮೀ. ಆಳಕ್ಕೆ ಉಳುಮೆ / ಅಗೆತ ಮಾಡಬೇಕು
- 2 ರಿಂದ 3 ವಾರಗಳ ಕಾಲ ಬಿಸಿಲಿಗೆ ಒಡ್ಡಬೇಕು
- 300 ಸೆಂ.ಮೀ.×120 ಸೆಂ.ಮೀ. ಅಳತೆಯ ಮಡಿಗಳನ್ನು ಮಾಡಬೇಕು
- 25–30 ಸೆಂ.ಮೀ. ಅಗಲ ಮತ್ತು 20 ಸೆಂ.ಮೀ. ಆಳದ ನೀರು ಹಾಯಿಸುವ ಕಾಲುವೆಗಳನ್ನು ನಿರ್ಮಿಸಬೇಕು
- ಬಿತ್ತನೆ ಕಡ್ಡಿಗಳನ್ನು 0.2% ಬೆವಿಸ್ಟಿನ್ ದ್ರಾವಣದಲ್ಲಿ 10–15 ನಿಮಿಷಗಳವರೆಗೆ ಅದ್ದಿ ಇಡಬೇಕು
- ಮಡಿಯಲ್ಲಿ ಸಾಲಿನಿಂದ ಸಾಲಿಗೆ 20 ಸೆಂ.ಮೀ. ಮತ್ತು ಕಡ್ಡಿಯಿಂದ ಕಡ್ಡಿಗೆ 8 ಸೆಂ.ಮೀ. ಅಂತರವಿರುವಂತೆ ಕಡ್ಡಿಗಳನ್ನು ನೆಡಬೇಕು
- ಕಡ್ಡಿಗಳನ್ನು ನೆಟ್ಟ ತಕ್ಷಣ ನೀರು ಹಾಯಿಸಿ, ತದನಂತರ 4–5 ದಿನಗಳಿಗೊಮ್ಮೆ ನೀರು ಹಾಯಿಸುತ್ತಿರಬೇಕು
- 55–60 ದಿನಗಳಲ್ಲಿ ರಾಸಾಯನಿಕ ಗೊಬ್ಬರವನ್ನು ಹಾಕಿ ಮಣ್ಣಿನಲ್ಲಿ ಬೆರೆಸಬೇಕು
- 3 ರಿಂದ 4 ತಿಂಗಳು ಬಲಿತ ಸಸಿಗಳನ್ನು ನಾಟಿ ಮಾಡುವುದು ಸೂಕ್ತ

ಸಸಿ ಮಡಿಗಳಲ್ಲಿ ಸಸಿಗಳು ತ್ವರಿತವಾಗಿ ಸ್ಥಾಪನೆಗೊಂಡು ಸತ್ವಯುತವಾಗಿ ಬೆಳೆಯುವುದರಿಂದ ನಾಟಿಮಾಡಿದ ತೋಟಗಳಲ್ಲಿ ಒಂದೇ ಸಮನಾದ ಬೆಳವಣಿಗೆ ಸಾಧ್ಯ

ಇದನ್ನು ಮಾಡಿ

- ಜೇಡಿ ಮಣ್ಣು ಅಥವಾ ಕಪ್ಪು ಮಣ್ಣಿದ್ದಲ್ಲಿ ಪ್ರತಿ ಮಡಿಗೆ ಮರಳನ್ನು ಸೇರಿಸಿ.
- 6–8 ತಿಂಗಳ ಬೆಳವಣಿಗೆಯುಳ್ಳ 10–15 ಮಿ.ಮೀ. ದಪ್ಪನಾದ ಆರೋಗ್ಯಕರ ಬಿತ್ತನೆ ಕಡ್ಡಿಗಳನ್ನು ಆಯ್ಕೆ ಮಾಡಿ

ಇದನ್ನು ಮಾಡಬೇಡಿ

- ಕಾಂಡದ ಕೆಳ ಭಾಗದ ದಪ್ಪನೆಯ ಹಾಗೂ ಕುಡಿ ಭಾಗದ ಎಳೆಯ ಹಸಿರು ಭಾಗಗಳನ್ನು ಬಳಸಬೇಡಿ
- ತುಕ್ರ / ಶಲ್ಕು ಕೀಟ ಬಾಧೆಗೊಳಗಾಗಿರುವ ಕಡ್ಡಿಗಳನ್ನು ಉಪಯೋಗಿಸಬೇಡಿ

ಪ್ರೌಢ ರೇಷ್ಮೆ ಹುಳು ಸಾಕಾಣಿಕೆಗಾಗಿ ಹಿಪ್ಪುನೇರಳೆ ಬೇಸಾಯ ಪದ್ಧತಿ

- ಶಿಫಾರಸ್ಸು ಮಾಡಿದ ವರ್ಷ: 2001

ಪ್ರಮುಖ ಅಂಶಗಳು

- ತೋಟವನ್ನು 90 ಸೆಂ.ಮೀ. × 90 ಸೆಂ.ಮೀ. (3 ಅಡಿ × 3 ಅಡಿ) ಅಥವಾ ಜೋಡಿ ಸಾಲು ಪದ್ಧತಿಯನ್ನು (150+90) × 60 ಸೆಂ.ಮೀ. ಅಥವಾ (5'+3') × 2' ಅನುಸರಿಸಿ ಬೆಳೆಸಿ
- ವರ್ಷಕ್ಕೆ ಒಂದು ಹೆಕ್ಟೇರ್‌ಗೆ 20 ಮೆ.ಟನ್ ಕೊಟ್ಟಿಗೆ ಗೊಬ್ಬರ ಮತ್ತು ಸಾರಜನಕ, ರಂಜಕ ಹಾಗೂ ಪೊಟಾಷ್ 350:140:140 ಕೆ.ಜಿ./ಹೆಕ್ಟೇರ್/ವರ್ಷಕ್ಕೆ ನೇರ ಗೊಬ್ಬರದ ರೂಪದಲ್ಲಿ 5 ಸಮಾನ ಕಂತುಗಳಲ್ಲಿ ನೀಡಿ
- ಪ್ರೌಢ ಹುಳು ಸಾಕಾಣಿಕೆಗೆ ವಿ–1 ಹಾಗೂ ಜಿ–4 ಸೂಕ್ತವಾದ ಹಿಪ್ಪುನೇರಳೆ ತಳಿಗಳು

ಪ್ರೌಢ ಹುಳುಗಳ ಸಾಕಾಣಿಕೆಗೆ ಉತ್ತಮ ಗುಣಮಟ್ಟದ ಸೊಪ್ಪು ಸಿಗುತ್ತದೆ

- ವೆಚ್ಚ : ` 20,000/- ಒಂದು ಎಕರೆಗೆ
- ಖರ್ಚು ಲಾಭದ ಅನುಪಾತ: 1:3

ಇದನ್ನು ಮಾಡಿ

ಉತ್ತಮ ಗುಣಮಟ್ಟದ ಸೊಪ್ಪಿನ ಗರಿಷ್ಟ ಬಳಕೆಗಾಗಿ ನಿಗದಿತ ಕಾಲಕ್ಕೆ ಸರಿಯಾಗಿ ಕೊಯಿಲು ಮಾಡಿ

ಇದನ್ನು ಮಾಡಬೇಡಿ

ಎಲೆಗಳು ಪಕ್ವವಾಗಲು ಬಿಡಬಾರದು

ಹಿಪ್ಪುನೇರಳೆ ಬೇಸಾಯದಲ್ಲಿ ಜೋಡಿ ಸಾಲು ಪದ್ಧತಿ

- ಶಿಫಾರಸ್ಸು ಮಾಡಿದ ವರ್ಷ: 1995

ಪ್ರಮುಖ ಅಂಶಗಳು

- ಅನುಸರಿಸುವ ಅಂತರ (150+90) ×60 ಸೆಂ.ಮೀ. ಅಥವಾ (5'+3') × 2'
- ಒಂದು ಜೋಡಿ ಸಾಲಿನಲ್ಲಿ ಸಾಲುಗಳ ನಡುವಿನ ಅಂತರ 90 ಸೆಂ.ಮೀ. ಅಥವಾ 3 ಅಡಿ ಹಾಗೂ ಎರಡು ಜೋಡಿ ಸಾಲುಗಳ ನಡುವಿನ ಅಂತರ 150 ಸೆಂ.ಮೀ. ಅಥವಾ 5 ಅಡಿ ಮತ್ತು ಸಾಲಿನಲ್ಲಿ ಗಿಡದಿಂದ ಗಿಡಕ್ಕೆ 60 ಸೆ.ಮೀ. ಅಥವಾ 2 ಅಡಿ ಅಂತರ
- ಈ ಕ್ರಮದಲ್ಲಿ ಒಂದು ಹೆಕ್ಟೇರ್ ತೋಟದಲ್ಲಿ ಒಟ್ಟು 13,888 ಸಸಿಗಳನ್ನು ನೆಡಬಹುದಾಗಿದೆ

ಹಿಪ್ಪುನೇರಳೆ ತೋಟದಲ್ಲಿ ಪವರ್ ಟಿಲ್ಲರ್ ಮತ್ತು ಟ್ರಾಕ್ಟರ್ ಚಾಲನೆಗೆ, ಅಂತರ ಬೇಸಾಯ ಹಾಗೂ ಇತರೆ ಕೃಷಿ ಕಾರ್ಯಾಚರಣೆಗಳಿಗೆ ಸುಗಮವಾಗುತ್ತದೆ

- ವೆಚ್ಚ : ` 21,000/- ಒಂದು ಎಕರೆಗೆ
- ಖರ್ಚು ಲಾಭದ ಅನುಪಾತ: 1:2

ಇದನ್ನು ಮಾಡಿ

ಅಧಿಕ ಇಳುವರಿ ನೀಡುವ ಹಿಪ್ಪುನೇರಳೆ ತಳಿಯನ್ನು ಆಯ್ಕೆ ಮಾಡಿ

ಇದನ್ನು ಮಾಡಬೇಡಿ

ಸಸಿಗಳನ್ನು ತುಂಬಾ ಒತ್ತಾಗಿ ನೆಡಬೇಡಿ

ಹಿಪ್ಪುನೇರಳೆಯಲ್ಲಿ ಕಟಾವು ಮಾಡುವಿಕೆ ಮತ್ತು ಬೆಳೆಸುವಿಕೆ

- ಶಿಫಾರಸ್ಸು ಮಾಡಿದ ವರ್ಷ: 1997

ಪ್ರಮುಖ ಅಂಶಗಳು

- ಹಿಪ್ಪುನೇರಳೆಯನ್ನು ಒಂದೇ ಸಮನಾದ ಎತ್ತರಕ್ಕೆ ಕಟಾವು ಮಾಡುವುದರಿಂದ ಸರಿಯಾದ ಕಾಂಡದ ಅಭಿವೃದ್ಧಿ ಮತ್ತು ಆಕಾರ ನಿರ್ವಹಿಸಲು ಸುಗಮವಾಗುತ್ತದೆ
- ಇಡೀ ತೋಟದಲ್ಲಿ ಒಂದೇ ಸಮನಾದ ಬೆಳವಣಿಗೆಯನ್ನು ಸುಗಮಗೊಳಿಸುತ್ತದೆ ಹಾಗೂ ಯಾಂತ್ರೀಕೃತ ಅಂತರ ಬೇಸಾಯ ಚಟುವಟಿಕೆಗಳಿಗೆ ಅನುವು ಮಾಡಿಕೊಡುತ್ತದೆ
- ಒಂದೇ ಸಮನಾದ ಬೆಳವಣಿಗೆಯಿಂದ ರೋಗಗಳ ಹಾವಳಿ ಕಡಿಮೆಯಾಗಿ ಉತ್ಪಾದಕತೆಯಲ್ಲಿ ಅಭಿವೃದ್ಧಿಯಾಗುತ್ತದೆ

ತೋಟದ ಸ್ಥಾಪನೆ ಮತ್ತು ಕಾಂಡದ ಅಭಿವೃದ್ಧಿ

- ಆರೋಗ್ಯಕರ ಸಸಿಗಳನ್ನು ನೆಟ್ಟು ನೆಲದಿಂದ 15 ಸೆಂ.ಮೀ. ಎತ್ತರಕ್ಕೆ ಕತ್ತರಿಸಿ
- ಸೊಪ್ಪಿನ ಕೊಯ್ಲು ಮಾಡದೆ ಸಸಿಗಳನ್ನು 6 ತಿಂಗಳು ಬೆಳೆಯಲು ಬಿಟ್ಟು ಆಮೇಲೆ ಸೊಪ್ಪು ಕೀಳುವ ಮೂಲಕ ಮೊದಲನೇ ಹುಳು ಸಾಕಾಣಿಕೆಯನ್ನು ಆರಂಭಿಸಿ
- ಆನಂತರ ಪ್ರತೀ ಗಿಡದಲ್ಲಿ 3 ಬಲಿಷ್ಟ ಮತ್ತು ಆರೋಗ್ಯಕರ ರೆಂಬೆಗಳನ್ನು ಆಯ್ಕೆ ಮಾಡಿ ನೆಲದಿಂದ 25 ಸೆಂ.ಮೀ. ಎತ್ತರಕ್ಕೆ ಕತ್ತರಿಸಿ
- ಪ್ರತೀ ಸಾಕಾಣಿಕೆಯ ನಂತರ ಎಲ್ಲಾ ರೆಂಬೆಗಳನ್ನೂ ನೆಲದಿಂದ 30 ಸೆಂ.ಮೀ. ಎತ್ತರಕ್ಕೆ ಕತ್ತರಿಸಿ. ದುರ್ಬಲ ಮತ್ತು ಒಣಗಿದ ರೆಂಬೆಗಳನ್ನು ತೆಗೆದು ಹಾಕಿ
- ಪ್ರತೀ ಗಿಡದಲ್ಲೂ 10–15 ಆರೋಗ್ಯಕರ ರೆಂಬೆಗಳನ್ನು ಬೆಳೆಯಲು ಬಿಡಿ

ಉದ್ದೇಶ

ಉತ್ತಮವಾಗಿ ಅಭಿವೃದ್ಧಿಯಾಗಿರುವ ಕಾಂಡಗಳಿರುವ ಹಿಪ್ಪುನೇರಳೆ ತೋಟವು ಆರೋಗ್ಯಕರ ಬೆಳವಣಿಗೆ ಮತ್ತು ಗುಣಮಟ್ಟದ ಸೊಪ್ಪಿನ ಉತ್ಪಾದನೆಗೆ ಅನುವು ಮಾಡಿಕೊಡುತ್ತದೆ

ಇದನ್ನು ಮಾಡಿ

- ಪ್ರತೀ ಗಿಡದಲ್ಲಿ ದುರ್ಬಲ ರೆಂಬೆಗಳನ್ನು ತೆಗೆದು ಹಾಕಿ 10–15 ಆರೋಗ್ಯಕರ ರೆಂಬೆಗಳಿರುವಂತೆ ನೋಡಿಕೊಳ್ಳಿ
- ರೆಂಬೆಗಳನ್ನು ಕತ್ತರಿಸಲು ಹರಿತವಾದ ಸಿಕೇಚರ್‌ಗಳನ್ನು ಉಪಯೋಗಿಸಿ
- ಕಟಾವು ಮಾಡಿದ 30–40 ದಿನಗಳ ನಡುವೆ ಎಲ್ಲಾ ದುರ್ಬಲ ರೆಂಬೆಗಳನ್ನು ತೆಗೆದುಬಿಡಿ
- ಕಾಂಡದ ಅಭಿವೃದ್ಧಿಯಿಂದ ಯಾಂತ್ರೀಕೃತ ಕಟಾವು ಮಾಡುವುದು ಸುಲಭ

ಇದನ್ನು ಮಾಡಬೇಡಿ

- ಯಂತ್ರಗಳಿಂದ ಕಟಾವು ಮಾಡುವಾಗ ಗಿಡಗಳನ್ನು ನೆಲಮಟ್ಟಕ್ಕೆ ಕತ್ತರಿಸಬಾರದು
- ಗಿಡವೊಂದಕ್ಕೆ 15 ಕ್ಕಿಂತ ಹೆಚ್ಚು ರೆಂಬೆಗಳನ್ನು ಬೆಳೆಯಲು ಬಿಡಬಾರದು

ಮಣ್ಣು ಪರೀಕ್ಷೆ ಆಧಾರದ ಮೇಲೆ ರಸಗೊಬ್ಬರ ಹಾಕುವುದು

- ಶಿಫಾರಸ್ಸು ಮಾಡಿದ ವರ್ಷ: 2004

ಪ್ರಮುಖ ಅಂಶಗಳು

- ಹಿಪ್ಪುನೇರಳೆ ಬೆಳವಣಿಗೆಯು ಮಣ್ಣಿನ ಫಲವತ್ತತೆ ಮೇಲೆ ಅವಲಂಬಿತವಾಗಿದೆ
- ಮಣ್ಣಿನ ಪೌಷ್ಟಿಕ ಸ್ಥಿತಿಯನ್ನು ನಿರ್ಣಯಿಸಲು ನಿಯತಕಾಲಿಕವಾಗಿ ಮಣ್ಣಿನ ಫಲವತ್ತತೆಯನ್ನು ಪರಿಶೀಲಿಸಬೇಕಾಗುತ್ತದೆ
- ರಸಗೊಬ್ಬರಗಳ ವಿವೇಚನಾಯುಕ್ತ ಬಳಕೆಗೆ ಮಣ್ಣಿನ ಫಲವತ್ತತೆ ಆಧರಿಸಿ ಮಾಡಿದ ಶಿಫಾರಸ್ಸುಗಳನ್ನು ಅನುಸರಿಸುವ ಅಗತ್ಯವಿದೆ

ಮಣ್ಣು ಪರೀಕ್ಷೆ ಆಧಾರದ ಮೇಲೆ ಶಿಫಾರಸ್ಸು ಮಾಡಲಾದ ಗೊಬ್ಬರ ಮತ್ತು ರಸಗೊಬ್ಬರ

ಸಾವಯವ ಇಂಗಾಲ (%)	ಕೊಟ್ಟಿಗೆ ಗೊಬ್ಬರ *
< 0.3	15
0.3 - 0.65	12
0.65 - > 1.0	10

ರಸಸಾರ	ಯೂರಿಯ#	ಅಮೋನಿಯಂ ಸಲ್ಫೇಟ್ #
< 6.0	50	
> 6.0		140

ಲಭ್ಯವಿರುವ ರಂಜಕ (ಕಿಜಿ/ಹೆಕ್ಟೇರ್)	ಮ್ಯೂರೇಟ್ ಆಫ್ ಪೊಟಾಷ್ #	ಲಭ್ಯವಿರುವ ಪೊಟ್ಯಾಷಿಯಂ (ಕಿಜಿ/ಹೆಕ್ಟೇರ್)	ಮ್ಯೂರೇಟ್ ಆಫ್ ಪೊಟಾಷ್ #
< 10	80	0 - 45	20
10 - 15	75	46 - 90	18
16 - 25	70	91 -134	16
26 - 40	65	135 - 179	14

* ಮೆ.ಟನ್/ಎಕರೆಗೆ/ವರ್ಷಕ್ಕೆ ;
\# ಕೆ.ಜಿ/ಎಕರೆಗೆ/ವರ್ಷಕ್ಕೆ

ಮಣ್ಣು ಪರೀಕ್ಷಾ ಫಲಿತಾಂಶಗಳನ್ನು ಆಧರಿಸಿ ಶಿಫಾರಸ್ಸು ಮಾಡಲಾದ ನಿಗದಿತ ಪ್ರಮಾಣದ ಗೊಬ್ಬರ ಮತ್ತು ರಸಗೊಬ್ಬರಗಳು ಮಣ್ಣಿನ ಫಲವತ್ತತೆಯ ಪರಿಣಾಮಕಾರಿ ನಿರ್ವಹಣೆಗೆ ಅನುವು ಮಾಡಿಕೊಡುತ್ತದೆ

ಇದನ್ನು ಮಾಡಿ

- ಮಣ್ಣಿನ ಮಾದರಿಗಳನ್ನು ಹಿಪ್ಪುನೇರಳೆ ತೋಟವನ್ನು ಕಟಾವು ಮಾಡಿದ ನಂತರ, ರಸಗೊಬ್ಬರ ಹಾಕುವ ಮುನ್ನ ಸಂಗ್ರಹಿಸಿ
- ರಚನೆ, ಬಣ್ಣ ಹಾಗೂ ಇಳುವರಿ ಮಾದರಿಯಲ್ಲಿ ವ್ಯತ್ಯಾಸವಿರುವ ಮಣ್ಣುಗಳ ಮಾದರಿಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸಿ
- ಸಮಸ್ಯಾತ್ಮಕ ಮಣ್ಣಿಗೆ ಸರಿಯಾದ ಪರಿಹಾರ ಕ್ರಮಗಳನ್ನು ಅಳವಡಿಸಿಕೊಳ್ಳಿ

ಇದನ್ನು ಮಾಡಬೇಡಿ

- ಮಣ್ಣಿನ ಮಾದರಿಗಳನ್ನು ಮಳೆಬಂದ ತಕ್ಷಣ, ನೀರಾವರಿ ನಂತರ, ಬದುಗಳಿಂದ, ಕಾಂಪೋಸ್ಟ್ ಗುಂಡಿಯ ಬಳಿ ಹಾಗೂ ಜೌಗು ಪ್ರದೇಶಗಳಲ್ಲಿ ಸಂಗ್ರಹಿಸಬಾರದು
- ಮಣ್ಣಿನ ಮಾದರಿಗಳನ್ನು ನೇರ ಬಿಸಿಲಿನಲ್ಲಿ ಹೆಚ್ಚಿನ ತಾಪಮಾನದಲ್ಲಿ ಒಣಗಿಸಬಾರದು

ಹಿಪ್ಪುನೇರಳೆ ಬೇಸಾಯದಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ

- ಶಿಫಾರಸ್ಸು ಮಾಡಿದ ವರ್ಷ: 2006

ಪ್ರಮುಖ ಅಂಶಗಳು

- ಸಮಗ್ರ ಪೋಷಕಾಂಶಗಳ ನಿರ್ವಹಣಾ ಕ್ರಮವು ಪರಿಸರ ಸ್ನೇಹಿ ಹಾಗೂ ಪರಿಣಾಮಕಾರಿ ವೆಚ್ಚದಲ್ಲಿ ರಾಸಾಯನಿಕ ಮತ್ತು ಜೈವಿಕ ಸಾಧನಗಳಿಂದ ಮಣ್ಣಿನ ಆರೋಗ್ಯ ನಿರ್ವಹಣೆಯ ಒಂದು ಪದ್ಧತಿಯಾಗಿದೆ

ಸಮಗ್ರ ಪೋಷಕಾಂಶಗಳ ನಿರ್ವಹಣೆಯ ಪದ್ಧತಿ

- ಸಾವಯವ ಗೊಬ್ಬರಗಳು: ಎಕರೆಗೆ 8 ಮೆ.ಟನ್ (ಎರಡು ಕಂತುಗಳಲ್ಲಿ)
- ಹಸಿರೆಲೆ ಗೊಬ್ಬರದ ರೂಪದಲ್ಲಿ ಶೇ.50ರಷ್ಟು ಸಾವಯವ ಗೊಬ್ಬರವನ್ನು ಒದಗಿಸುವುದರಿಂದ, ನಂತರದ ವರ್ಷಗಳಲ್ಲಿ 4 ಮೆ.ಟನ್. ಕೊಟ್ಟಿಗೆ ಗೊಬ್ಬರವನ್ನು ಹಾಕಿದರೆ ಸಾಕು
- ಮುಂಗಾರಿನ ಪ್ರಾರಂಭದಲ್ಲಿ ಹಸಿರೆಲೆ ಗೊಬ್ಬರದ ಬೆಳೆಗಳನ್ನು ಹಿಪ್ಪುನೇರಳೆಯೊಂದಿಗೆ ಅಂತರ ಬೆಳೆಯಾಗಿ ಬೆಳೆದು ಮಣ್ಣಿನಲ್ಲಿ ಮಿಶ್ರಣ ಮಾಡಿ/ ಕಾಂಪೋಸ್ಟ್ ತಯಾರಿಸಿ
- ಮುಂಗಾರಿನ ಸಮಯದಲ್ಲಿ ಎಕರೆಗೆ 200 ಕೆ.ಜಿ.ಯಂತೆ ಬೇವಿನ ಹಿಂಡಿಯನ್ನು ಒಮ್ಮೆಗೇ ಹಾಕಿ ಅಥವಾ 5 ಕಂತುಗಳಲ್ಲಿ ಹಾಕಿ
- **ಜೈವಿಕ ಗೊಬ್ಬರಗಳು:** ಪ್ರತಿವರ್ಷ ಎಕರೆಗೆ 8 ಕೆ.ಜಿ. ಸೆರಿ–ಅಜೋ ಮತ್ತು 2 ಕೆ.ಜಿ. ಸೆರಿ–ಫಾಸ್‌ನ್ನು 5 ಸಮ ಕಂತುಗಳಲ್ಲಿ ಹಾಕಿ
- ಕಟಾವಾದ 25 ದಿನಗಳ ನಂತರ 'ಪೋಷಣ್' ಸಿಂಪಡಿಸಿ
- ರಾಸಾಯನಿಕ ಗೊಬ್ಬರಗಳನ್ನು ಶಿಫಾರಸ್ಸು ಮಾಡಿದ ಪ್ರಮಾಣದಲ್ಲಿ ಹಾಕಿರಿ. ಸಾವಯವ ಪ್ರಮಾಣ ಹೆಚ್ಚಾದ ನಂತರ (>0.65%) ರಸಗೊಬ್ಬರಗಳನ್ನು ಶೇ.50 ರಷ್ಟು ಮೊಟಕುಗೊಳಿಸಿ

ಉಪಯುಕ್ತತೆ

ಸಮಗ್ರ ಪೋಷಕಾಂಶಗಳ ನಿರ್ವಹಣೆಯ ಪದ್ಧತಿಯು ಮಣ್ಣಿನ ಆರೋಗ್ಯ ಮತ್ತು ಉತ್ಪಾದಕತೆಯಲ್ಲಿ ಸುಧಾರಣೆ ಮಾಡುತ್ತದೆ

ಇದನ್ನು ಮಾಡಿ

- ಹಸಿರೆಲೆ ಗೊಬ್ಬರದ ಬೆಳೆಗಳಾದ ಸೆಣಬು ಮತ್ತು ಡಯೆಂಚಗೆ ಆದ್ಯತೆ ನೀಡಿ
- ಜೈವಿಕ ಗೊಬ್ಬರ, ಸೆರಿ–ಅಜೋ & ಸೆರಿ–ಫಾಸ್‌ನ್ನು ಕೊಟ್ಟಿಗೆ ಗೊಬ್ಬರದ ಜೊತೆ ಮಿಶ್ರಣ ಮಾಡಿ ರಾಸಾಯನಿಕ ಗೊಬ್ಬರ ಹಾಕುವ 15 ದಿನಗಳ ಮುನ್ನ / 15 ದಿನಗಳ ನಂತರ ತೋಟಕ್ಕೆ ಹಾಕಿ
- ರೇಷ್ಮೆ ವ್ಯವಸಾಯದ ತ್ಯಾಜ್ಯವನ್ನು ಬಳಸಿಕೊಂಡು ಗೊಬ್ಬರ ತಯಾರಿಸಿ ಉಪಯೋಗಿಸುವುದರಿಂದ ಮಣ್ಣಿನ ಸಾವಯವ ಇಂಗಾಲದಲ್ಲಿ ಸುಧಾರಣೆ ಕಂಡುಕೊಳ್ಳಬಹುದು

ಇದನ್ನು ಮಾಡಬೇಡಿ

- ಮಣ್ಣಿಗೆ ಹಾಕುವಾಗ ಜೈವಿಕ ಮತ್ತು ರಾಸಾಯನಿಕ ಗೊಬ್ಬರಗಳನ್ನು ಮಿಶ್ರಣ ಮಾಡಬೇಡಿ
- ಹಸಿರೆಲೆ ಗೊಬ್ಬರದ ಬೆಳೆಗಳನ್ನು ಹೂ ಬಿಡುವ ಅಥವಾ ಬೀಜವಾಗುವ ತನಕ ಬೆಳೆಸಬಾರದು
- ಹುಳು ಸಾಕಾಣಿಕಾ ಹಾಸಿಗೆಯಿಂದ ತೆಗೆದ ಹಿಪ್ಪುನೇರಳೆ ರೆಂಬೆಗಳನ್ನು ಸುಡಬೇಡಿ, ಬದಲಿಗೆ ಅವುಗಳನ್ನು ಕಾಂಪೋಸ್ಟ್ ತಯಾರಿಕೆಗೆ ಉಪಯೋಗಿಸಿ

ಹಿಪ್ಪುನೇರಳೆ ಬೇಸಾಯದಲ್ಲಿ ಹನಿ ನೀರಾವರಿ

- ಶಿಫಾರಸ್ಸು ಮಾಡಿದ ವರ್ಷ: 1995

ಪ್ರಮುಖ ಅಂಶಗಳು

- ಹನಿ ನೀರಾವರಿ ಹಿಪ್ಪುನೇರಳೆ ಕೃಷಿಯಲ್ಲಿ ಒಂದು ಸಮರ್ಥ ನೀರು ನಿರ್ವಹಣಾ ವ್ಯವಸ್ಥೆಯಾಗಿದೆ
- ಎರಡು ಹಿಪ್ಪುನೇರಳೆ ಸಾಲುಗಳ ನಡುವೆ ಒಂದು ಲ್ಯಾಟರಲ್‌ನ್ನು ಹಾಗೂ ನಾಲ್ಕು ಗಿಡಗಳ ನಡುವೆ ಒಂದು ಮೈಕ್ರೋ ಟ್ಯೂಬ್ ಇಡಲಾಗುತ್ತದೆ
- ಶುಷ್ಕ ಋತುವಿನಲ್ಲಿ ಒಂದು ದಿನಕ್ಕೆ ಸಸ್ಯದ ಗರಿಷ್ಠ ನೀರಿನ ಬೇಡಿಕೆ:
  - 60 ×60 ಸೆಂ.ಮೀ. ಅಂತರದ ತೋಟಕ್ಕೆ 1.2 ಲೀ.
  - 90 ×90 ಸೆಂ.ಮೀ. ಮತ್ತು ಜೋಡಿ ಸಾಲು ಪದ್ಧತಿಯಲ್ಲಿ 2 ಲೀ.
- ಇತರೆ ನೀರಾವರಿ ವ್ಯವಸ್ಥೆಗಳಿಗೆ ಹೋಲಿಸಿದರೆ ಕಡಿಮೆ ನೀರಿನ ಬಳಕೆ
- ಸೊಪ್ಪಿನ ಇಳುವರಿಗೆ ಧಕ್ಕೆಯಾಗದಂತೆ ಶೇ. 40% ರಷ್ಟು ನೀರಿನ ಉಳಿತಾಯ

ಮಳೆ ಆಶ್ರಿತ ಮತ್ತು ಅರೆ ನೀರಾವರಿ ಪರಿಸ್ಥಿತಿಗೆ ಸೂಕ್ತ ತಂತ್ರಜ್ಞಾನ

ವೆಚ್ಚ: ` 45,000/- ಒಂದು ಎಕರೆಗೆ

ಇದನ್ನು ಮಾಡಿ

- ಮೈಕ್ರೋ ಟ್ಯೂಬ್‌ನಲ್ಲಿ ರಂಧ್ರಗಳು ಕಟ್ಟಿಕೊಳ್ಳುವುದನ್ನು ತಪ್ಪಿಸಲು ಫಿಲ್ಟರ್ ಬಳಸಿ
- ಉಳುಮೆ ಮಾಡುವಾಗ ಲ್ಯಾಟರಲ್ ಹಾಗೂ ಮೈಕ್ರೋ ಟ್ಯೂಬ್‌ಗಳನ್ನು ತೆಗೆದಿಡಿ

ಇದನ್ನು ಮಾಡಬೇಡಿ

- ಹನಿ ನೀರಾವರಿಯಲ್ಲಿ ಮೈಕ್ರೋ ಟ್ಯೂಬ್‌ಗಳು ಕಟ್ಟಿಕೊಳ್ಳುವುದರಿಂದ ಉಪ್ಪು ನೀರನ್ನು ಬಳಸಬೇಡಿ
- ಮಣ್ಣಿನಲ್ಲಿ ಬಸಿಯುವಿಕೆ ಸರಿಯಾಗಿಲ್ಲದಿದ್ದಲ್ಲಿ ಹನಿ ನೀರಾವರಿ ಬಳಸಬೇಡಿ

ಚಾಕಿ ಹುಳು ಸಾಕಾಣಿಕೆಗಾಗಿ ಹಿಪ್ಪುನೇರಳೆ ಬೇಸಾಯ ಪದ್ಧತಿ

- ಶಿಫಾರಸ್ಸು ಮಾಡಿದ ವರ್ಷ: 2001

ಪ್ರಮುಖ ಅಂಶಗಳು

- 90 ಸೆಂ.ಮೀ. × 90 ಸೆಂ.ಮೀ. ಅಂತರ ಅಥವಾ ಜೋಡಿ ಸಾಲು ಪದ್ಧತಿಯಂತೆ [(150+90) ×60ಸೆಂ.ಮೀ./ (5'+3') × 2'] ಅಂತರದಲ್ಲಿ ಹಿಪ್ಪುನೇರಳೆ ಕೃಷಿ
- ಕೊಟ್ಟಿಗೆ ಗೊಬ್ಬರ 40 ಮೆ.ಟನ್/ಹೆಕ್ಟೇರ್/ವರ್ಷಕ್ಕೆ ಹಾಗೂ ಸಾರಜನಕ, ರಂಜಕ ಮತ್ತು ಪೊಟ್ಯಾಷ್‌ನ್ನು ನೇರ ಗೊಬ್ಬರದ ರೂಪದಲ್ಲಿ 260:140:140 ಕೆ.ಜಿ/ ಹೆಕ್ಟೇರ್/ವರ್ಷಕ್ಕೆ ಎಂಟು ಕಂತುಗಳಲ್ಲಿ ನೀಡಬೇಕು
- ಕುಡಿ ತೆಗೆಯುವ (ಟಾಪ್ ಕ್ಲಿಪಿಂಗ್) ವಿಧಾನದಿಂದ (ಸೊಪ್ಪು ಬಿಡಿಸುವುದು ಮತ್ತು ರೆಂಬೆ ಕತ್ತರಿಸುವುದು ಕ್ರಮವಾಗಿ ಒಂದರ ನಂತರ ಒಂದರಂತೆ) ವರ್ಷಕ್ಕೆ ಒಂದು ಹೆಕ್ಟೇರ್‌ಗೆ 30 ಮೆ.ಟನ್ ನಷ್ಟು ಚಾಕಿ ಸೊಪ್ಪನ್ನು ಉತ್ಪಾದಿಸಬಹುದಾಗಿದೆ
- ಎಸ್–36, ವಿ–1 ಮತ್ತು ಜಿ–2 ಹಿಪ್ಪುನೇರಳೆ ತಳಿಗಳು ಚಾಕಿ ಹುಳು ಸಾಕಾಣಿಕೆಗೆ ಸೂಕ್ತವಾಗಿವೆ

ಚಾಕಿ ಹುಳು ಸಾಕಾಣಿಕೆಗೆ ಉತ್ತಮ ಗುಣಮಟ್ಟದ ಸೊಪ್ಪಿನ ಪೂರೈಕೆ

- ವೆಚ್ಚ : ` 20,000/- ಒಂದು ಎಕರೆಗೆ
- ಖರ್ಚು ಲಾಭದ ಅನುಪಾತ: 1:3

ಇದನ್ನು ಮಾಡಿ

ಉತ್ತಮ ಗುಣ ಮಟ್ಟದ ಚಾಕಿ ಸೊಪ್ಪಿನ ಗರಿಷ್ಟ ಬಳಕೆಗಾಗಿ ನಿಗದಿತ ಕಾಲಕ್ಕೆ ಸರಿಯಾಗಿ ಕೊಯಿಲು ಮಾಡಿ

ಇದನ್ನು ಮಾಡಬೇಡಿ

ಎಲೆಗಳು ಬಲಿಯಲು (ಪಕ್ವವಾಗಲು) ಬಿಡಬಾರದು

ಹಿಪ್ಪುನೇರಳೆಯನ್ನು ಮರಗಳನ್ನಾಗಿ ಬೆಳೆಸಲು ಬೇಸಾಯ ಪದ್ಧತಿ

- ಶಿಫಾರಸ್ಸು ಮಾಡಿದ ವರ್ಷ: 2000

ಪ್ರಮುಖ ಅಂಶಗಳು

- ಮರಗಳನ್ನು 2.4 ಮೀ. × 2.4 ಮೀ. ಅಂತರ ಕಾಯ್ದುಕೊಂಡು 150–180 ಸೆಂ.ಮೀ. (5–6 ಅಡಿ) ಎತ್ತರಕ್ಕೆ ಬೆಳೆಸಬೇಕು. ರಾಸಾಯನಿಕ ಗೊಬ್ಬರವನ್ನು ಮಳೆ ಆಶ್ರಿತ ಬೇಸಾಯಕ್ಕೆ ಶಿಫಾರಸ್ಸು ಮಾಡಿದಂತೆ (ಸಾರಜನಕ, ರಂಜಕ ಮತ್ತು ಪೊಟಾಷ್‌ನ್ನು 50:25:25 ಕೆ.ಜಿ./ಹೆಕ್ಟೇರ್/ವರ್ಷಕ್ಕೆ) ನೀಡಬೇಕು.
- ಮಳೆಗಾಲದಲ್ಲಿ ಹಸಿರು ಗೊಬ್ಬರ ಹಾಕುವುದರಿಂದ ಮಣ್ಣಿನ ಫಲವತ್ತತೆ ಸುಧಾರಿಸುತ್ತದೆ. ಹಿಪ್ಪುನೇರಳೆ ಮರಗಳ ತೋಟದಿಂದ ಲಭಿಸುವ ಸೊಪ್ಪಿನ ಇಳುವರಿ ವರ್ಷಕ್ಕೆ 6–7 ಮೆ.ಟನ್
- ಸಂಪೂರ್ಣ ಉತ್ಪಾದಕತೆ ಪಡೆಯಲು 3 ವರ್ಷ ಹಿಡಿಯುತ್ತದೆ
- ವರ್ಷಕ್ಕೆ 4 ಬಾರಿ ಕೊಯಿಲು ಮಾಡಬಹುದು
- ಎಸ್ 13 ತಳಿಯು ಮರವಾಗಿ ಬೆಳೆಯಲು ಸೂಕ್ತ

ನೀರಿನ ಕೊರತೆ ಅಥವಾ ಕಡಿಮೆ ತೇವಾಂಶದ ಪರಿಸ್ಥಿತಿಗೆ ಸೂಕ್ತವಾಗಿದೆ

- ವೆಚ್ಚ : ` 20,000/- ಒಂದು ಎಕರೆಗೆ
- ಖರ್ಚು ಲಾಭದ ಅನುಪಾತ 1:1.6

ಇದನ್ನು ಮಾಡಿ

ನೀರನ್ನು ಸಮರ್ಥವಾಗಿ ಬಳಸುವ ಹಿಪ್ಪುನೇರಳೆ ತಳಿಗಳನ್ನು ಆರಿಸಿಕೊಳ್ಳಿ

ಇದನ್ನು ಮಾಡಬೇಡಿ

ಸಸಿಗಳನ್ನು ತುಂಬಾ ಒತ್ತಾಗಿ ನೆಡಬೇಡಿ

ಎ.ಎಮ್.ಐ.ಟಿ (ಅಮಿಟ್) ತಾಂತ್ರಿಕತೆ

- ಶಿಫಾರಸ್ಸು ಮಾಡಿದ ವರ್ಷ: 2013

ಪ್ರಮುಖ ಅಂಶಗಳು

- ಒಂದು ಮೀಟರ್ ಎತ್ತರದಲ್ಲಿ ಸ್ಥಾಪಿಸಿರುವ ನೀರಿನ ಟ್ಯಾಂಕ್‌ಗೆ (1,000 ಲೀ.) ಪ್ಲಾಸ್ಟಿಕ್ ಕೊಳವೆ ಜೋಡಿಸಿ ಇದಕ್ಕೆ ಲ್ಯಾಟರಲ್ ಮತ್ತು ಎಮಿಟರ್‌ಗಳಿಂದ ಸಂಪರ್ಕ ಕಲ್ಪಿಸುವ ಜಾಲಬಂಧ
- ಮಳೆ ಆಶ್ರಿತ ಶುಷ್ಕ ಭೂಮಿಗಳಲ್ಲಿ ರೇಷ್ಮೆ ಕೃಷಿಯನ್ನು ಪುನಶ್ಚೇತನಗೊಳಿಸುವ ಕಡಿಮೆ ವೆಚ್ಚದ ಹಾಗೂ ಪರಿಸರ ಸ್ನೇಹಿ ತಾಂತ್ರಿಕತೆ
- ಅಂತರ್ಜಲ ಮೂಲಗಳು ಕ್ಷೀಣಿಸುತ್ತಿರುವ ಸಂದರ್ಭಗಳಲ್ಲಿ ಅತ್ಯಂತ ಪ್ರಯೋಜನಕಾರಿ
- ಅಸ್ಥಿರ ವಿದ್ಯುತ್ ಪೂರೈಕೆ ಇದ್ದಾಗಲೂ ಲಭ್ಯವಿರುವ ನೀರಿನ ಪರಿಣಾಮಕಾರಿ ಬಳಕೆ
- ಒಂದು ದಿನಕ್ಕೆ 10,00 ಲೀಟರ್ ನೀರಿನ ಲಭ್ಯತೆ ಇರುವ ರೈತರು ಪರ್ಯಾಯ ದಿನಗಳಲ್ಲಿ ಹಿಪ್ಪುನೇರಳೆ ಮರವೊಂದಕ್ಕೆ 2–2.5 ಲೀಟರ್‌ನಂತೆ ಒಟ್ಟು 680 ಮರಗಳನ್ನು ಸುಲಭವಾಗಿ ಬೆಳೆಸಬಹುದು.

ಪ್ರಯೋಜನಗಳು

- ನೀರು, ಶ್ರಮ ಮತ್ತು ವಿದ್ಯುಚ್ಛಕ್ತಿ ಉಳಿಸುತ್ತದೆ
- ಬೇಸಾಯದ ಖರ್ಚಿನಲ್ಲಿ ಕಡಿತ
- ನೀರಿನ ದಕ್ಷತಾ ಪ್ರಮಾಣ ಶೇ. 95 ಕ್ಕಿಂತಲೂ ಹೆಚ್ಚು

ಅನಾನುಕೂಲತೆ

- ಮರಗಳಾಗಿ ಬೆಳೆಸಿದ ಹಿಪ್ಪುನೇರಳೆ ತೋಟಕ್ಕೆ ಹೆಚ್ಚು ಸೂಕ್ತ
- ನೀರಿನ ಕೊರತೆ ಮತ್ತು ಅನಿಯಮಿತ ಮಳೆ ಪ್ರದೇಶದಲ್ಲಿ ಅಳವಡಿಸಬಹುದು
- ನೀರು ಮತ್ತು ವಿದ್ಯುತ್ ಅಭಾವದಿಂದ ಪಾರಾಗಬಹುದು

ಇದನ್ನು ಮಾಡಿ

- ವಿದ್ಯುತ್ ಪೂರೈಕೆ ಸಮಯವನ್ನು ಆಧರಿಸಿ ನೀರನ್ನು ಸಂಗ್ರಹಿಸಿಟ್ಟುಕೊಳ್ಳಿ

ಇದನ್ನು ಮಾಡಬೇಡಿ

- ಕಳಪೆ ಗುಣಮಟ್ಟದ ಕೊಳವೆ ಮತ್ತು ಎಮಿಟರ್‌ಗಳನ್ನು

ಟ್ರೆಂಚಿಂಗ್ ಮತ್ತು ಮಲ್ಚಿಂಗ್

- ಶಿಫಾರಸ್ಸು ಮಾಡಿದ ವರ್ಷ: 2012

ಪ್ರಮುಖ ಅಂಶಗಳು

- ಪರ್ಯಾಯ ಸಾಲುಗಳಲ್ಲಿ 1.5 ಅಡಿ ಅಗಲ & 1 ಅಡಿ ಆಳದ ಕಂದಕಗಳನ್ನು ತೆಗೆಯಿರಿ
- ಕಂದಕಗಳಲ್ಲಿ ಹಿಪ್ಪುನೇರಳೆ ಎಲೆಗಳು, ಕಡ್ಡಿಗಳು/ರೆಂಬೆಗಳು, ರೇಷ್ಮೆ ಹುಳುವಿನ ತ್ಯಾಜ್ಯ ಹಾಗೂ ಲಭ್ಯವಿರುವ ಬೇವು, ಹೊಂಗೆ ಮತ್ತು ಗ್ಲಿರಿಸಿಡಿಯ ಎಲೆಗಳನ್ನು ತುಂಬಿ ಮಣ್ಣಿನಿಂದ ಮುಚ್ಚಿರಿ.
- ಮುಂಗಾರಿನ ಪ್ರಾರಂಭದಲ್ಲಿ, ಅಂದರೆ ಜೂನ್ ಮತ್ತು ಅಕ್ಟೋಬರ್–ನವೆಂಬರ್ ನಲ್ಲಿ ಹಸಿರು ಗೊಬ್ಬರ ಬೆಳೆಯ ಬೀಜವನ್ನು ಬೆತ್ತನೆ ಮಾಡಿ, ಅವು ಹೂ ಬಿಡುವ ಮುನ್ನ ಮಣ್ಣಿಗೆ ಸೇರಿಸಿ.

ಕಂದಕಗಳು ಮಳೆ ನೀರು ಕೊಯಿಲಿನ ಕಾಲುವೆಗಳಾಗಿಯೂ ಕಾರ್ಯ ನಿರ್ವಹಿಸುವುದರಿಂದ ಹಿಪ್ಪುನೇರಳೆ ಕಡ್ಡಿ ಮತ್ತು ರೇಷ್ಮೆ ತ್ಯಾಜ್ಯಗಳ ಕೊಳೆಯುವಿಕೆಯು ತ್ವರಿತವಾಗಿ ನಡೆದು ಪೋಷಕಾಂಶಭರಿತ ಗೊಬ್ಬರ ದೊರೆಯಲು ಅನುವು ಮಾಡಿ ಕೊಡುತ್ತದೆ.

- **ಪರ್ಯಾಯ ತಂತ್ರಜ್ಞಾನದ ಮೇಲಿನ ಅನುಕೂಲಗಳು:** ಮಣ್ಣಿನೊಳಗಿನ ಜೈವಿಕ ಒಗ್ಗೂಡುವಿಕೆಯಿಂದ ಫಲವತ್ತತೆ/ಸಾವಯವ ವಸ್ತು ತುಂಬುವುದರಿಂದ ಗೊಬ್ಬರದ ಲಭ್ಯತೆ ಮತ್ತು ಮಣ್ಣಿನ ತೇವಾಂಶ ಸಂರಕ್ಷಣೆ
- ವೆಚ್ಚ : ` 15,000/- ಒಂದು ಎಕರೆಗೆ
- ಖರ್ಚು ಲಾಭದ ಅನುಪಾತ: 1:1.54

ಇದನ್ನು ಮಾಡಿ

- ಕಂದಕಗಳಲ್ಲಿ ತಾಜಾ ಎಲೆ ಮತ್ತು ರೆಂಬೆ/ಚಿಗುರುಗಳನ್ನು ತುಂಬಿ
- ಕಂದಕಗಳನ್ನು ಅಗೆದು ತೆಗೆದ ಮಣ್ಣಿನಿಂದ ಮುಚ್ಚಿ

ಇದನ್ನು ಮಾಡಬೇಡಿ

- ಕಂದಕಗಳನ್ನು ತೆರೆದು ಇಡಬೇಡಿ

ಹಿಪ್ಪುನೇರಳೆ ಎಲೆಗಳ ಮೇಲೆ "ಪೋಷಣ್" ಸಿಂಪಡಿಸುವಿಕೆ

- ಶಿಫಾರಸ್ಸು ಮಾಡಿದ ವರ್ಷ: 2011

ಪ್ರಮುಖ ಅಂಶಗಳು

- ಪೋಷಣ್ ಒಂದು ಬಹು ಪೌಷ್ಟಿಕ ದ್ರಾವಕ
- ಪೋಷಣ್ ಸಿಂಪಡಣೆಯಿಂದ ಸೊಪ್ಪಿನ ಇಳುವರಿ ಶೇ.20 ರಷ್ಟು ಹೆಚ್ಚಾಗುವುದೇ ಅಲ್ಲದೆ ಎಲೆಗಳ ಗುಣಮಟ್ಟದಲ್ಲಿ ಸುಧಾರಣೆಯಾಗುತ್ತದೆ
- ಪೋಷಣ್ ಸಿಂಪಡಿಸಿದ ಸೊಪ್ಪು ರೇಷ್ಮೆ ಹುಳುಗಳ ಸಮಾನ ಬೆಳವಣಿಗೆ ಹಾಗೂ ಆರೋಗ್ಯಕರ ಅಭಿವೃದ್ಧಿಗೆ ಸಹಕಾರಿ. ಉತ್ತಮ ಕವಚದ ತೂಕ ಹಾಗೂ ಕವಚದ ಅನುಪಾತ ಹೊಂದಿದ ಗುಣಮಟ್ಟದ ಗೂಡುಗಳ ಉತ್ಪಾದನೆ ಆಗುತ್ತದೆ
- ಸಿಂಪಡಿಸಿದ 48 ಗಂಟೆಯ ನಂತರ ಸೊಪ್ಪನ್ನು ರೇಷ್ಮೆ ಹುಳುಗಳಿಗೆ ಕೊಡಬಹುದು

ತಯಾರಿಕೆ ಮತ್ತು ಸಿಂಪಡಣೆ

- ಒಂದು ಲೀಟರ್ ಪೋಷಣ್‌ನ್ನು 140 ಲೀ ನೀರಿನೊಂದಿಗೆ ಬೆರೆಸಿ ಒಂದು ಎಕರೆ ಹಿಪ್ಪುನೇರಳೆ ತೋಟಕ್ಕೆ ಸಿಂಪಡಿಸಬಹುದಾಗಿದೆ (7 ಮಿ.ಲೀ./1 ಲೀ ನೀರಿನಲ್ಲಿ)
- ಪ್ರತೀ ಬೆಳೆಯಲ್ಲಿ ಒಮ್ಮೆ ಕಟಾವಾದ/ಎಲೆ ಬಿಡಿಸಿದ 25–30 ದಿನಗಳ ನಂತರ ಬೆಳಗಿನ ಜಾವ 8–11 ಗಂಟೆಯಲ್ಲಿ ಎಲೆಗಳು ಚೆನ್ನಾಗಿ ಒದ್ದೆಯಾಗುವಂತೆ ಸಿಂಪಡಿಸಿ

ಹಿಪ್ಪುನೇರಳೆ ಎಲೆಗಳ ಪೋಷಕಾಂಶಗಳ ನಿರ್ವಹಣೆ ಮತ್ತು ಹೆಚ್ಚಿನ ಇಳುವರಿ

- ವೆಚ್ಚ: ` 250/- ಒಂದು ಬೆಳೆ/ಎಕರೆ
- ಖರ್ಚು ಲಾಭದ ಅನುಪಾತ 1:7

ಇದನ್ನು ಮಾಡಿ

- ದಿನದ ತಂಪಾದ ಹೊತ್ತಿನಲ್ಲಿ ಸಿಂಪಡಣೆ ಮಾಡಿ
- ಸಿಂಪಡಿಸಿದ 6 ಗಂಟೆಗಳಲ್ಲಿ ಮಳೆ ಬಂದಲ್ಲಿ ಮತ್ತೊಮ್ಮೆ ಸಿಂಪಡಿಸಿ
- ನೀರಾವರಿ ತೋಟಗಳಿಗೆ ಮಾತ್ರ ಶಿಫಾರಸ್ಸು ಮಾಡಲಾಗಿದೆ

ಇದನ್ನು ಮಾಡಬೇಡಿ

- ಗಾಳಿಯ ವಿರುದ್ಧ ದಿಕ್ಕಿನಲ್ಲಿ ಸಿಂಪಡಿಸಬಾರದು

ಗೊಬ್ಬರ ಮತ್ತು ಎರೆ ಗೊಬ್ಬರ ತಯಾರಿಕೆ

- ಶಿಫಾರಸ್ಸು ಮಾಡಿದ ವರ್ಷ: 1995

ಪ್ರಮುಖ ಅಂಶಗಳು

- ಒಂದು ಹೆಕ್ಟೇರ್ ಹಿಪ್ಪುನೇರಳೆ ತೋಟದಿಂದ ಸುಮಾರು 12–15 ಮೆ.ಟನ್ ಸಾವಯವ ಪದಾರ್ಥ ದೊರೆಯಲಿದ್ದು ಅದನ್ನು ಗೊಬ್ಬರವಾಗಿ ಪರಿವರ್ತಿಸಬಹುದು
- ಎತ್ತರದ ಪ್ರದೇಶದಲ್ಲಿ 15 ಅಡಿ ಉದ್ದ x 5 ಅಡಿ ಅಗಲ x 3 ಅಡಿ ಆಳದ ಗುಂಡಿಯನ್ನು ತೆಗೆಯಿರಿ
- ತೋಟದ ತ್ಯಾಜ್ಯವನ್ನು (ಹಿಕ್ಕೆ, ತಿಂದುಳಿದ ಎಲೆ, ಪುಡಿ ಮಾಡಿದ ಕಾಂಡ) ಗುಂಡಿಯೊಳಗೆ ಪದರ ಪದರವಾಗಿ ಹರಡಿ
- ಪ್ರತಿ ಪದರದ ಮೇಲೆ ಸಗಣಿಯ ರಾಡಿ ಅಥವ ಜೈವಿಕ ಅನಿಲದ ಮಡ್ಡಿಯನ್ನು ತೆಳುವಾಗಿ ಹರಡಿ
- ನೆಲಮಟ್ಟದಿಂದ 30–40 ಸೆಂ.ಮೀ. ಎತ್ತರಕ್ಕೆ ತುಂಬಿದ ಮೇಲೆ ಅದನ್ನು ಮಣ್ಣು ಮತ್ತು ಸಗಣಿಯ ಮಡ್ಡಿಯಿಂದ ಲೇಪನ ಮಾಡಿ
- ಇದರೊಂದಿಗೆ ಎರೆಹುಳುಗಳನ್ನು ಬಳಸಿಕೊಂಡು ಸಾವಯವ ತ್ಯಾಜ್ಯವನ್ನು ವೇಗವಾಗಿ ಗೊಬ್ಬರವನ್ನಾಗಿ ಪರಿವರ್ತಿಸಬಹುದು
- ಇದಕ್ಕಾಗಿ ಯೂಡ್ರಿಲಸ್ ಯೂಜಿನೆ, ಈಸೇನಿಯ ಫ್ಹೋಟಿಡೆ ಮತ್ತು ಪೆರಿಯೋನಿಕ್ಸ್ ಎಕ್ಸ್‌ಕಾವೇಟಸ್ ಎಂಬ ಎರೆಹುಳು ತಳಿಗಳನ್ನು ಉಪಯೋಗಿಸಬಹುದು

ಈ ವಿಧಾನದಿಂದ ತ್ಯಾಜ್ಯ ವಸ್ತುಗಳ ಮರುಬಳಕೆಯಾಗಿ ಕಡಿಮೆ ಅವಧಿಯಲ್ಲಿ ಹೆಚ್ಚಿನ ಪೌಷ್ಟಿಕ ಗೊಬ್ಬರ ದೊರಕುತ್ತದೆ

ಪರ್ಯಾಯ ತಂತ್ರಜ್ಞಾನದ ಮೇಲಿನ ಅನುಕೂಲಗಳು: ಸಾಮಾನ್ಯವಾಗಿ ಹಿಪ್ಪುನೇರಳೆ ರೆಂಬೆಗಳು ಕೊಳೆಯಲು 9–12 ತಿಂಗಳು ಹಿಡಿಯುತ್ತದೆ, ಆದರೆ ಈ ವಿಧಾನದಿಂದ ಕೇವಲ 4–5 ತಿಂಗಳಲ್ಲಿ ಉತ್ಕೃಷ್ಟವಾದ ಗೊಬ್ಬರವು ಸಿದ್ಧವಾಗುತ್ತದೆ

ಇದನ್ನು ಮಾಡಿ

- ಕಾಲ ಕಾಲಕ್ಕೆ ನೀರನ್ನು ಚಿಮುಕಿಸುತ್ತಾ ತೇವಾಂಶವನ್ನು ಕಾಪಾಡಿ
- ಹುಲ್ಲಿನ ಮೇಲ್ಹಾವಣಿ ಮಾಡಿ ಗುಂಡಿಯನ್ನು ರಕ್ಷಿಸಿ

ಇದನ್ನು ಮಾಡಬೇಡಿ

- ಎರೆಹುಳುಗಳ ಹಿಕ್ಕೆ ಪತ್ತೆಯಾದ ಕೂಡಲೇ ನೀರುಣಿಸುವುದನ್ನು ನಿಲ್ಲಿಸಿ

ನಾವಿನ್ಯ– ಹಿಪ್ಪುನೇರಳೆ ಬೇರು ಕೊಳೆ ರೋಗ ನಿರ್ವಹಣೆಗಾಗಿ ಸಸ್ಯಾಧಾರಿತ ಉತ್ಪನ್ನ

- ಶಿಫಾರಸ್ಸು ಮಾಡಿದ ವರ್ಷ: 2011

ಪ್ರಮುಖ ಅಂಶಗಳು

- ನಿರ್ದಿಷ್ಟ ಗುರಿ ಹೊಂದಿರುವ ಸಸ್ಯಾಧಾರಿತ ಉತ್ಪನ್ನ
- ಮಣ್ಣಿನಲ್ಲಿರುವ ಪ್ರಯೋಜನಕಾರಿ ಸೂಕ್ಷ್ಮ ಜೀವಿಗಳ ಮೇಲೆ ಯಾವುದೇ ದುಷ್ಪರಿಣಾಮ ಬೀರುವುದಿಲ್ಲ
- ಉಪಯೋಗಿಸುವುದು ಸುಲಭ
- ಶೇಖರಣಾ ಅವಧಿ 2 ವರ್ಷ

ತಯಾರಿಕೆ ಮತ್ತು ಉಪಯೋಗಿಸುವಿಕೆ

- ಬೇರು ಕೊಳೆ ರೋಗ ಲಕ್ಷಣ ತೋರುವ ಒಣಗಿದ ಅಥವಾ ಸೊರಗಿದ ಗಿಡಗಳನ್ನು ಭೂಮಿಯಿಂದ 1 ಅಡಿ ಎತ್ತರಕ್ಕೆ ಕತ್ತರಿಸಿ.
- ಬೇರಿನ ಸುತ್ತ ಮಣ್ಣನ್ನು ತೆಗೆದು ಹಾಕಿ ಹಳ್ಳ ಮಾಡಿ
- 10 ಗ್ರಾಂ ನಾವಿನ್ಯವನ್ನು 1 ಲೀಟರ್ ನೀರಿನೊಂದಿಗೆ ಬೆರೆಸಿ ದ್ರಾವಣವನ್ನು ತಯಾರಿಸಿ (100 ಲೀಟರ್ ನೀರಿಗೆ 1 ಕೆ.ಜಿ. ನಾವಿನ್ಯ ಬೆರೆಸಿ 100 ಗಿಡಗಳಿಗೆ ಉಪಯೋಗಿಸಬಹುದು)
- ಈ ದ್ರಾವಣವನ್ನು ಕಟಾವು ಮಾಡಿದ ಗಿಡಗಳ ಮೇಲೆ ಬುಡದವರೆಗೆ ಪೂರ್ತಿ ನೆನೆಯುವಂತೆ ಸುರಿಯಬೇಕು (ಒಂದು ಗಿಡಕ್ಕೆ ಒಂದು ಲೀಟರ್‌ನಂತೆ)
- ಬುಡದ ಭಾಗವನ್ನು ಅಗೆದ ಮಣ್ಣಿನಿಂದ ಮುಚ್ಚಿರಿ
- ರೋಗ ಹರಡುವುದನ್ನು ತಪ್ಪಿಸಲು ಅಕ್ಕ ಪಕ್ಕದ ಗಿಡಗಳಿಗೂ ನಾವಿನ್ಯ ಬಳಸಿರಿ

ಬೇರು ಕೊಳೆ ರೋಗದ ಪರಿಣಾಮಕಾರಿ ನಿಯಂತ್ರಣ

- ವೆಚ್ಚ:: ` 300/- ಅರ್ಧ ಕೆ.ಜಿ. ಗೆ (50 ಗಿಡಗಳಿಗೆ ಬಳಸಬಹುದು)
- ಖರ್ಚು ಲಾಭದ ಅನುಪಾತ: 1:4.5

ಇದನ್ನು ಮಾಡಿ

- ಸಂಪೂರ್ಣವಾಗಿ ಒಣಗಿದ ಮತ್ತು ಸತ್ತ ಗಿಡಗಳನ್ನು ತೆಗೆದು ಸುಟ್ಟು ನಾಶಗೊಳಿಸಿ
- ಬೇರು ಕೊಳೆ ರೋಗ ಕಾಣಿಸಿಕೊಂಡ ತಕ್ಷಣವೇ ನಾವಿನ್ಯ ಉಪಯೋಗಿಸಿ

ಇದನ್ನು ಮಾಡಬೇಡಿ

- ನಾವಿನ್ಯ ಬಳಸಿದ 3–4 ದಿನಗಳ ತನಕ ನೀರು ಹಾಯಿಸಬೇಡಿ
- ನಾವಿನ್ಯವನ್ನು ತೇವ ಇರುವ ಸ್ಥಳದಲ್ಲಿ ಸಂಗ್ರಹಣೆ ಮಾಡಬೇಡಿ
- ನಾವಿನ್ಯವನ್ನು ಮಕ್ಕಳ ಕೈಗೆಟಕುವ ಸ್ಥಳದಲ್ಲಿ ಇಡಬೇಡಿ

ನಿಮಾಹರಿ–ಹಿಪ್ಪುನೇರಳೆ ಬೇರಿನ ಗಂಟು ರೋಗ ನಿರ್ವಹಣೆಗಾಗಿ ಸಸ್ಯಾಧಾರಿತ ಉತ್ಪನ್ನ

- ಶಿಫಾರಸ್ಸು ಮಾಡಿದ ವರ್ಷ: 2012

ಪ್ರಮುಖ ಅಂಶಗಳು

- ನಿರ್ದಿಷ್ಟ ಗುರಿ ಹೊಂದಿರುವ ಸಸ್ಯಾಧಾರಿತ ಉತ್ಪನ್ನ
- ಮಣ್ಣಿನಲ್ಲಿರುವ ಪ್ರಯೋಜನಕಾರಿ ಸೂಕ್ಷ್ಮ ಜೀವಿಗಳ ಮೇಲೆ ಯಾವುದೇ ದುಷ್ಪರಿಣಾಮ ಬೀರುವುದಿಲ್ಲ
- ಬೇರುಗಳಿಂದ ಸುಲಭವಾಗಿ ಹೀರಿಕೊಳ್ಳಲ್ಪಡುತ್ತದೆ
- ಜಂತು ಹುಳುಗಳನ್ನು ಪ್ರತಿಬಂಧಿಸಿ ಮಣ್ಣಿನಲ್ಲಿ ಅವುಗಳ ಉತ್ಪಾದನೆಯನ್ನು ತಡೆಯುತ್ತದೆ
- ಉಪಯೋಗಿಸುವುದು ಸುಲಭ
- ಶೇಖರಣಾ ಅವಧಿ 2 ವರ್ಷ

ತಯಾರಿಕೆ ಮತ್ತು ಉಪಯೋಗಿಸುವಿಕೆ

- 16 ಕೆ.ಜಿ. ನಿಮಾಹರಿಯನ್ನು 160 ಕೆ.ಜಿ. ಕೊಟ್ಟಿಗೆ ಗೊಬ್ಬರದೊಂದಿಗೆ ಮಿಶ್ರಣ ಮಾಡಿ (1 ಎಕರೆಗೆ)
- ಗಿಡದ ಎರಡೂ ಬದಿಯಲ್ಲಿ 15 ಸೆಂ.ಮೀ. ಆಳದ ಸಣ್ಣ ಹಳ್ಳ ಮಾಡಿ
- ಈ ಹಳ್ಳದಲ್ಲಿ ನಿಮಾಹರಿ ಮಿಶ್ರಣವನ್ನು ಹಾಕಿ ಮಣ್ಣು ಮುಚ್ಚಿ ನೀರು ಹಾಯಿಸಿ
- ಮೊದಲ ಬಾರಿ ನಿಮಾಹರಿ ಬಳಸಿದ 70–80 ದಿನಗಳ ನಂತರ ಎರಡನೇ ಬಾರಿ ಬಳಸಿ
- ಸೋಂಕು ತೀವ್ರವಾಗಿದ್ದಲ್ಲಿ (ಗಿಡವೊಂದಕ್ಕೆ 50ಕ್ಕೂ ಹೆಚ್ಚು ಗಂಟುಗಳಿದ್ದಲ್ಲಿ) ಎರಡನೇ ಬಾರಿ ನಿಮಾಹರಿ ಬಳಸಿದ 140–150 ದಿನಗಳ ನಂತರ ಮೂರನೇ ಬಾರಿ ಬಳಸಿ

ಬೇರು ಗಂಟು ರೋಗದ ಪರಿಣಾಮಕಾರಿ ನಿಯಂತ್ರಣ

- ವೆಚ್ಚ: ` 100/- ಕೆ.ಜಿ.ಗೆ
- ಖರ್ಚು ಲಾಭದ ಅನುಪಾತ 1:2.2

ಇದನ್ನು ಮಾಡಿ

- ಬೇರು ಗಂಟಿನ ಆರಂಭಿಕ ಲಕ್ಷಣ ಕಂಡ ಕೂಡಲೇ ನಿಮಾಹರಿ ಉಪಯೋಗಿಸಿ
- ನಿಮಾಹರಿ ಬಳಕೆಯ ನಂತರ ತಕ್ಷಣವೇ ನೀರು ಹಾಯಿಸಿ
- ಮಣ್ಣಿನ ಸಾವಯವ ಇಂಗಾಲದ ಅಂಶವನ್ನು ಕಾಪಾಡಲು ಕೊಟ್ಟಿಗೆ ಗೊಬ್ಬರವನ್ನು ಬಳಸಿ
- ಸೋಂಕಿತ ತೋಟದಲ್ಲಿ ಬಳಸಲಾಗುತ್ತಿರುವ ಕೃಷಿಉಪಕರಣಗಳನ್ನು ಚೆನ್ನಾಗಿ ತೊಳೆಯಿರಿ

ಇದನ್ನು ಮಾಡಬೇಡಿ

- ನಿಮಾಹರಿಯನ್ನು ತೇವ ಇರುವ ಸ್ಥಳದಲ್ಲಿ ಸಂಗ್ರಹಣೆ ಮಾಡಬೇಡಿ
- ನಿಮಾಹರಿಯನ್ನು ಮಕ್ಕಳ ಕೈಗೆಟಕುವ ಸ್ಥಳದಲ್ಲಿ ಇಡಬೇಡಿ
- ಚಿಕಿತ್ಸೆ ನೀಡಿದ ಹಿಪ್ಪುನೇರಳೆ ತೋಟದಿಂದ ನೀರು ತುಂಬಿ ಹರಿದು ಹೋಗುವುದನ್ನು ತಪ್ಪಿಸಿ

ತುಕ್ಕ ಬೂಸ್ಟು ತಿಗಣೆಯ ಸಮಗ್ರ ನಿಯಂತ್ರಣ

- ಶಿಫಾರಸ್ಸು ಮಾಡಿದ ವರ್ಷ: 1990

ಪ್ರಮುಖ ಅಂಶಗಳು

- ಬೂಸ್ಟು ತಿಗಣೆಯು ಹಿಪ್ಪುನೇರಳೆಯ ಪ್ರಮುಖ ರಸ ಹೀರುವ ಪೀಡೆಯಾಗಿದ್ದು
- 150 ಕ್ಕೂ ಅಧಿಕ ಪರ್ಯಾಯ ಆಸರೆ ಸಸ್ಯಗಳಲ್ಲಿ ಕಂಡುಬರುತ್ತದೆ
- ವರ್ಷವಿಡೀ ಕಾಣಿಸಿಕೊಂಡರೂ ಸಹ, ಬೇಸಿಗೆಯಲ್ಲಿ ಇದರ ಬಾಧೆ ಹೆಚ್ಚಾಗಿರುತ್ತದೆ
- ಸೊಪ್ಪಿನ ಇಳುವರಿಯಲ್ಲಿ ವರ್ಷಕ್ಕೆ ಒಂದು ಎಕರೆಗೆ ಸುಮಾರು 1800 ಕೆ.ಜಿ. ಯಷ್ಟು ನಷ್ಟ ಉಂಟಾಗುತ್ತದೆ
- ಇದು 350–500 ಗುಲಾಬಿ ಬಣ್ಣದ ಮೊಟ್ಟೆಗಳನ್ನಿಡುತ್ತದೆ. 6–9 ದಿನಗಳಲ್ಲಿ ಹೊರಬರುವ ಮರಿಹುಳುಗಳು 23–27 ದಿನಗಳವರೆಗೆ ಸತತವಾಗಿ ರಸ ಹೀರುತ್ತವೆ.

ನಿರ್ವಹಣಾ ಕ್ರಮಗಳು

ಯಾಂತ್ರಿಕ ವಿಧಾನ

- ಬಾಧೆಗೊಳಗಾದ ಭಾಗಗಳನ್ನು ಕತ್ತರಿಸಿ ತೆಗೆದು ಸುಟ್ಟು ನಾಶ ಮಾಡಿ ಅಥವಾ ಶೇ.0.5 ಸೋಪಿನ ದ್ರಾವಣದಲ್ಲಿ ಮುಳುಗಿಸಿ

ರಾಸಾಯನಿಕ ವಿಧಾನ

- ಶೇ. 0.2 ರ ಡಿಡಿವಿಪಿ (76% ಇ.ಸಿ) ದ್ರಾವಣವನ್ನು (1 ಲೀಟರ್ ನೀರಿನಲ್ಲಿ 2.63 ಮಿ.ಲೀ. ಡಿಡಿವಿಪಿ) ಕಟಾವಾದ 15–20 ದಿನಗಳಲ್ಲಿ ಸಿಂಪಡಿಸಿ
- ಡಿಡಿವಿಪಿ ಸಿಂಪಡಿಸಿದ 15–17 ದಿನಗಳ ನಂತರ ಸೊಪ್ಪನ್ನು ರೇಷ್ಮೆಹುಳುಗಳಿಗೆ ನೀಡಬಹುದು

ಜೈವಿಕ ವಿಧಾನ

- ಪರಭಕ್ಷಕ ಗುಲಗಂಜಿ ಕೀಟಗಳಾದ ಸ್ಕಿಮ್ನಸ್ ಕಾಕ್ಸಿವೋರ (ಎಕರೆಗೆ 500 ರಂತೆ) ಅಥವಾ ಕ್ರಿಪ್ಟೋಲಿಮಸ್ ಮಾಂಟ್ರೋಜೈರಿ (ಎಕರೆಗೆ 250 ರಂತೆ) ವರ್ಷಕ್ಕೆ ಎರಡು ಕಂತುಗಳಲ್ಲಿ 6 ತಿಂಗಳಿಗೊಮ್ಮೆ ಬಿಡಬೇಕು

ಉದಾಹರಣೆ

ಹಿಪ್ಪುನೇರಳೆಯಲ್ಲಿ ಬೂಸ್ಟು ತಿಗಣೆಯ ಪರಿಣಾಮಕಾರಿ ನಿಯಂತ್ರಣ

- ವೆಚ್ಚ: ` 800/- ಎಕರೆಗೆ/ವರ್ಷಕ್ಕೆ ▪ ಖರ್ಚು ಲಾಭದ ಅನುಪಾತ 1: 4

ಇದನ್ನು ಮಾಡಿ

- ರೇಷ್ಮೆ ಹುಳುಗಳು 4ನೇ ಜ್ವರಕ್ಕೆ ಕುಳಿತಾಗ ಬೂಸ್ಟು ತಿಗಣೆ ಬಾಧಿತ ಹಿಪ್ಪುನೇರಳೆ ತುದಿಯನ್ನು ಕತ್ತರಿಸಿ ನಾಶ ಮಾಡಿ
- ಕೀಟನಾಶಕಗಳನ್ನು ತಂಪಾದ ಹೊತ್ತಿನಲ್ಲಿ ಸಿಂಪಡಿಸಿ
- ಕೀಟನಾಶಕ ಸಿಂಪಡಣೆಯ 8–10 ದಿನಗಳ ನಂತರ ಗುಲಗಂಜಿ ಕೀಟಗಳನ್ನು ಬಿಡುಗಡೆ ಮಾಡಿ

ಇದನ್ನು ಮಾಡಬೇಡಿ

- ಕೀಟನಾಶಕವನ್ನು ಗಾಳಿಯ ವಿರುದ್ಧ ದಿಕ್ಕಿನಲ್ಲಿ ಸಿಂಪಡಣೆ ಮಾಡಬೇಡಿ
- ಗುಲಗಂಜಿ ಕೀಟವನ್ನು ಬಿಡುಗಡೆಗೊಳಿಸಿದ ನಂತರ ಕೀಟನಾಶಕ ಸಿಂಪಡಣೆ ಮಾಡಬೇಡಿ

ಪಪ್ಪಾಯಿ ಬೂಸ್ಟು ತಿಗಣೆಯ ಜೈವಿಕ ನಿಯಂತ್ರಣ

- ಶಿಫಾರಸ್ಸು ಮಾಡಿದ ವರ್ಷ: 2010

ಪ್ರಮುಖ ಅಂಶಗಳು

- ಇದು ಪರದೇಶದಿಂದ ಬಂದಿರುವ ಕೀಟ ಪೀಡೆಯಾಗಿದ್ದು ಮೆಕ್ಸಿಕೊ ಇದರ ತಾಯ್ನಾಡು
- ಇದು ಪ್ರಥಮ ಬಾರಿಗೆ 2009 ರಲ್ಲಿ ತಮಿಳುನಾಡಿನಲ್ಲಿ ವರದಿಯಾಗಿದ್ದು ತದನಂತರ ಅಕ್ಕಪಕ್ಕದ ರಾಜ್ಯಗಳಿಗೂ ಹರಡಿ ರೇಷ್ಮೆ ಉದ್ಯಮಕ್ಕೆ ಭಾರೀ ನಷ್ಟ ಉಂಟುಮಾಡಿತು
- ಇದು 400–600 ತಿಳಿ ಹಳದಿ ಬಣ್ಣದ ಮೊಟ್ಟೆಗಳನ್ನಿಡುತ್ತದೆ; ಮೊಟ್ಟೆಯ ಅವಧಿ 8–10 ದಿನಗಳು ಮತ್ತು ಮರಿಹುಳು ಅವಧಿ 22–25 ದಿನಗಳಾಗಿದ್ದು ಜೀವನ ಚಕ್ರವನ್ನು 30–35 ದಿನಗಳಲ್ಲಿ ಮುಗಿಸುತ್ತದೆ

ನಿರ್ವಹಣಾ ಕ್ರಮಗಳು

ಯಾಂತ್ರಿಕ ವಿಧಾನ

- ಬಾಧೆಗೊಳಗಾದ ಭಾಗಗಳನ್ನು ಕತ್ತರಿಸಿ ತೆಗೆದು ತೋಟದ ಒಂದು ಮೂಲೆಯಲ್ಲಿ ಗುಪ್ಪೆ ಮಾಡಿ ಇಡಿ

ಜೈವಿಕ ವಿಧಾನ

- ಪರತಂತ್ರ ಕೀಟವಾದ ಅಸಿರೋಫ್ಲೇಗಸ್ ಪಪ್ಪಾಯೆ (ಎಕರೆಗೆ 100 ಜೀವಿಗಳಂತೆ) ಬಿಡುಗಡೆಗೊಳಿಸಿ. ಇತರೆ ಪರ್ಯಾಯ ಆಸರೆ ಸಸ್ಯಗಳಾದ ಪಪ್ಪಾಯ, ಪಾರ್ಥೇನಿಯಂ, ಜತ್ರೋಪ, ದಾಸವಾಳಗಳ ಮೇಲೂ ಈ ಪರತಂತ್ರ ಜೀವಿಯನ್ನು ಬಿಡಿ

ಹಿಪ್ಪುನೇರಳೆಯಲ್ಲಿ ಪಪ್ಪಾಯಿ ಬೂಸ್ಟು ತಿಗಣೆಯ ಪರಿಣಾಮಕಾರಿ ನಿಯಂತ್ರಣ

ಅಸಿರೋಫ್ಲೇಗಸ್ ಪರತಂತ್ರ ಜೀವಿಯ ಲಭ್ಯತೆ

- ರಾಷ್ಟ್ರೀಯ ಕೃಷಿ ಕೀಟ ಸಂಪನ್ಮೂಲಗಳ ಬ್ಯೂರೋ (NBAIR, ICAR), ಸಿ.ಬಿ.ಐ ಎದುರು, ಗಂಗಾನಗರ, ಬೆಂಗಳೂರು ಇಲ್ಲಿ ಉಚಿತವಾಗಿ ದೊರೆಯುತ್ತದೆ (ದೂರವಾಣಿ ಸಂಖ್ಯೆ: 080-2351 1982)

ಇದನ್ನು ಮಾಡಿ

- ಹಿಪ್ಪುನೇರಳೆ ತೋಟಗಳಲ್ಲಿ ನೈಸರ್ಗಿಕ ಶತ್ರು ಕೀಟಗಳ ಸಂಖ್ಯೆ ಹೆಚ್ಚಿಸಲು ಶ್ರಮಿಸಿ

ಇದನ್ನು ಮಾಡಬೇಡಿ

- ಪಪ್ಪಾಯಿ ಬೂಸ್ಟು ತಿಗಣೆಯ ವಿರುದ್ಧ ಕೀಟನಾಶಕವನ್ನು ಸಿಂಪಡಣೆ ಮಾಡಬೇಡಿ, ಇದರಿಂದ ಪರಿಸ್ಥಿತಿ ಇನ್ನೂ ಹದಗೆಡಬಹುದು
- ಪರ್ಯಾಯ ಆಸರೆ ಸಸ್ಯಗಳಾದ ಪಪ್ಪಾಯ, ಪಾರ್ಥೇನಿಯಂ, ಜತ್ರೋಪ, ದಾಸವಾಳ ಇತ್ಯಾದಿಗಳನ್ನು ನಾಶಗೊಳಿಸಬೇಡಿ. ಏಕೆಂದರೆ ಅವುಗಳಲ್ಲಿ ಇರುವ ಬೂಸ್ಟು ತಿಗಣೆಗಳ ಶರೀರದೊಳಗೆ ಪರತಂತ್ರ ಜೀವಿಯ ಮರಿಹುಳು ಬೆಳೆಯುತ್ತಿರುತ್ತವೆ

ಎಲೆ ಸುರುಳಿ ಕೀಟದ ಸಮಗ್ರ ನಿಯಂತ್ರಣ

- ಶಿಫಾರಸ್ಸು ಮಾಡಿದ ವರ್ಷ: 1997

ಪ್ರಮುಖ ಅಂಶಗಳು

- ಎಲೆ ಸುರುಳಿ ಕೀಟವು ಹಿಪ್ಪುನೇರಳೆಯ ಒಂದು ಕಾಲೋಚಿತ ಪೀಡೆ
- ಇದು ಜೂನ್‌ನಿಂದ ಫೆಬ್ರುವರಿ ತನಕ ಕಾಣಿಸಿಕೊಂಡರೂ ಸೆಪ್ಟೆಂಬರ್‌ನಿಂದ ನವೆಂಬರ್ ತನಕ ಇದರ ಬಾಧೆ ಹೆಚ್ಚಾಗಿರುತ್ತದೆ
- ಇದು 80–150 ಮೊಟ್ಟೆಗಳನ್ನಿಡುತ್ತದೆ; ಮೊಟ್ಟೆಯ ಅವಧಿ 2–3 ದಿನಗಳು
- ಮರಿ ಹುಳು ಮತ್ತು ಕೋಶಾವಸ್ಥೆಯ ಅವಧಿ ಕ್ರಮವಾಗಿ 8–12 & 7–9 ದಿನಗಳು
- ಜೀವನ ಚಕ್ರವನ್ನು 17–24 ದಿನಗಳಲ್ಲಿ ಮುಗಿಸುತ್ತದೆ.

ನಿರ್ವಹಣಾ ಕ್ರಮಗಳು

ಯಾಂತ್ರಿಕ ವಿಧಾನ

- ಬಾಧೆಗೊಳಗಾದ ಭಾಗಗಳನ್ನು ಸುರುಳಿ ಕೀಟದ ಸಮೇತ ಕತ್ತರಿಸಿ ತೆಗೆದು ಸುಟ್ಟು ನಾಶ ಮಾಡಿ ಅಥವಾ ಶೇ.0.5 ಸೋಪಿನ ದ್ರಾವಣದಲ್ಲಿ ಮುಳುಗಿಸಿ

ರಾಸಾಯನಿಕ ವಿಧಾನ

- ಶೇ. 0.076ರ ಡಿಡಿವಿಪಿ (76% ಇ.ಸಿ) ದ್ರಾವಣವನ್ನು (1 ಲೀ. ನೀರಿನಲ್ಲಿ 1 ಮಿ.ಲೀ. ಡಿಡಿವಿಪಿ) ಕಟಾವಾದ 12–15 ದಿನಗಳ ನಂತರ ಸಿಂಪಡಿಸಿ
- ಸಿಂಪಡಿಸಿದ 7 ದಿನಗಳ ನಂತರ ಸೊಪ್ಪನ್ನು ರೇಷ್ಮೆ ಹುಳುಗಳಿಗೆ ನೀಡಬಹುದು

ಜೈವಿಕ ವಿಧಾನ

- ಮೊಟ್ಟೆ ಪರತಂತ್ರ ಜೀವಿಯಾದ ಟ್ರೈಕೋಗ್ರಾಮ ಖಿಲೋನಿಸ್ ಎಕರೆಗೆ ಪ್ರತಿ ಬೆಳೆಗೆ 4 ಕಾರ್ಡ್‌ಗಳಂತೆ ಬಿಡುಗಡೆಗೊಳಿಸಿ (ಜುಲೈ ನಿಂದ ಫೆಬ್ರುವರಿ ತನಕ)

ಹಿಪ್ಪುನೇರಳೆಯಲ್ಲಿ ಎಲೆ ಸುರುಳಿ ಕೀಟದ ಪರಿಣಾಮಕಾರಿ ನಿಯಂತ್ರಣ

- ವೆಚ್ಚ: ` 800/- ಎಕರೆಗೆ/ವರ್ಷಕ್ಕೆ
- ಖರ್ಚು ಲಾಭದ ಅನುಪಾತ: 1:4

ಇದನ್ನು ಮಾಡಿ

- ಮಣ್ಣಿನಲ್ಲಿರುವ ಎಲೆ ಸುರುಳಿ ಕೀಟದ ಕೋಶಗಳು ಪಕ್ಷಿಗಳಿಗೆ ಆಹಾರವಾಗುವಂತೆ ಆಳವಾಗಿ ಉಳುಮೆ ಮಾಡಿ
- ಕೀಟನಾಶಕ ಸಿಂಪಡಣೆಯ 7 ದಿನಗಳ ನಂತರ ಮೊಟ್ಟೆ ಪರತಂತ್ರ ಜೀವಿಗಳನ್ನು ಬಿಡುಗಡೆ ಮಾಡಿ
- ಕೀಟನಾಶಕಗಳನ್ನು ತಂಪಾದ ಹೊತ್ತಿನಲ್ಲಿ ಸಿಂಪಡಿಸಿ

ಇದನ್ನು ಮಾಡಬೇಡಿ

- ಪರತಂತ್ರ ಜೀವಿಯನ್ನು ಬಿಡುಗಡೆಗೊಳಿಸಿದ ನಂತರ ಕೀಟನಾಶಕ ಸಿಂಪಡಣೆ ಮಾಡಬೇಡಿ
- ಕೀಟನಾಶಕವನ್ನು ಗಾಳಿಯ ವಿರುದ್ಧ ದಿಕ್ಕಿನಲ್ಲಿ ಸಿಂಪಡಣೆ ಮಾಡಬೇಡಿ

ಬಿಹಾರದ ಕಂಬಳಿ ಹುಳುವಿನ ಸಮಗ್ರ ನಿಯಂತ್ರಣ

- ಶಿಫಾರಸ್ಸು ಮಾಡಿದ ವರ್ಷ: 1995–96

ಪ್ರಮುಖ ಅಂಶಗಳು

- ಈ ಕೀಟ ಪೀಡೆಯು ಹಿಪ್ಪುನೇರಳೆ ಎಲೆಗಳನ್ನು ಯಥೇಚ್ಚವಾಗಿ ತಿನ್ನುತ್ತದೆ
- ಇದು ಮುಂಗಾರಿನ ಪ್ರಾರಂಭದಲ್ಲಿ ಕಾಣಿಸಿಕೊಂಡು ಫೆಬ್ರವರಿ ತನಕ ಇರುತ್ತದೆ
- ಇದು 1,000–1,200 ಮೊಟ್ಟೆಗಳನ್ನು ಗುಂಪಾಗಿ ಇಡುತ್ತದೆ; ಮೊಟ್ಟೆಯ ಅವಧಿ 5–7 ದಿನಗಳು
- ಮರಿಹುಳು & ಕೋಶಾವಸ್ಥೆಯ ಅವಧಿ ಕ್ರಮವಾಗಿ 28–30 & 12–14 ದಿನಗಳು
- ಜೀವನ ಚಕ್ರವನ್ನು 45–51 ದಿನಗಳಲ್ಲಿ ಮುಗಿಸುತ್ತದೆ

ನಿರ್ವಹಣಾ ಕ್ರಮಗಳು

ಯಾಂತ್ರಿಕ ವಿಧಾನ

- ಮೊಟ್ಟೆ ಮತ್ತು ಗುಂಪಾಗಿ ವಾಸಿಸುವ ಎಳೆಯ ಕಂಬಳಿಹುಳುಗಳನ್ನು ಸಂಗ್ರಹಿಸಿ ಸುಟ್ಟು ನಾಶ ಮಾಡಿ
- ಆಳವಾದ ಉಳುಮೆಯಿಂದ ಮಣ್ಣಿನಲ್ಲಿರುವ ಕೋಶಗಳು ಪಕ್ಷಿಗಳಿಗೆ ಮತ್ತು ಸೂರ್ಯನ ಶಾಖಕ್ಕೆ ಒಡ್ಡಲ್ಪಟ್ಟು ನಾಶ ಹೊಂದುತ್ತವೆ
- ಭೂಮಿಯಲ್ಲಿ ನೀರು ನಿಲ್ಲುವಂತೆ ಮಾಡಿದಾಗ ಕೋಶಗಳು ನಾಶವಾಗುತ್ತವೆ

ರಾಸಾಯನಿಕ ವಿಧಾನ

- ಶೇ. 0.15ರ ಡಿಡಿವಿಪಿ (76% ಇ.ಸಿ.) ದ್ರಾವಣವನ್ನು (1 ಲೀಟರ್ ನೀರಿನಲ್ಲಿ 2 ಮಿ.ಲೀ. ಡಿಡಿವಿಪಿ ಬೆರೆಸಿ) ಕಟಾವಾದ 12–15 ದಿನಗಳ ನಂತರ ಸಿಂಪಡಿಸಿ
- ಸಿಂಪಡಿಸಿದ 10 ದಿನಗಳ ನಂತರ ಸೊಪ್ಪನ್ನು ರೇಷ್ಮೆ ಹುಳುಗಳಿಗೆ ನೀಡಬಹುದು

ಜೈವಿಕ ವಿಧಾನ

- ಮೊಟ್ಟೆ ಪರತಂತ್ರ ಜೀವಿಯಾದ ಟ್ರೈಕೋಗ್ರಾಮ ಖಿಲೋನಿಸ್ ಎಕರೆಗೆ ಪ್ರತಿ ಬೆಳೆಗೆ 4 ಕಾರ್ಡ್ ಗಳಂತೆ ಬಿಡುಗಡೆಗೊಳಿಸಿ

ಅನುಕೂಲತೆ

ಹಿಪ್ಪುನೇರಳೆಯಲ್ಲಿ ಕಂಬಳಿ ಹುಳುವಿನ ಪರಿಣಾಮಕಾರಿ ನಿಯಂತ್ರಣ

- ವೆಚ್ಚ: ` 1,000/- ಎಕರೆಗೆ/ವರ್ಷಕ್ಕೆ
- ಖರ್ಚು ಲಾಭದ ಅನುಪಾತ: 1:3

ಇದನ್ನು ಮಾಡಿ

- ಕೀಟನಾಶಕ ಸಿಂಪಡಣೆಯ 7 ದಿನಗಳ ನಂತರ ಮೊಟ್ಟೆ ಪರತಂತ್ರ ಜೀವಿಗಳನ್ನು ಬಿಡುಗಡೆ ಮಾಡಿ
- ಕೀಟನಾಶಕಗಳನ್ನು ತಂಪಾದ ಹೊತ್ತಿನಲ್ಲಿ ಸಿಂಪಡಿಸಿ

ಇದನ್ನು ಮಾಡಬೇಡಿ

- ಪರತಂತ್ರ ಜೀವಿಯನ್ನು ಬಿಡುಗಡೆಗೊಳಿಸಿದ ನಂತರ ಕೀಟನಾಶಕ ಸಿಂಪಡಣೆ ಮಾಡಬೇಡಿ
- ಕೀಟನಾಶಕವನ್ನು ಗಾಳಿಯ ವಿರುದ್ಧ ದಿಕ್ಕಿನಲ್ಲಿ ಸಿಂಪಡಣೆ ಮಾಡಬೇಡಿ

ಕ್ರೈಸೋಪ (ಹಸಿರು ಲೇಸ್ ವಿಂಗ್)ದಿಂದ ಥ್ರಿಪ್ಸ್ ನಿರ್ವಹಣೆ

- ಶಿಫಾರಸ್ಸು ಮಾಡಿದ ವರ್ಷ: 2016

ಪ್ರಮುಖ ಅಂಶಗಳು

- ಕ್ರೈಸೋಪ ಅನೇಕ ಕೃಷಿ ಬೆಳೆ ವ್ಯವಸ್ಥೆಗಳಲ್ಲಿ ಒಂದು ಮುಖ್ಯವಾದ ವಿಶಾಲ ವ್ಯಾಪ್ತಿ ಹೊಂದಿರುವ ಪರಭಕ್ಷಕ ಕೀಟ
- ಕ್ರೈಸೋಪರ್ಲ ಹಾಗೂ ಮಲ್ಲಾಡ ಇವು ಪ್ರಮುಖ ಜಾತಿಯ ಕ್ರೈಸೋಪಿಡ್ ಜೀವಿಗಳಾಗಿವೆ
- ಪ್ರೌಢ ಚಿಟ್ಟೆಗಳು ಅತ್ಯಾಕರ್ಷಕವಾದ ಹೆಣೆದಂತಿರುವ ಹಸಿರುಬಣ್ಣದ ರೆಕ್ಕೆಗಳನ್ನು ಹೊಂದಿವೆ. ಇವು ಇತರ ಕೀಟಗಳು ಸ್ರವಿಸುವ ರಸ, ಮಕರಂದ, ಪರಾಗ ಮತ್ತು ಸಕ್ಕರೆ ಮೂಲದ ವಸ್ತುಗಳನ್ನು ತಿನ್ನುತ್ತವೆ
- ಅವು ಸುಮಾರು 600–800 ಉದ್ದನೆಯ ತೊಟ್ಟುಗಳಿರುವ ಮೊಟ್ಟೆಗಳನ್ನು ಗುಂಪುಗಳಲ್ಲಿ ಎಲೆಗಳ ಮೇಲೆ ಅಥವಾ ಸಸ್ಯಗಳ ವಿವಿಧ ಭಾಗಗಳ ಮೇಲೆ ಅಥವಾ ಪೀಡೆಗಳ ಸಮೀಪ ಇಡುತ್ತವೆ ಮತ್ತು ಅವು 3–4 ದಿನಗಳಲ್ಲಿ ಒಡೆಯುತ್ತವೆ
- ಮರಿ ಹುಳುಗಳು ಮಚ್ಚುಗತ್ತಿಯಂಥಹ ಬಾಯಿಯ ಅಂಗಾಂಶವನ್ನು ಹೊಂದಿದ್ದು ಮೃದು ಶರೀರದ ಕೀಟ ಪೀಡೆಗಳಾದ ಥ್ರಿಪ್ಸ್, ಬೂಸ್ಟು ತಿಗಣೆ, ಶಲ್ಕ ಕೀಟ, ಬಿಳಿ ನೊಣ, ನುಸಿ ಪೀಡೆ, ಕೀಟಗಳ ಮೊಟ್ಟೆಗಳು ಹಾಗೂ ಆಗ ತಾನೇ ಮೊಟ್ಟೆಯೊಡೆದು ಹೊರಬಂದ ಮರಿ ಹುಳುಗಳನ್ನು ತಿನ್ನುತ್ತವೆ. ಮರಿ ಹಂತದ ಅವಧಿ 8–10 ದಿನಗಳು
- ನಂತರ ಅವು ಗುಂಡನೆಯ ಗೂಡುಗಳನ್ನು ಕಟ್ಟಿ 5–7 ದಿನಗಳಲ್ಲಿ ಮತ್ತೆ ಪ್ರೌಢ ಚಿಟ್ಟೆಗಳಾಗಿ ಹೊರಬಂದು ಜೀವನ ಚಕ್ರವನ್ನು 16–21 ದಿನಗಳಲ್ಲಿ ಮುಗಿಸುತ್ತವೆ.

ಶಿಫಾರಸ್ಸು

- ಒಂದು ಎಕರೆಗೆ 1,000 ಮೊಟ್ಟೆಗಳಂತೆ ಒಂದು ವಾರದ ಅಂತರದಲ್ಲಿ 2 ಬಾರಿ ಬಿಡುಗಡೆಗೊಳಿಸಬೇಕು
- ಮೊಟ್ಟೆ ಕಾರ್ಡ್ ರೂಪದಲ್ಲಿ ದೊರಕುವ ಇವನ್ನು ಕುಡಿ ಎಲೆಗಳ ಮೇಲೆ ಕಟ್ಟಬೇಕು ಅಥವಾ ಪಿನ್‌ನಿಂದ ಲಗತ್ತಿಸಬೇಕು

ಉದ್ದೇಶ

ಥ್ರಿಪ್ಸ್ ಹಾಗೂ ಇತರೆ ಮೃದು ಶರೀರವುಳ್ಳ ಕೀಟ ಮತ್ತು ನುಸಿ ಪೀಡೆಗಳ ಪರಿಣಾಮಕಾರಿ ಜೈವಿಕ ನಿಯಂತ್ರಣ

ಇದನ್ನು ಮಾಡಿ

- ಥ್ರಿಪ್ಸ್ ಬಾಧೆ ತೀವ್ರವಾಗಿದ್ದಲ್ಲಿ ರೋಗರ್ ಕೀಟನಾಶಕವನ್ನು (3 ಮಿ.ಲೀ. ಒಂದು ಲೀ. ನೀರಿನಲ್ಲಿ) ಸಿಂಪಡಿಸಿ 8–10 ದಿನಗಳ ನಂತರ ಕ್ರೈಸೋಪ ಬಿಡುಗಡೆಗೊಳಿಸಿ
- ಕೀಟನಾಶಕ ಸಿಂಪಡಿಸಿದ 20 ದಿನಗಳ ನಂತರ ಸೊಪ್ಪನ್ನು ರೇಷ್ಮೆ ಹುಳುಗಳಿಗೆ ನೀಡಿ

ಇದನ್ನು ಮಾಡಬೇಡಿ

- ಕ್ರೈಸೋಪ ಬಿಡುಗಡೆಗೊಳಿಸಿದ ನಂತರ ಯಾವುದೇ ಕೀಟ ನಾಶಕವನ್ನು ಸಿಂಪಡಿಸಬಾರದು

ಸಂಕರಣ ರೇಷ್ಮೆ ತಳಿಗಳು

ಸಿಎಸ್‌ಆರ್2 × ಸಿಎಸ್‌ಆರ್4

- ಶಿಫಾರಸ್ಸು ಮಾಡಿದ ವರ್ಷ: 1997

ಪ್ರಮುಖ ಅಂಶಗಳು

- ಉತ್ಪನ್ನಕಾರಿ ದ್ವಿಸಂತತಿ ಸಂಕರಣ ತಳಿ
- ನೀಲಿ ಮಿಶ್ರಿತ ಬಿಳಿ ಬಣ್ಣದ ಹುಳುಗಳು
- ಹುಳುವಿನ ಕಾಲಾವಧಿ 23–24 ದಿನಗಳು
- ಮಧ್ಯಮ ಹೊರಮೈ ಲಕ್ಷಣ ಹೊಂದಿರುವ ಶುಭ್ರ ಬಿಳಿ ಬಣ್ಣದ ಗೂಡುಗಳು
- ಗೂಡಿನ ಇಳುವರಿ: 65–70 ಕೆ.ಜಿ./100 ಮೊಟ್ಟೆಗಳಿಗೆ
- ಕೋಶಾವಸ್ಥೆ ಪರಿವರ್ತನಾ ಪ್ರಮಾಣ: >90%
- ಕಚ್ಚಾ ರೇಷ್ಮೆ ಪ್ರಮಾಣ : 17–18%
- ನೂಲು ಬಿಚ್ಚಾಣಿಕೆ : 86–90%
- ರೇಷ್ಮೆ ನೂಲಿನ ಉದ್ದ: 1,000 ಮೀ.
- ರೇಷ್ಮೆ ನೂಲಿನ ಗುಣಮಟ್ಟ: 2ಎ– 3ಎ
- ರೆಂಡಿಟ್ಟಾ : 5.5–6.0
- ಉತ್ತಮ ಬೆಳೆ ಸ್ಥಿರತೆ

ಶಿಫಾರಸ್ಸು ಮಾಡಲಾಗಿರುವ ಪ್ರದೇಶಗಳು

ಕರ್ನಾಟಕ, ಆಂಧ್ರ ಪ್ರದೇಶ, ತೆಲಂಗಾಣ, ತಮಿಳು ನಾಡು, ಉತ್ತರ ಪ್ರದೇಶ, ಮಧ್ಯ ಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳ ನೀರಾವರಿ ಪ್ರದೇಶಗಳು

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ರೇಷ್ಮೆ ಹುಳು ಸಾಕಾಣಿಕಾ ಕ್ರಮವನ್ನು ಅಳವಡಿಸಿಕೊಳ್ಳಿ

ಸಿಎಸ್‌ಆರ್16 × ಸಿಎಸ್‌ಆರ್17

- ಶಿಫಾರಸ್ಸು ಮಾಡಿದ ವರ್ಷ: 1997

ಪ್ರಮುಖ ಅಂಶಗಳು

- ಉತ್ಪನ್ನಕಾರಿ ದ್ವಿಸಂತತಿ ಸಂಕರಣ ತಳಿ
- ಮಚ್ಚೆ ಇರುವ ನೀಲಿ ಮಿಶ್ರಿತ ಬಿಳಿ ಬಣ್ಣದ ಹುಳುಗಳು
- ಹುಳುವಿನ ಕಾಲಾವಧಿ 23–24 ದಿನಗಳು
- ಶುಭ್ರ ಬಿಳಿ ಬಣ್ಣದ ಮಧ್ಯಮ ಹೊರಮೈ ಲಕ್ಷಣದ ಗೂಡುಗಳು
- ಗೂಡಿನ ಇಳುವರಿ: 65–70 ಕೆ.ಜಿ./100 ಮೊಟ್ಟೆಗಳಿಗೆ
- ಕೋಶಾವಸ್ಥೆ ಪರಿವರ್ತನಾ ಪ್ರಮಾಣ: >90%
- ಕಚ್ಚಾ ರೇಷ್ಮೆಯ ಪ್ರಮಾಣ : 18–19%
- ನೂಲು ಬಿಚ್ಚಾಣಿಕೆ : 86–90%
- ರೇಷ್ಮೆ ನೂಲಿನ ಉದ್ದ: 1,050 ಮೀ.
- ರೇಷ್ಮೆ ನೂಲಿನ ಗುಣಮಟ್ಟ: 2ಎ– 3ಎ
- ರೆಂಡಿಟ್ಟಾ : 5.5–6.0
- ಇದು ಸಿಎಸ್‌ಆರ್2 × ಸಿಎಸ್‌ಆರ್4 ಗೆ ಪರ್ಯಾಯವಾಗಿದೆ
- ಉತ್ತಮ ಬೆಳೆ ಸ್ಥಿರತೆ

ಶಿಫಾರಸ್ಸು ಮಾಡಲಾಗಿರುವ ಪ್ರದೇಶಗಳು

ಕರ್ನಾಟಕ, ಆಂಧ್ರ ಪ್ರದೇಶ, ತೆಲಂಗಾಣ, ತಮಿಳು ನಾಡು, ಉತ್ತರ ಪ್ರದೇಶ, ಮಧ್ಯ ಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳ ನೀರಾವರಿ ಪ್ರದೇಶಗಳು

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ರೇಷ್ಮೆ ಹುಳು ಸಾಕಾಣಿಕಾ ಕ್ರಮವನ್ನು ಅಳವಡಿಸಿಕೊಳ್ಳಿ

ಎಫ್ಸಿ1 × ಎಫ್ಸಿ2
(ಸಿಎಸ್ಆರ್6 × ಸಿಎಸ್ಆರ್26) × (ಸಿಎಸ್ಆರ್2 × ಸಿಎಸ್ಆರ್27)

- ಶಿಫಾರಸ್ಸು ಮಾಡಿದ ವರ್ಷ: 2000

ಪ್ರಮುಖ ಅಂಶಗಳು

- ಉತ್ಪನ್ನಕಾರಿ ದ್ವಿಸಂತತಿ ದ್ವಿಸಂಕರಣ ತಳಿ (ಡಬಲ್ ಹೈಬ್ರಿಡ್)
- ಮಚ್ಚೆ ಇರುವ ನೀಲಿ ಮಿಶ್ರಿತ ಬಿಳಿ ಬಣ್ಣದ ಹುಳುಗಳು
- ಹುಳುವಿನ ಕಾಲಾವಧಿ 23–24 ದಿನಗಳು
- ಶುಭ್ರ ಬಿಳಿ ಬಣ್ಣದ ಮಧ್ಯಮ ಹೊರಮೈ ಲಕ್ಷಣದ ಗೂಡುಗಳು
- ಗೂಡಿನ ಇಳುವರಿ: 70–75 ಕೆ.ಜಿ./100 ಮೊಟ್ಟೆಗಳಿಗೆ
- ಕೋಶಾವಸ್ಥೆ ಪರಿವರ್ತನಾ ಪ್ರಮಾಣ: >90%
- ಕಚ್ಚಾ ರೇಷ್ಮೆಯ ಪ್ರಮಾಣ : 18–19%
- ನೂಲು ಬಿಚ್ಚಾಣಿಕೆ : 86–90%
- ರೇಷ್ಮೆ ನೂಲಿನ ಉದ್ದ: 1,100 ಮೀ.
- ರೇಷ್ಮೆ ನೂಲಿನ ಗುಣಮಟ್ಟ: 2ಎ– 3ಎ
- ರೆಂಡಿಟ್ಟಾ : 5.3–6.0
- ಉತ್ತಮ ಬೆಳೆ ಸ್ಥಿರತೆ

ಶಿಫಾರಸ್ಸು ಮಾಡಲಾಗಿರುವ ಪ್ರದೇಶಗಳು

ಭಾರತದ ಎಲ್ಲಾ ನೀರಾವರಿ ಪ್ರದೇಶಗಳು

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ರೇಷ್ಮೆ ಹುಳು ಸಾಕಾಣಿಕಾ ಕ್ರಮವನ್ನು ಅಳವಡಿಸಿಕೊಳ್ಳಿ

ಚಾಮರಾಜ
(ಸಿಎಸ್‌ಆರ್50 × ಸಿಎಸ್‌ಆರ್51)

- ಶಿಫಾರಸ್ಸು ಮಾಡಿದ ವರ್ಷ: 2012

ಪ್ರಮುಖ ಅಂಶಗಳು

- ದೃಢಕಾಯ ದ್ವಿಸಂತತಿ ಸಂಕರಣ ತಳಿ
- ಮಚ್ಚೆ ಇರುವ ನೀಲಿ ಮಿಶ್ರಿತ ಬಿಳಿ ಬಣ್ಣದ ಹುಳುಗಳು
- ಹುಳುವಿನ ಕಾಲಾವಧಿ 23–24 ದಿನಗಳು
- ಶುಭ್ರ ಬಿಳಿ ಬಣ್ಣದ ಮಧ್ಯಮ ಹೊರಮೈ ಲಕ್ಷಣದ ಗೂಡುಗಳು
- ಗೂಡಿನ ಇಳುವರಿ: 70–75 ಕೆ.ಜಿ./100 ಮೊಟ್ಟೆಗಳಿಗೆ
- ಕೋಶಾವಸ್ಥೆ ಪರಿವರ್ತನಾ ಪ್ರಮಾಣ: >90%
- ಕಚ್ಚಾ ರೇಷ್ಮೆಯ ಪ್ರಮಾಣ : 19–20%
- ನೂಲು ಬಿಚ್ಚಾಣಿಕೆ : 86–90%
- ರೇಷ್ಮೆ ನೂಲಿನ ಉದ್ದ: 1,150 ಮೀ.
- ರೇಷ್ಮೆ ನೂಲಿನ ಗುಣಮಟ್ಟ: 2ಎ– 3ಎ
- ರೆಂಡಿಟ್ಟಾ : 5.0–5.5

ಶಿಫಾರಸ್ಸು ಮಾಡಲಾಗಿರುವ ಪ್ರದೇಶಗಳು

ದೇಶದ ಎಲ್ಲಾ ನೀರಾವರಿ ಪ್ರದೇಶಗಳು ಮತ್ತು ವ್ಯತಿರಿಕ್ತ ಪರಿಸ್ಥಿತಿಗಳಿಗೂ ಸೂಕ್ತವಾಗಿದೆ

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ರೇಷ್ಮೆ ಹುಳು ಸಾಕಾಣಿಕಾ ಕ್ರಮವನ್ನು ಅಳವಡಿಸಿಕೊಳ್ಳಿ

ಜಯಚಾಮರಾಜ

([ಸಿಎಸ್ಆರ್50 × ಸಿಎಸ್ಆರ್52] ×[ಸಿಎಸ್ಆರ್51 × ಸಿಎಸ್ಆರ್53])

- ಶಿಫಾರಸ್ಸು ಮಾಡಿದ ವರ್ಷ: 2012

ಪ್ರಮುಖ ಅಂಶಗಳು

- ಉತ್ಪನ್ನಕಾರಿ ದ್ವಿಸಂತತಿ ದ್ವಿಸಂಕರಣ ತಳಿ (ಡಬಲ್ ಹೈಬ್ರಿಡ್)
- ನೀಲಿ ಮಿಶ್ರಿತ ಬಿಳಿ ಬಣ್ಣದ ಮಚ್ಚೆ ಇರುವ ಹುಳುಗಳು
- ಹುಳುವಿನ ಕಾಲಾವಧಿ 23–24 ದಿನಗಳು
- ಶುಭ್ರ ಬಿಳಿ ಬಣ್ಣದ ಮಧ್ಯಮ ಹೊರಮೈ ಲಕ್ಷಣದ ಗೂಡುಗಳು
- ಗೂಡಿನ ಇಳುವರಿ: 70–75 ಕೆ.ಜಿ./100 ಮೊಟ್ಟೆಗಳಿಗೆ
- ಕೋಶಾವಸ್ಥೆ ಪರಿವರ್ತನಾ ಪ್ರಮಾಣ: >90%
- ಕಚ್ಚಾ ರೇಷ್ಮೆಯ ಪ್ರಮಾಣ : 19–20%
- ನೂಲು ಬಿಚ್ಚಾಣಿಕೆ : 86–90%
- ರೇಷ್ಮೆ ನೂಲಿನ ಉದ್ದ: 1,100 ಮೀ.
- ರೇಷ್ಮೆ ನೂಲಿನ ಗುಣಮಟ್ಟ: 2ಎ– 3ಎ
- ರೆಂಡಿಟ್ಟಾ : 5.0–5.5
- ಉತ್ತಮ ಬೆಳೆ ಸ್ಥಿರತೆ

ಶಿಫಾರಸ್ಸು ಮಾಡಲಾಗಿರುವ ಪ್ರದೇಶಗಳು

ದೇಶದ ಎಲ್ಲಾ ನೀರಾವರಿ ಪ್ರದೇಶಗಳು ಮತ್ತು ವ್ಯತಿರಿಕ್ತ ಪರಿಸ್ಥಿತಿಗಳಿಗೂ ಸೂಕ್ತವಾಗಿದೆ

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ರೇಷ್ಮೆ ಹುಳು ಸಾಕಾಣಿಕಾ ಕ್ರಮವನ್ನು ಅಳವಡಿಸಿಕೊಳ್ಳಿ

ಜಿ 11 × ಜಿ 19

- ಶಿಫಾರಸ್ಸು ಮಾಡಿದ ವರ್ಷ: 2014

ಪ್ರಮುಖ ಅಂಶಗಳು

- ಅನಾನುಕೂಲಕರ ಪರಿಸ್ಥಿತಿಗಳಿಗಾಗಿ ಉತ್ತಮ ದ್ವಿಸಂಕರಣ ತಳಿ
- ನೀಲಿ ಮಿಶ್ರಿತ ಬಿಳಿ ಬಣ್ಣದ ಸರಳ ಮರಿಗಳು
- ಹುಳುವಿನ ಕಾಲಾವಧಿ 23–24 ದಿನಗಳು
- ಶುಭ್ರ ಬಿಳಿ ಬಣ್ಣದ ಮಧ್ಯಮ ಹೊರಮೈ ಲಕ್ಷಣದ ಗೂಡುಗಳು
- ಗೂಡಿನ ಇಳುವರಿ: 65–70 ಕೆ.ಜಿ./100 ಮೊಟ್ಟೆಗಳಿಗೆ
- ಕೋಶಾವಸ್ಥೆ ಪರಿವರ್ತನಾ ಪ್ರಮಾಣ: >90%
- ಕಚ್ಚಾ ರೇಷ್ಮೆಯ ಪ್ರಮಾಣ : 17–18%
- ನೂಲು ಬಿಚ್ಚಾಣಿಕೆ : 86%
- ರೇಷ್ಮೆ ನೂಲಿನ ಉದ್ದ: 950 ಮೀ.
- ರೇಷ್ಮೆ ನೂಲಿನ ಗುಣಮಟ್ಟ: 2ಎ– 3ಎ
- ರೆಂಡಿಟ್ಟಾ : 5.5–6.0
- ಉತ್ತಮ ಜೀರ್ಣ ಶಕ್ತಿ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಬದುಕುಳಿಯುವ ಸಾಮರ್ಥ್ಯ
- ಎಲ್ಲಾ ಪ್ರದೇಶ ಮತ್ತು ಕಾಲಗಳಲ್ಲೂ ಸೂಕ್ತ

ಶಿಫಾರಸ್ಸು ಮಾಡಲಾಗಿರುವ ಪ್ರದೇಶಗಳು

ಎಲ್ಲಾ ಪ್ರದೇಶಗಳಿಗೆ

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ರೇಷ್ಮೆ ಹುಳು ಸಾಕಾಣಿಕಾ ಕ್ರಮವನ್ನು ಅಳವಡಿಸಿಕೊಳ್ಳಿ

ಎಸ್8 × ಸಿಎಸ್ಆರ್16

- ಶಿಫಾರಸ್ಸು ಮಾಡಿದ ವರ್ಷ: 2015

ಪ್ರಮುಖ ಅಂಶಗಳು

- ಉತ್ಪನ್ನಕಾರಿ ದ್ವಿಸಂತತಿ ಸಂಕರಣ ತಳಿ
- ಮಚ್ಚೆ ಇರುವ ನೀಲಿ ಮಿಶ್ರಿತ ಬಿಳಿ ಬಣ್ಣದ ಹುಳುಗಳು
- ಹುಳುವಿನ ಕಾಲಾವಧಿ 23–24 ದಿನಗಳು
- ಶುಭ್ರ ಬಿಳಿ ಬಣ್ಣದ ಮಧ್ಯಮ ಹೊರಮೈ ಲಕ್ಷಣದ ಗೂಡುಗಳು
- ಗೂಡಿನ ಇಳುವರಿ: 70–75 ಕೆ.ಜಿ./100 ಮೊಟ್ಟೆಗಳಿಗೆ
- ಕೋಶಾವಸ್ಥೆ ಪರಿವರ್ತನಾ ಪ್ರಮಾಣ: >90%
- ಕಚ್ಚಾ ರೇಷ್ಮೆಯ ಪ್ರಮಾಣ : 19–20%
- ನೂಲು ಬಿಚ್ಚಾಣಿಕೆ : 86–90%
- ರೇಷ್ಮೆ ನೂಲಿನ ಉದ್ದ: 1100 ಮೀ.
- ರೇಷ್ಮೆ ನೂಲಿನ ಗುಣಮಟ್ಟ: 2ಎ– 3ಎ
- ರೆಂಡಿಟ್ಟಾ : 5.0–5.2
- ಹೆಚ್ಚು ಉತ್ಪಾದಕ ಮತ್ತು ಎಲ್ಲಾ ಕಾಲಗಳಲ್ಲೂ ಸೂಕ್ತ

ಶಿಫಾರಸ್ಸು ಮಾಡಲಾಗಿರುವ ಪ್ರದೇಶಗಳು

ಎಲ್ಲಾ ಕೃಷಿ ಹವಾಮಾನ ಪರಿಸ್ಥಿತಿಗಳಿಗೆ

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ರೇಷ್ಮೆ ಹುಳು ಸಾಕಾಣಿಕಾ ಕ್ರಮವನ್ನು ಅಳವಡಿಸಿಕೊಳ್ಳಿ

ಪಿಎಮ್ × ಸಿಎಸ್‌ಆರ್ 2

- ಶಿಫಾರಸ್ಸು ಮಾಡಿದ ವರ್ಷ: 2000

ಪ್ರಮುಖ ಅಂಶಗಳು

- ಉತ್ಪನ್ನಕಾರಿ ಮಿಶ್ರ ತಳಿ
- ನೀಲಿ ಮಿಶ್ರಿತ ಬಿಳಿ ಬಣ್ಣದ ಹುಳುಗಳು
- ಹುಳುವಿನ ಕಾಲಾವಧಿ 24 ದಿನಗಳು
- ತಿಳಿ ಹಸಿರು ಮಿಶ್ರಿತ ಹಳದಿ ಬಣ್ಣದ ಅಂಡಾಕಾರದ ಹಾಗೂ ತಕ್ಕಮಟ್ಟಿಗೆ ಗುಂಜು ಇರುವ ಗೂಡುಗಳು
- ಗೂಡಿನ ಇಳುವರಿ: 60 ಕೆ.ಜಿ./100 ಮೊಟ್ಟೆಗಳಿಗೆ
- ಕೋಶಾವಸ್ಥೆ ಪರಿವರ್ತನಾ ಪ್ರಮಾಣ: >95.4%
- ಕಚ್ಚಾ ರೇಷ್ಮೆ ಪ್ರಮಾಣ : 13.40%
- ನೂಲು ಬಿಚ್ಚಾಣಿಕೆ : >84–85%
- ರೇಷ್ಮೆ ನೂಲಿನ ಉದ್ದ: 800–900 ಮೀ.
- ರೇಷ್ಮೆ ನೂಲಿನ ಗುಣಮಟ್ಟ: 2ಎ– 3ಎ
- ರೆಂಡಿಟ್ಟಾ : 6.0–7.0
- ಉತ್ತಮ ಬೆಳೆ ಸ್ಥಿರತೆ

ಶಿಫಾರಸ್ಸು ಮಾಡಲಾಗಿರುವ ಪ್ರದೇಶಗಳು

ದಕ್ಷಿಣ ಭಾರತದ ಎಲ್ಲಾ ರಾಜ್ಯಗಳು

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ರೇಷ್ಮೆ ಹುಳು ಸಾಕಾಣಿಕಾ ಕ್ರಮವನ್ನು ಅಳವಡಿಸಿಕೊಳ್ಳಿ

ಕಾವೇರಿ ಗೋಲ್ಡ್ (ಎಮ್‌ವಿ1 × ಎಸ್‌8)

- ಶಿಫಾರಸ್ಸು ಮಾಡಿದ ವರ್ಷ: 2015

ಪ್ರಮುಖ ಅಂಶಗಳು

- ಸುಧಾರಿತ ಹಾಗೂ ಉತ್ಪಾದಕತೆ ಹೊಂದಿರುವ, ರೋಗ ನಿರೋಧಕ ಶಕ್ತಿ ಇರುವ ಮಿಶ್ರ ತಳಿ
- ಮಚ್ಚೆ ರಹಿತ, ತಿಳಿ ನೀಲಿ ಮಿಶ್ರಿತ ಬಿಳಿ ಬಣ್ಣದ ಹುಳುಗಳು
- ಹುಳುವಿನ ಕಾಲಾವಧಿ 22–23 ದಿನಗಳು
- ಗೂಡಿನ ಇಳುವರಿ: 75–85 ಕೆ.ಜಿ./100ಮೊಟ್ಟೆಗಳಿಗೆ
- ಅಂಡಾಕಾರ, ಒತ್ತಾದ ಕವಚ ಮತ್ತು ಉತ್ತಮ ಹೊರ ಮೈಯುಳ್ಳ, ತಿಳಿ ಹಸಿರು ಮಿಶ್ರಿತ ಹಳದಿ ಗೂಡು
- ರೇಷ್ಮೆ ಎಳೆಯನ್ನು ಕೊನೆಯ ಪೆಲೇಡ್ ಪದರದವರೆಗೆ ಸಂಪೂರ್ಣವಾಗಿ ತೆಗೆಯ ಬಹುದಾದ್ದರಿಂದ ಹೆಚ್ಚಿನ ಕಚ್ಚಾ ರೇಷ್ಮೆಯ ಉತ್ಪಾದನೆ
- ಕೋಶಾವಸ್ಥೆ ಪರಿವರ್ತನಾ ಪ್ರಮಾಣ: >90%
- ಕಚ್ಚಾ ರೇಷ್ಮೆಯ ಪ್ರಮಾಣ: 14–15%
- ನೂಲು ಬಿಚ್ಚಾಣಿಕೆ: 85–90%
- ರೇಷ್ಮೆ ನೂಲಿನ ಉದ್ದ: 910–960 ಮೀ.
- ರೇಷ್ಮೆ ನೂಲಿನ ಗುಣಮಟ್ಟ: 2ಎ–3ಎ
- ರೆಂಡಿಟ್ಟಾ : 6.0–6.5
- ಉತ್ತಮ ಟೆನಾಸಿಟಿ (>3.7 ಜಿ/ಡಿ) ಎಲಾಂಗೇಶನ್ (>22%) ಮತ್ತು ಕೊಹೆಶನ್ (>60 ಸ್ಟ್ರೋಕ್ಸ್) ಹೊಂದಿರುವುದರಿಂದ ಗೂಡುಗಳನ್ನು ಮಲ್ಟಿ ಎಂಡ್ ಮತ್ತು ಸ್ವಯಂ ಚಾಲಿತ ನೂಲು ಬಿಚ್ಚಾಣಿಕೆ ಯಂತ್ರಗಳಲ್ಲಿ ಉಪಯೋಗಿಸಬಹುದು

ಶಿಫಾರಸ್ಸು ಮಾಡಲಾಗಿರುವ ಪ್ರದೇಶಗಳು

ದಕ್ಷಿಣ ಭಾರತದ ಎಲ್ಲಾ ರಾಜ್ಯಗಳಿಗೆ, ವರ್ಷ ಪೂರ್ತಿ

ಉತ್ತಮ ಫಲಿತಾಂಶಕ್ಕಾಗಿ ಸಲಹೆಗಳು

ಶಿಫಾರಸ್ಸು ಮಾಡಲಾಗಿರುವ ರೇಷ್ಮೆ ಹುಳು ಸಾಕಾಣಿಕಾ ಕ್ರಮವನ್ನು ಅಳವಡಿಸಿಕೊಳ್ಳಿ

ರೇಷ್ಮೆ ಹುಳು ಸಾಕಾಣಿಕೆ: ಉತ್ಪಾದನೆ ಮತ್ತು ಸಂರಕ್ಷಣೆ

ಚಾಕಿ ಹುಳು ಸಾಕಾಣಿಕಾ ತಾಂತ್ರಿಕತೆ

- ಶಿಫಾರಸ್ಸು ಮಾಡಿದ ವರ್ಷ: 1997

ಪ್ರಮುಖ ಅಂಶಗಳು

- ಚಾಕಿ ಸಾಕಾಣಿಕೆಯು (ಎರಡನೇ ಜ್ವರದ ತನಕ ರೇಷ್ಮೆ ಹುಳು ಸಾಕಾಣಿಕೆ) ರೇಷ್ಮೆ ಬೆಳೆಯ ಯಶಸ್ಸನ್ನು ನಿರ್ಧರಿಸುವ ಒಂದು ನಿರ್ಣಾಯಕ ಹಂತವೆಂದು ಪರಿಗಣಿಸಲಾಗಿದೆ
- ಎಳೆಯ ರೇಷ್ಮೆ ಹುಳುಗಳಲ್ಲಿ ಗರಿಷ್ಠ ಬೆಳವಣಿಗೆ ಸಾಧಿಸಲು ಅಧಿಕ ತಾಪಮಾನ (27–28^{0} ಸೆಂ.ಗ್ರೇಡ್) ಮತ್ತು ಅಧಿಕ ಆರ್ದ್ರತೆ (80–90%) ಇರುವಂತೆ ನೋಡಿಕೊಳ್ಳಬೇಕು
- ಚಾಕಿ ಹುಳುಗಳು ಬಹಳ ಸುಲಭವಾಗಿ ರೋಗಗಳಿಗೆ ತುತ್ತಾಗುವುದರಿಂದ ಸೋಂಕು ನಿವಾರಣೆ ಹಾಗೂ ನೈರ್ಮಲ್ಯವನ್ನು ಕಾಪಾಡಿ ರೋಗಾಣುರಹಿತ ಪರಿಸ್ಥಿತಿಯನ್ನು ನಿರ್ವಹಿಸಬೇಕು

ಚಾಕಿ ಸಾಕಾಣಿಕೆ

- ಕಪ್ಪು ಚುಕ್ಕೆ ಹಂತದ ರೇಷ್ಮೆ ಮೊಟ್ಟೆಗಳನ್ನು 2–3 ಗಂಟೆಗಳ ತನಕ ಬೆಳಕಿಗೆ ಒಡ್ಡಿರಿ
- ಮೊಟ್ಟೆಯೊಡೆದು ಹೊರಬಂದ ಮರಿಹುಳುಗಳ ಮೇಲೆ ನೈಲಾನ್ ಬ್ರಷಿಂಗ್ ನೆಟ್ (2–4 ಮೆಷ್ ಗಾತ್ರ) ಹರಡಿ ಅದರ ಮೇಲೆ ಆಗಷ್ಟೇ ಕತ್ತರಿಸಿದ ಮೃದು ಚಾಕಿ ಎಲೆಗಳನ್ನು ಉದುರಿಸಿ ಪ್ಯಾರಾಫ್ಲಿನ್ ಕಾಗದದಿಂದ 3–4 ಗಂಟೆಗಳವರೆಗೆ ಮುಚ್ಚಿ ಇಡಿ. ನಂತರ ಹುಳು ಹಾಸಿಗೆಯನ್ನು ತಟ್ಟೆಯ ಮೇಲೆ ವರ್ಗಾಯಿಸಿ ಮತ್ತಷ್ಟು ಕತ್ತರಿಸಿದ ಸೊಪ್ಪನ್ನು ನೀಡಿ
- ಸೂಕ್ತ ವಿಧಾನಗಳನ್ನು ಅಳವಡಿಸಿಕೊಂಡು ಚಾಕಿ ಕೋಣೆಯಲ್ಲಿ ಸೂಕ್ತ ತಾಪಮಾನ ಮತ್ತು ಆರ್ದ್ರತೆಯನ್ನು ನಿರ್ವಹಿಸಿ
- ದಿನಕ್ಕೆ ಎರಡು ಬಾರಿ ಪೌಷ್ಟಿಕ ಎಲೆ ಒದಗಿಸಿ ಮತ್ತು ಚಾಕಿ ಹುಳುಗಳು ಬೆಳೆದಂತೆ ತಟ್ಟೆಗಳ ಸಂಖ್ಯೆಯನ್ನು ಹೆಚ್ಚಿಸಿ (ಪ್ರತಿ 100 ಮೊಟ್ಟೆಗಳಿಗೆ, ಎರಡನೇ ಹಂತದ ಕೊನೆಯಲ್ಲಿ 65 ಚದರ ಅಡಿ)

ಚಾಕಿ ಹುಳು ಸಾಕಾಣಿಕಾ ತಾಂತ್ರಿಕತೆ...

- ಪ್ರತೀ ಬಾರಿ ಸೊಪ್ಪು ಕೊಡುವ ಒಂದು ಗಂಟೆ ಮೊದಲು ಪ್ಯಾರಾಫ್ಲಿನ್ ಕಾಗದವನ್ನು ತೆಗೆದು ಗಾಳಿಯಾಡಲು ಅವಕಾಶ ಮಾಡಿಕೊಡಿ
- ಹುಳುಗಳು ಜ್ವರಕ್ಕೆ ಕುಳಿತಾಗ ಸುಟ್ಟ ಸುಣ್ಣವನ್ನು ಉದುರಿಸಿ ಹಾಗೂ ಜ್ವರದಿಂದ ಹೊರಬಂದಾಗ ಹಾಸಿಗೆ ಸೋಂಕು ನಿವಾರಕವನ್ನು ಉದುರಿಸಿ
- ಹುಳುಗಳು ಎರಡನೇ ಜ್ವರದಲ್ಲಿರುವಾಗ ಚಾಕಿ ದೃಢೀಕರಣವನ್ನು ಮಾಡಿ, ಸುಣ್ಣ ಉದುರಿಸಿ, ತಂಪಾದ ಹೊತ್ತಿನಲ್ಲಿ ರೈತರಿಗೆ ಸರಬರಾಜು ಮಾಡಿ

ಆರೋಗ್ಯಕರ ಹುಳುಗಳ ಅಭಿವೃದ್ಧಿಗೆ ಹಾಗೂ ಯಶಸ್ವಿ ರೇಷ್ಮೆ ಬೆಳೆ ಪಡೆಯಲು ವೈಜ್ಞಾನಿಕ ಚಾಕಿ ಸಾಕಣೆಯು ಅತ್ಯಗತ್ಯ

ಇದನ್ನು ಮಾಡಿ

- ಕಪ್ಪು ಚುಕ್ಕೆ ಹಂತದಲ್ಲಿ ಕಪ್ಪು ಪೆಟ್ಟಿಗೆ ವ್ಯವಸ್ಥೆ ಮಾಡಿ
- ಮೃದು, ರಸವತ್ತಾದ ಮತ್ತು ಪೌಷ್ಟಿಕ ಹಿಪ್ಪುನೇರಳೆ ಸೊಪ್ಪನ್ನು ಪಡೆಯಲು ವಿಶೇಷವಾಗಿ ಚಾಕಿ ತೋಟವನ್ನು ಬೆಳೆಸಿ
- ಚಾಕಿ ಸಾಕಾಣಿಕಾ ಕೇಂದ್ರವನ್ನು ಅಗತ್ಯ ಸಾಧನಗಳಾದ ಹುಳು ಸಾಕುವ ತಟ್ಟೆಗಳು, ಹೀಟರ್‌ಗಳು, ಆರ್ದ್ರಕಗಳು, ಸಿಂಪಡಣಾ ಯಂತ್ರಗಳು, ಹುಳು ವಿತರಣೆಗೆ ಅಗತ್ಯ ಸಾರಿಗೆ ವಾಹನಗಳು ಇತ್ಯಾದಿಗಳಿಂದ ಸಜ್ಜುಗೊಳಿಸಿ
- ಕಟ್ಟುನಿಟ್ಟಾದ ನೈರ್ಮಲ್ಯವನ್ನು ನಿರ್ವಹಿಸಿ
- 2ನೇ ಹಂತದ ಕೊನೆಯಲ್ಲಿ 100 ಮೊಟ್ಟೆಗಳಿಗೆ 65 ಚ.ಅಡಿ ಸ್ಥಳಾವಕಾಶ ಕಲ್ಪಿಸಿ

ಇದನ್ನು ಮಾಡಬೇಡಿ

- ಬಿಸಿಲಿನ ಸಮಯದಲ್ಲಿ ರೇಷ್ಮೆ ಮೊಟ್ಟೆಗಳನ್ನು ಸಾಗಿಸಬೇಡಿ
- ಚಾಕಿ ಮರಿಗಳು ಜ್ವರದಲ್ಲಿರುವಾಗ ಪ್ಯಾರಾಫ್ಲಿನ್ ಕಾಗದದಿಂದ ಮುಚ್ಚಬೇಡಿ

ಯಶಸ್ವೀ ರೇಷ್ಮೆ ಬೆಳೆಗೆ ಚಾಕಿ ದೃಢೀಕರಣ

- ಶಿಫಾರಸ್ಸು ಮಾಡಿದ ವರ್ಷ: 2002

ಪ್ರಮುಖ ಅಂಶಗಳು

- ಚಾಕಿ ವಿತರಣೆಗೂ ಮುನ್ನ ರೇಷ್ಮೆ ಹುಳುಗಳ ಆರೋಗ್ಯ ಮತ್ತು ಬೆಳವಣಿಗೆಯ ಸ್ಥಿತಿಯನ್ನು ದೃಢೀಕರಿಸುವುದು
- ರೈತರ ಮಟ್ಟದಲ್ಲಿ ಹೆಚ್ಚಿನ ಉತ್ಪಾದನೆ ಮತ್ತು ಉತ್ಪಾದಕತೆ ಸಾಧಿಸಲು ಚಾಕಿ ಸಾಕಾಣಿಕಾ ಕೇಂದ್ರ (ಸಿಆರ್‌ಸಿ) ಪರಿಕಲ್ಪನೆಯನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವುದು

ಘಟಕಗಳು

- ಚಾಕಿ ಹಂತದಲ್ಲಿ ನಷ್ಟವಾದ ಮರಿಗಳ ಸಂಖ್ಯೆಯ ಬಗ್ಗೆ ಪ್ರಮಾಣೀಕರಿಸುವುದು
- ಚಾಕಿ ಹುಳುಗಳಲ್ಲಿ ಏಕರೂಪತೆಯ ಬಗ್ಗೆ ಪ್ರಮಾಣೀಕರಿಸುವುದು
- ಚಾಕಿ ಹುಳುಗಳ ಬೆಳವಣಿಗೆಯ ಬಗ್ಗೆ ದೃಢೀಕರಿಸುವುದು
- ಚಾಕಿ ಹುಳುಗಳ ರೋಗಮುಕ್ತತೆಯ ಬಗ್ಗೆ ಪ್ರಮಾಣೀಕರಿಸುವುದು

ದೃಢೀಕರಿಸುವ ಅಂಶಗಳು

- ನಷ್ಟವಾದ ಹುಳುಗಳ ಸಂಖ್ಯೆ ಶೇ. 5 ಕ್ಕಿಂತ ಕಡಿಮೆ ಇರಬೇಕು
- ಕುಂಠಿತ ಬೆಳವಣಿಗೆಯ ಹುಳುಗಳ ಸಂಖ್ಯೆ ಶೇ. 15 ಕ್ಕಿಂತ ಕಡಿಮೆ ಇರಬೇಕು
- ಎರಡನೇ ಜ್ವರದಲ್ಲಿ 100 ಹುಳುಗಳ ತೂಕ ಬೈವೋಲ್ಟೈನ್ ನಲ್ಲಿ 3.4–3.8 ಗ್ರಾಂ ಹಾಗೂ ಮಿಶ್ರ ತಳಿಯಲ್ಲಿ 2.2–2.6 ಗ್ರಾಂ ಇರಬೇಕು
- ಗಂಟು ರೋಗ ಕಂಡುಬಂದಲ್ಲಿ ಹುಳುಗಳು ವಿತರಣೆಗೆ ಸೂಕ್ತವಲ್ಲ ಹಾಗೂ ಅವನ್ನು ತಿರಸ್ಕರಿಸಿ ಸುಡಬೇಕು. ತಕ್ಷಣವೇ ಚಾಕಿ ಸಾಕಾಣಿಕಾ ಕೇಂದ್ರವನ್ನು ಸೋಂಕು ನಿವಾರಣೆ ಮಾಡಬೇಕು

ಉದ್ದೇಶ

ಚಾಕಿ ಹುಳು ಬೆಳವಣಿಗೆ ಮತ್ತು ಆರೋಗ್ಯ ಸ್ಥಿತಿ ಪ್ರಮಾಣೀಕರಿಸಿ ಉತ್ತಮ ಗುಣಮಟ್ಟದ ಚಾಕಿ ಹುಳುಗಳನ್ನು ರೈತರಿಗೆ ವಿತರಿಸಲು ಅನುಕೂಲವಾಗುತ್ತದೆ

ಇದನ್ನು ಮಾಡಿ

- ಹುಳುಗಳು ಎರಡನೇ ಜ್ವರದಲ್ಲಿರುವಾಗ ಅಥವಾ ಎರಡನೇ ಜ್ವರದಿಂದ ಹೊರಬಂದ ಕೂಡಲೇ ದೃಢೀಕರಣ ಮಾಡಿ
- ಹುಳುಗಳನ್ನು ಪರೀಕ್ಷಿಸಲು ಉತ್ತಮ ಸೂಕ್ಷ್ಮದರ್ಶಕ ಯಂತ್ರವನ್ನು (600x) ಬಳಸಿ

ಇದನ್ನು ಮಾಡಬೇಡಿ

- ಚಾಕಿ ಹುಳುಗಳು ಮೊದಲನೇ ಹಂತದಲ್ಲಿರುವಾಗ ದೃಢೀಕರಿಸಬೇಡಿ
- ಗಂಟು ರೋಗ ಕಂಡು ಬಂದಲ್ಲಿ ಹುಳುಗಳನ್ನು ರೈತರಿಗೆ ವಿತರಿಸಬೇಡಿ

ನ್ಯೂಟ್ರಿಡ್–ಚಾಕಿ ಹುಳು ಸಾಕಾಣಿಕೆಗೆ ಅರೆ ಸಂಶ್ಲೇಷಿತ ಆಹಾರ

- ಶಿಫಾರಸ್ಸು ಮಾಡಿದ ವರ್ಷ: 2001

ಪ್ರಮುಖ ಅಂಶಗಳು

- ನ್ಯೂಟ್ರಿಡ್ ಆಹಾರವನ್ನು ಉಪಯೋಗಿಸಿ, ಚಾಕಿ ಸಾಕಾಣಿಕೆದಾರರು ತಾವು ಇಚ್ಛಿಸುವ ಯಾವುದೇ ಮಿಶ್ರ ತಳಿಯನ್ನು ಎರಡನೇ ಜ್ವರದ ತನಕ ಬೆಳೆಸಬಹುದು.
- ಹುಳುಗಳ ಬೆಳವಣಿಗೆಯ ಆರಂಭಿಕ ಹಂತಗಳಲ್ಲಿ ಸೋಂಕುಗಳನ್ನು ಕಡಿಮೆ ಮಾಡುವ ಪೌಷ್ಟಿಕಾಂಶ ಮತ್ತು ಆರೋಗ್ಯಕರ ಅಂಶಗಳನ್ನು ಹೊಂದಿದೆ.

ಉಪಯೋಗಗಳು

- ಪ್ರತಿ ಹಂತದಲ್ಲಿ ಎರಡು ಬಾರಿ ಆಹಾರ ನೀಡಿದರೆ ಸಾಕು
- ಹುಳು ಸಾಕಾಣಿಕಾ ಹಾಸಿಗೆಗಳನ್ನು ಶುಚಿಗೊಳಿಸುವ ಅಣತ್ಯವಿಲ್ಲ
- ಸೋಂಕುನಿವಾರಕ ಅಥವಾ ಸುಣ್ಣವನ್ನು ಬಳಸುವ ಅಗತ್ಯವಿಲ್ಲ
- ಚಾಕಿ ಸಾಕಾಣಿಕೆಯಲ್ಲಿ ಒಟ್ಟು 70 ಮಾನವ ಶಕ್ತಿಯ ವೆಚ್ಚವನ್ನು ಉಳಿಸುತ್ತದೆ

ಮೊದಲನೇ ಮತ್ತು ಎರಡನೇ ಹಂತದ ಚಾಕಿ ಹುಳು ಸಾಕಾಣಿಕೆಗೆ ಶಿಫಾರಸ್ಸು ಮಾಡಲಾಗಿದೆ

ಇದನ್ನು ಮಾಡಿ

- ಚಾಕಿ ಸಾಕಾಣಿಕೆಗೆ ಬೇಕಾದ ಉಷ್ಣಾಂಶ ಮತ್ತು ತೇವಾಂಶವನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಿ
- ಹುಳು ಹಾಸಿಗೆಯಲ್ಲಿ ತೇವಾಂಶವನ್ನು ಸಂರಕ್ಷಿಸಲು ತಟ್ಟೆಗಳನ್ನು ಒಂದರ ಮೇಲೆ ಒಂದರಂತೆ ಇಡಿ
- ಹುಳು ಹಾಸಿಗೆಯಲ್ಲಿ ಒಣ ಅವಸ್ಥೆಯನ್ನು ಕಾಪಾಡಿಕೊಳ್ಳಲು, ಜ್ವರದಲ್ಲಿರುವಾಗ ತಟ್ಟೆಗಳನ್ನು ಸ್ಪ್ಯಾಂಡ್‌ಗೆ ವರ್ಗಾಯಿಸಿ

ಇದನ್ನು ಮಾಡಬೇಡಿ

- ಹುಳುಗಳು ಜ್ವರದಲ್ಲಿರುವಾಗ ಸಾಕಾಣಿಕಾ ಹಾಸಿಗೆಯನ್ನು ತೇವವಾಗಿ ಇಟ್ಟುಕೊಳ್ಳಬೇಡಿ
- ನ್ಯೂಟ್ರಿಡ್‌ನ್ನು ಹುಳುಗಳ ಮೇಲೆ ಹಾಕಬೇಡಿ, ಬದಲಾಗಿ ನ್ಯೂಟ್ರಿಡ್ ಮೇಲೆ ಹುಳುಗಳನ್ನು ಹಾಕಿ
- ಹುಳುಗಳು ಆಹಾರವನ್ನು ತಿನ್ನುವ ಹಂತದಲ್ಲಿರುವಾಗ ತಟ್ಟೆಗಳನ್ನು ತೆರೆದು ಇಡಬೇಡಿ

ಪ್ರೌಢ ಹಂತದ ಹುಳು ಸಾಕಾಣಿಕಾ ತಾಂತ್ರಿಕತೆ

- ಶಿಫಾರಸ್ಸು ಮಾಡಿದ ವರ್ಷ: 1997

ಪ್ರಮುಖ ಅಂಶಗಳು

- ರೇಷ್ಮೆ ಹುಳುಗಳನ್ನು 3 ನೇ ಹಂತದಿಂದ ಗೂಡು ಕಟ್ಟುವ ತನಕ ಬೆಳೆಸುವುದನ್ನು ಪ್ರೌಢ ಹಂತದ ಹುಳು ಸಾಕಣೆ ಎಂದು ಕರೆಯುತ್ತಾರೆ
- ಪ್ರೌಢ ಹಂತದ ಹುಳುಗಳ ಸಾಕಾಣಿಕೆಯನ್ನು ಸೋಂಕು ನಿವಾರಣೆ ಮಾಡಲು ಅನುಕೂಲವಿರುವ ಹಾಗೂ ಉತ್ತಮ ಗಾಳಿಯ ಸಂಚಾರವಿರುವ ಪ್ರತ್ಯೇಕ ಮನೆಗಳಲ್ಲಿ ಸಾಕಬೇಕು
- ಊಜಿ ನೊಣದ ಪ್ರವೇಶವನ್ನು ತಡೆಯಲು ಹುಳು ಸಾಕಣೆ ಮನೆಯ ದ್ವಾರಕ್ಕೆ ಎದುರಾಗಿ ಒಂದು ಉಪಕೋಣೆ ಇರಬೇಕು.
- ಗೂಡು ಕಟ್ಟಿಸಲು ಹಾಗೂ ಕೊಯಿಲು ಮಾಡಲು ಹುಳು ಸಾಕಣೆ ಮನೆಯ ಪೂರ್ವ ಮತ್ತು ಪಶ್ಚಿಮ ಗೋಡೆಗಳ ಉದ್ದಕ್ಕೂ ಜಗುಲಿ ಇರಬೇಕು

ಪ್ರೌಢ ಹಂತದ ಹುಳು ಸಾಕಾಣಿಕೆ

- ಯಾವಾಗಲೂ ಚಾಕಿ ಕೇಂದ್ರಗಳಲ್ಲಿ 2ನೇ ಜ್ವರದವರೆಗೆ ಸಾಕಣೆ ಮಾಡಿದ ಹುಳುಗಳನ್ನೇ ಉಪಯೋಗಿಸಿ
- 2 ನೇ ಜ್ವರದ ನಂತರ ಸೊಪ್ಪು ನೀಡುವ 30 ನಿಮಿಷಗಳ ಮೊದಲು ಹುಳುಗಳನ್ನು ಹುಳು ಹಾಸಿಗೆಯ ಮೇಲೆ ಹರಡಿ ಸೋಂಕು ನಿವಾರಕವನ್ನು ಉದುರಿಸಿ
- ಪ್ರತಿ ದಿನ ಎರಡು ಬಾರಿ ತಾಜಾ ಸೊಪ್ಪನ್ನು (ಒರಟಾದ ಎಲೆಗಳು) ನೀಡಿ.
- ಸೂಕ್ತ ವಿಧಾನಗಳನ್ನು ಅಳವಡಿಸಿಕೊಂಡು ಹುಳು ಸಾಕಣೆ ಮನೆಯಲ್ಲಿ ತಾಪಮಾನ (24–26 ಸೆಂಟಿ ಗ್ರೇಡ್) ಮತ್ತು ಆರ್ದ್ರತೆ (75–80%) ನಿರ್ವಹಿಸಿ
- ಹುಳುಗಳು ಜ್ವರಕ್ಕೆ ಕುಳಿತಾಗ ಸುಟ್ಟ ಸುಣ್ಣವನ್ನು ಉದುರಿಸಿ ಹಾಗೂ ಜ್ವರದಿಂದ ಹೊರಬಂದಾಗ ಹಾಸಿಗೆ ಸೋಂಕು ನಿವಾರಕವನ್ನು ಉದುರಿಸಿ
- ಹುಳುಗಳ ಸೂಕ್ತ ಬೆಳವಣಿಗೆಗೆ ಸಾಕಷ್ಟು ಸ್ಥಳಾವಕಾಶ ಒದಗಿಸಿ. ರೆಂಬೆ ಸಾಕಾಣಿಕೆ ಪದ್ಧತಿಯಲ್ಲಿ ಒಂದು ಮೊಟ್ಟೆಗೆ 3 ಚ.ಅಡಿ ಹಾಗೂ ತಟ್ಟೆ ಸಾಕಾಣಿಕೆ ಪದ್ಧತಿಯಲ್ಲಿ ಒಂದು ಮೊಟ್ಟೆಗೆ 2 ಚ.ಅಡಿಯಂತೆ ಸ್ಥಳಾವಕಾಶ ಕಲ್ಪಿಸಿ

ಪ್ರೌಢ ಹಂತದ ಹುಳು ಸಾಕಾಣಿಕಾ ತಾಂತ್ರಿಕತೆ....

- 100 ಮೊಟ್ಟೆ ಸಾಕಾಣಿಕೆಗೆ 700–800 ಚ.ಅಡಿ ಸ್ಥಳಾವಕಾಶ ಕಲ್ಪಿಸಿ
- ನೀರಾವರಿ ಹಿಪ್ಪುನೇರಳೆ ತೋಟದಿಂದ ಗುಣಮಟ್ಟದ ಸೊಪ್ಪು ಇರುವ ರೆಂಬೆಗಳನ್ನು ಸಾಕಷ್ಟು ನೀಡಿ

ರೆಂಬೆ ಪದ್ಧತಿಯಲ್ಲಿ ಆಹಾರ ನೀಡುವಿಕೆ ಹಾಗು ಶೆಲ್ಫ್(ಅಂತಸ್ತು)ಗಳಲ್ಲಿ ಸಾಕಾಣಿಕೆಯಿಂದ ರೇಷ್ಮೆ ಗೂಡಿನ ಇಳುವರಿ ಮತ್ತು ಗುಣಮಟ್ಟ ಸುಧಾರಿಸುವುದಲ್ಲದೆ ಉತ್ಪಾದನೆಯ ವೆಚ್ಚ ಮತ್ತು ಶ್ರಮ ಕಡಿಮೆಯಾಗುತ್ತದೆ

ಇದನ್ನು ಮಾಡಿ

- ಹರಿತವಾದ ಗರಗಸ ಅಥವಾ ಬುಷ್ ಕಟರ್ ಉಪಯೋಗಿಸಿ ದಿನದ ತಂಪಾದ ಹೊತ್ತಿನಲ್ಲಿ ಸೊಪ್ಪನ್ನು ಕೊಯಿಲು ಮಾಡಿ
- ರೆಂಬೆಗಳನ್ನು ಹೊರೆ ಮಾಡಿ, ಒದ್ದೆ ಮಾಡಿದ ಗೋಣಿ ತಾಟಿನಲ್ಲಿ ಸುತ್ತಿ ನೆಟ್ಟಗೆ ನಿಲ್ಲಿಸಿ
- ರೆಂಬೆ ಪದ್ಧತಿಯ ಹುಳು ಸಾಕಾಣಿಕೆಯು ಕಾರ್ಮಿಕ ವೆಚ್ಚ ಹಾಗೂ ಸಮಯ ಉಳಿಸುವುದಲ್ಲದೆ ಸೋಂಕು ತಗಲುವ ಸಾಧ್ಯತೆ ತುಂಬಾ ಕಡಿಮೆ ಇರುತ್ತದೆ
- ಚದರ ಅಡಿಗೆ 50–70 ಹುಳುಗಳಂತೆ ಅವಕಾಶ ಕಲ್ಪಿಸಿ ಅಸಮಾನ/ರೋಗ ತಗುಲಿರುವ ಹುಳುಗಳನ್ನು ಸಂಗ್ರಹಿಸಿ ನಾಶ ಮಾಡಿ
- ರೋಗಗಳನ್ನು ತಡೆಗಟ್ಟಲು ಹಾಗು ನೈರ್ಮಲ್ಯತೆ ಕಾಪಾಡಲು ಸರಿಯಾದ ಹಾಸಿಗೆ ಸೋಂಕು ನಿವಾರಕಗಳನ್ನು ಉಪಯೋಗಿಸಿ
- ಶೇ.40ಕ್ಕಿಂತ ಹೆಚ್ಚು ಹುಳುಗಳು ಬಲಿತ ನಂತರ ಸೂಕ್ತವಾದ ಚಂದ್ರಿಕೆಗಳನ್ನು ಉಪಯೋಗಿಸಿ ಗೂಡು ಕಟ್ಟಿಸಿ

ಇದನ್ನು ಮಾಡಬೇಡಿ

- ಹುಳುಗಳು ಸೊಪ್ಪು ತಿನ್ನುತ್ತಿರುವಾಗ ಸೋಂಕು ನಿವಾರಕಗಳನ್ನು ಉದುರಿಸಬೇಡಿ
- ಸೋಂಕು ನಿವಾರಕಗಳನ್ನು ಉದುರಿಸಿದ ನಂತರ ಸೊಪ್ಪು ನೀಡುವುದನ್ನು ತಡ ಮಾಡಬೇಡಿ

ಗೂಡು ಕಟ್ಟಿಸುವ ಮತ್ತು ಕೊಯಿಲು ಮಾಡುವ ತಾಂತ್ರಿಕತೆ

- ಶಿಫಾರಸ್ಸು ಮಾಡಿದ ವರ್ಷ: 1997

ಪ್ರಮುಖ ಅಂಶಗಳು

- ಉತ್ತಮ ಗುಣಮಟ್ಟದ ಗೂಡುಗಳನ್ನು ಪಡೆಯಲು ಗೂಡು ಕಟ್ಟಿಸುವ ಹಜಾರದಲ್ಲಿ 20° ಸೆಂಟಿ ಗ್ರೇಡ್ ತಾಪಮಾನ, 60–65% ಆರ್ದ್ರತೆ, ಉತ್ತಮ ಗಾಳಿ ಸಂಚಾರ ಮತ್ತು ಒಂದೇ ಸಮನಾದ ಬೆಳಕು ಅವಶ್ಯಕ
- ಪ್ರೌಢ ಹುಳುಗಳನ್ನು ಮಾತ್ರ ಗೂಡು ಕಟ್ಟಿಸಲು ಬಳಸಿ. ಕಾಯಿ ಗೂಡು ಮತ್ತು ಅತಿಯಾಗಿ ಬಲಿತ ಹುಳುಗಳಿಂದ ದೋಷಯುಕ್ತ ಮತ್ತು ದೋಷಪೂರಿತ ಗೂಡುಗಳು ಉಂಟಾಗುತ್ತವೆ
- ಪ್ರಸ್ತುತ ಬಿದಿರಿನ ಚಂದ್ರಿಕೆಗಳು, ಮಡಚಿಡಬಹುದಾದ ಪ್ಲಾಸ್ಟಿಕ್ ಚಂದ್ರಿಕೆಗಳು ಹಾಗೂ ತಿರುಗುವ (ರೋಟರಿ) ಚಂದ್ರಿಕೆಗಳು ಉಪಯೋಗದಲ್ಲಿವೆ
- ರೋಟರಿ ಚಂದ್ರಿಕೆಗಳು ಏಕರೂಪದ ಗಾತ್ರ ಮತ್ತು ಹೆಚ್ಚು ನೂಲು ಒದಗಿಸುವ ಗೂಡುಗಳ ಉತ್ಪಾದನೆಗೆ ಸೂಕ್ತ
- ಬಿದಿರಿನ ಚಂದ್ರಿಕೆಗಳಲ್ಲಿ ಗೂಡು ಕಟ್ಟಿಸಿದರೆ ಹೆಚ್ಚಿನ ದೋಷಯುಕ್ತ ಹಾಗೂ ಗಾತ್ರ ಮತ್ತು ಆಕಾರದಲ್ಲಿ ಹೆಚ್ಚು ವ್ಯತ್ಯಾಸಗಳನ್ನು ಹೊಂದಿರುವ ಗೂಡುಗಳು ದೊರಕುತ್ತವೆ
- ಮಡಚಿಡಬಹುದಾದ ಪ್ಲಾಸ್ಟಿಕ್ ಚಂದ್ರಿಕೆಗಳಲ್ಲಿ ರೇಷ್ಮೆ ಹುಳುಗಳು ತಾವಾಗಿಯೇ ಗೂಡು ಕಟ್ಟಲು ಹತ್ತಿಕೊಳ್ಳುವುದರಿಂದ ಖರ್ಚು ಉಳಿಯುತ್ತದೆ
- ಗೂಡುಗಳ ಗುಣಮಟ್ಟದಲ್ಲಿ ರೋಟರಿ ಚಂದ್ರಿಕೆಗಳಲ್ಲಿ ಬೆಳೆದ ಗೂಡುಗಳಿಗಿಂತ ಮಡಚಿಡಬಹುದಾದ ಪ್ಲಾಸ್ಟಿಕ್ ಚಂದ್ರಿಕೆಗಳಲ್ಲಿ ಬೆಳೆಸಿದ ಗೂಡುಗಳು ಕೀಳುಮಟ್ಟದ್ದಾಗಿರುತ್ತವೆ
- ಕೋಶ ಪರಿವರ್ತನೆ ಆದ ನಂತರ (ಹಣ್ಣಾದ 6ನೇ ದಿನ) ಗೂಡನ್ನು ಕೈಯಿಂದ ಅಥವಾ ಗೂಡು ಬಿಡಿಸುವ ಯಂತ್ರದಿಂದ ಬಿಡಿಸಬೇಕು

ಗೂಡು ಕಟ್ಟಿಸುವ ಮತ್ತು ಕೊಯಿಲು ಮಾಡುವ ತಾಂತ್ರಿಕತೆ...

ಸೂಕ್ತ ರೀತಿಯಲ್ಲಿ ಗೂಡು ಕಟ್ಟಿಸುವಿಕೆಯಿಂದ ಹಾಗೂ ಕೊಯಿಲಿನಿಂದ ಅಧಿಕ ಲಾಭ ದೊರಕುತ್ತದೆ

ಇದನ್ನು ಮಾಡಿ

- ಗುಣಮಟ್ಟದ ಗೂಡನ್ನು ಉತ್ಪಾದಿಸಲು ಗೂಡು ಕಟ್ಟಿಸುವಾಗ 25 ಸೆಂಟಿ ಗ್ರೇಡ್ ಹಾಗು 65% ಆರ್ದ್ರತೆ ಯನ್ನು ನಿರ್ವಹಿಸಬೇಕು
- ಗೂಡು ಕಟ್ಟಿಸುವ ಹಜಾರದಲ್ಲಿ ಉತ್ತಮ ಗಾಳಿ ಸಂಚಾರ ಮತ್ತು ಏಕ ರೂಪದ ಬೆಳಕು ಒದಗಿಸಬೇಕು
- ತ್ವರಿತ ಹಾಗೂ ಏಕರೂಪತೆಯಲ್ಲಿ ಹಣ್ಣಾಗಲು ಜ್ವರದ ಪ್ರಚೋದಕವನ್ನು (ಸಂಪೂರ್ಣ) ಉಪಯೋಗಿಸಬಹುದು
- ಗೂಡಿನಿಂದ ಗುಂಜನ್ನು ಬಿಡಿಸಲು ಗುಂಜು ತೆಗೆಯುವ ಯಂತ್ರವನ್ನು ಉಪಯೋಗಿಸಿ

ಇದನ್ನು ಮಾಡಬೇಡಿ

- ಗೂಡು ಕಟ್ಟುವಾಗ ಚಂದ್ರಿಕೆಗಳನ್ನು ಸೂರ್ಯನ ಬೆಳಕಿಗೆ ನೇರವಾಗಿ ಒಡ್ಡಬೇಡಿ
- ಬಿದಿರಿನ ಚಂದ್ರಿಕೆಗಳನ್ನು ಒಂದರ ಮೇಲೆ ಒಂದರಂತೆ ಗುಪ್ಪೆ ಮಾಡಬೇಡಿ
- ಪೂರ್ಣವಾಗಿ ಕೋಶವಾಗದ ಹೊರತು ಗೂಡುಗಳನ್ನು ಬಿಡಿಸಬೇಡಿ



ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಬ್ಲೀಚಿಂಗ್ ಪುಡಿ ಉಪಯೋಗಿಸಿ ಸೋಂಕು ನಿವಾರಣೆ ಮತ್ತು ನೈರ್ಮಲ್ಯತೆ

- ಶಿಫಾರಸ್ಸು ಮಾಡಿದ ವರ್ಷ: 1992

ಪ್ರಮುಖ ಅಂಶಗಳು

- ಬ್ಲೀಚಿಂಗ್ ಪುಡಿ ರೇಷ್ಮೆ ಹುಳುವಿನ ಎಲ್ಲಾ ರೋಗಾಣುಗಳ ಪರಿಣಾಮಕಾರಿ ಸೋಂಕು ನಿವಾರಕ
- ಬೆಲೆ ಹೆಚ್ಚೇನಿಲ್ಲದ ಕ್ಲೋರಿನ್ ಆಧಾರಿತ ಸೋಂಕು ನಿವಾರಕ
- ಶೇ. 2 ರ ಬ್ಲೀಚಿಂಗ್ ಪುಡಿಯನ್ನು ಶೇ. 0.3ರ ಸುಟ್ಟ ಸುಣ್ಣದೊಡನೆ ಮಿಶ್ರಣ ಮಾಡಿ ಉಪಯೋಗಿಸಬೇಕು

ತಯಾರಿಕೆಯ ವಿಧಾನ

- 100 ಲೀ. ಸೋಂಕು ನಿವಾರಕ ದ್ರಾವಣವನ್ನು ತಯಾರಿಸಲು 2 ಕೆ. ಜಿ. ಬ್ಲೀಚಿಂಗ್ ಪೌಡರ್ ಮತ್ತು 300 ಗ್ರಾಂ. ಸುಟ್ಟ ಸುಣ್ಣದ ಪುಡಿಯನ್ನು 100 ಲೀ. ನೀರಿನಲ್ಲಿ ಬೆರೆಸಿ

- ಹುಳು ಸಾಕಾಣಿಕೆ ಮನೆ, ಸಲಕರಣೆಗಳು ಮತ್ತು ಮನೆಯ ಸುತ್ತ ಮುತ್ತ ಸೋಂಕು ನಿವಾರಣೆ
- ವೈಯುಕ್ತಿಕ ಮತ್ತು ಹುಳುಸಾಕಾಣಿಕೆಯಲ್ಲಿ ನೈರ್ಮಲ್ಯ ನಿರ್ವಹಣೆ

ವೆಚ್ಚ: 100 ಮೊಟ್ಟೆ ಸಾಕಾಣಿಕೆಗೆ ` 140/-

ಖರ್ಚು ಲಾಭದ ಅನುಪಾತ: 1:7

ಇದನ್ನು ಮಾಡಿ

- ಗುಣಮಟ್ಟದ ಬ್ಲೀಚಿಂಗ್ ಪುಡಿ (30–32% ಕ್ಲೋರಿನ್ ಲಭ್ಯವಿರುವ) ಬಳಸಿ
- ಬ್ಲೀಚಿಂಗ್ ಪುಡಿಯ ಜೊತೆ ಮಿಶ್ರಣ ಮಾಡಲು ತಾಜಾ ಸುಣ್ಣದ ಪುಡಿ ಉಪಯೋಗಿಸಿ
- ಸಿಂಪಡಿಸುವಾಗ ಮುಖವಾಡ ಬಳಸಿ

ಇದನ್ನು ಮಾಡಬೇಡಿ

- ದ್ರಾವಣನ್ನು ಬಿಸಿಲಿನಲ್ಲಿ ತಯಾರಿಸಬೇಡಿ
- ದ್ರಾವಣವನ್ನು ಲೋಹದ ವಸ್ತುಗಳ ಮೇಲೆ ಸಿಂಪಡಿಸಬೇಡಿ
- ಮಣ್ಣು ಮಿಶ್ರಿತ ಮತ್ತು ಅಶುದ್ಧ ನೀರನ್ನು ಉಪಯೋಗಿಸಬೇಡಿ
- ಹಳೆಯದಾದ ಬ್ಲೀಚಿಂಗ್ ಪುಡಿ ಬಳಸಬೇಡಿ

ರೈತರು ಹುಳು ಸಾಕಾಣಿಕೆಯಲ್ಲಿ ಕ್ಲೋರಿನ್-ಡೈ-ಆಕ್ಸೈಡ್ (ಸ್ಯಾನಿಟೆಕ್/ಸೆರಿಕ್ಲೋರ್) ಉಪಯೋಗಿಸಿ ಸೋಂಕು ನಿವಾರಣೆ ಮತ್ತು ನೈರ್ಮಲ್ಯತೆ

- ಅಭಿವೃದ್ಧಿಪಡಿಸಿದ ವರ್ಷ: 1996

ಪ್ರಮುಖ ಅಂಶಗಳು

- ಕ್ಲೋರಿನ್-ಡೈ-ಆಕ್ಸೈಡ್ ವಾಣಿಜ್ಯವಾಗಿ ಸ್ಯಾನಿಟೆಕ್/ಸೆರಿಕ್ಲೋರ್ (20000 ಪಿ.ಪಿ.ಎಮ್. ನಲ್ಲಿ) ಎಂಬ ಹೆಸರಿನಲ್ಲಿ ಲಭ್ಯವಿದೆ
- ಇದು ಹೆಚ್ಚು ರೋಗಾಣುಕಾರಕ ಆಗಿದ್ದು ಲೋಹಗಳ ಮೇಲೆ ಮತ್ತು ಮಾನವನ ಆರೋಗ್ಯದ ಮೇಲೆ ಹೆಚ್ಚು ದುಷ್ಪರಿಣಾಮ ಬೀರುವುದಿಲ್ಲ

100 ಲೀಟರ್ 500 ಪಿ.ಪಿ.ಎಮ್. ಕ್ಲೋರಿನ್ ಡೈ ಆಕ್ಸೈಡ್ ತಯಾರಿಕೆ

- ಆಕ್ಟಿವೇಟರ್ ಹರಳುಗಳನ್ನು ಒಂದು ಬಕೆಟ್‌ನಲ್ಲಿ ತೆಗೆದುಕೊಳ್ಳಿ
- 2.5 ಲೀಟರ್ ಸ್ಯಾನಿಟೆಕ್/ಸೆರಿಕ್ಲೋರ್ ದ್ರಾವಣವನ್ನು ಇದಕ್ಕೆ ಬೆರೆಸಿ
- 10 ನಿಮಿಷಗಳ ಕಾಲ ಹಾಗೆಯೇ ಬಿಡಿ
- ಸಕ್ರಿಯ ಸ್ಯಾನಿಟೆಕ್/ಸೆರಿಕ್ಲೋರ್ ದ್ರಾವಣವನ್ನು 97.5 ಲೀಟರ್ ನೀರಿನಲ್ಲಿ ಬೆರೆಸಿ
- 500 ಗ್ರಾಂ ಸುಣ್ಣದ ಪುಡಿಯನ್ನು ಬೆರೆಸಿ
- ಚೆನ್ನಾಗಿ ಮಿಶ್ರಣ ಮಾಡಿ ಸೋಂಕು ನಿವಾರಣೆಗೆ ಬಳಸಿ

- ಹುಳು ಸಾಕಾಣಿಕೆ ಮನೆ, ಸಲಕರಣೆಗಳು ಮತ್ತು ಮನೆಯ ಸುತ್ತ-ಮುತ್ತ ಸೋಂಕು ನಿವಾರಣೆಗೆ
- ವೈಯುಕ್ತಿಕ ಮತ್ತು ಹುಳು ಸಾಕಾಣಿಕೆಯಲ್ಲಿ ನೈರ್ಮಲ್ಯತೆಯ ನಿರ್ವಹಣೆ

- ವೆಚ್ಚ: 100 ಮೊಟ್ಟೆ ಸಾಕಾಣಿಕೆಗೆ ` 500/-
- ಖರ್ಚು ಲಾಭದ ಅನುಪಾತ: 1:8

ಇದನ್ನು ಮಾಡಿ

- ಆಕ್ಟಿವೇಟರ್ ಹರಳುಗಳಿಗೆ ಸ್ಯಾನಿಟೆಕ್ ಸೇರಿಸಿದಾಗ ಹಳದಿ ಬಣ್ಣಕ್ಕೆ ತಿರುಗುವುದನ್ನು ಖಚಿತಪಡಿಸಿಕೊಳ್ಳಿ
- ಶಿಫಾರಸ್ಸು ಮಾಡಿರುವಷ್ಟೇ ಪ್ರಮಾಣದ ಆಕ್ಟಿವೇಟರ್ ಹರಳುಗಳನ್ನು ಉಪಯೋಗಿಸಿ
- ಸಿಂಪಡಿಸುವಾಗ ಮುಖವಾಡ ಧರಿಸಿ

ಇದನ್ನು ಮಾಡಬೇಡಿ

- ದ್ರಾವಣನ್ನು ಬಿಸಿಲಿನಲ್ಲಿ ತಯಾರಿಸಬೇಡಿ
- ಸ್ಯಾನಿಟೆಕ್/ಸೆರಿಕ್ಲೋರ್ ದ್ರಾವಣ, ಆಕ್ಟಿವೇಟರ್ ಹರಳು ಮತ್ತು ಸುಣ್ಣದ ಪುಡಿಯನ್ನು ಒಟ್ಟಿಗೆ ಮಿಶ್ರಣ ಮಾಡಬೇಡಿ
- ಕ್ಲೋರಿನ್ ಅಂಶದ ಬಿಡುಗಡೆಯ ಮುನ್ನವೇ ಘಟಕಗಳನ್ನು ನೀರಿಗೆ ಹಾಕಬೇಡಿ
- ಮಣ್ಣು ಮಿಶ್ರಿತ ಮತ್ತು ಅಶುದ್ಧ ನೀರನ್ನು ಉಪಯೋಗಿಸಬೇಡಿ



ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಅಸ್ತ್ರ ಉಪಯೋಗಿಸಿ ಸೋಂಕು ನಿವಾರಣೆ ಮತ್ತು ನೈರ್ಮಲ್ಯತೆ

- ಅಭಿವೃದ್ಧಿಪಡಿಸಿದ ವರ್ಷ: 2009

ಪ್ರಮುಖ ಅಂಶಗಳು

- ರೇಷ್ಮೆ ಕೃಷಿಯ ಒಂದು ಸಾಮಾನ್ಯ ಸೋಂಕು ನಿವಾರಕ
- ಶೇ. 0.05 ಸಾಂದ್ರತೆಯಲ್ಲಿ ರೇಷ್ಮೆ ಹುಳುವಿನ ಎಲ್ಲಾ ರೋಗಾಣುಗಳಿಗೂ ಪರಿಣಾಮಕಾರಿ

ತಯಾರಿಕೆಯ ವಿಧಾನ

- 0.05% ಸಾಂದ್ರತೆಯ ಸೋಂಕು ನಿವಾರಕ ದ್ರಾವಣವನ್ನು ತಯಾರಿಸಲು 50 ಗ್ರಾಂ ಅಸ್ತ್ರ ಪುಡಿಯನ್ನು 100 ಲೀಟರ್ ನೀರಿನಲ್ಲಿ ಬೆರೆಸಿ ಚೆನ್ನಾಗಿ ಕಲಕಿ
- ಎರಡು ಗಂಟೆಗಳ ಕಾಲ ಹಾಗೆಯೇ ಬಿಟ್ಟು ನಂತರ ಸಿಂಪಡಣೆ ಮಾಡಲು ಉಪಯೋಗಿಸಿ

- ಹುಳು ಸಾಕಾಣಿಕೆ ಮನೆ, ಸಲಕರಣೆಗಳು ಮತ್ತು ಮನೆಯ ಸುತ್ತ ಮುತ್ತ ಸೋಂಕು ನಿವಾರಣೆ
- ವೈಯುಕ್ತಿಕ ಮತ್ತು ಹುಳುಸಾಕಾಣಿಕೆಯಲ್ಲಿ ನೈರ್ಮಲ್ಯ ನಿರ್ವಹಣೆ

- ವೆಚ್ಚ: 100 ಮೊಟ್ಟೆ ಸಾಕಾಣಿಕೆಗೆ ` 200/-
- ಖರ್ಚು ಲಾಭದ ಅನುಪಾತ: 1:9

ಇದನ್ನು ಮಾಡಿ

- ಸೋಂಕು ನಿವಾರಕ ದ್ರಾವಣವನ್ನು ಅಸ್ತ್ರ ಪೌಡರ್ ಬೆರೆಸಿದ 2 ಗಂಟೆಗಳ ನಂತರವೇ ಉಪಯೋಗಿಸಿ
- ಸಿಂಪಡಿಸುವಾಗ ಮುಖವಾಡ ಧರಿಸಿ

ಇದನ್ನು ಮಾಡಬೇಡಿ

- ಮಣ್ಣು ಮಿಶ್ರಿತ ಮತ್ತು ಅಶುದ್ಧ ನೀರನ್ನು ಉಪಯೋಗಿಸಬೇಡಿ

ರಿಫ್ಲೆಹಳು ಸಾಕಾಣಿಕೆಯಲ್ಲಿ ಸ್ಯಾನಿಟೆಕ್ ಸೂಪರ್ (ಕ್ಲೋರಿನ್-ಡೈ-ಆಕ್ಸೈಡ್) ಉಪಯೋಗಿಸಿ ಸೋಂಕು ನಿವಾರಣೆಮತ್ತು ನೈರ್ಮಲ್ಯತೆ

- ಅಭಿವೃದ್ಧಿಪಡಿಸಿದ ವರ್ಷ: 2014

ಪ್ರಮುಖ ಅಂಶಗಳು

- ಕ್ಲೋರಿನ್-ಡೈ-ಆಕ್ಸೈಡ್ ವಾಣಿಜ್ಯವಾಗಿ ಸ್ಯಾನಿಟೆಕ್ ಸೂಪರ್ (4,000ಪಿ.ಪಿ.ಎಮ್.ನಲ್ಲಿ) ಎಂಬ ಹೆಸರಿನಲ್ಲಿ ಲಭ್ಯವಿದೆ
- ಇದು ಹೆಚ್ಚು ರೋಗಾಣುಕಾರಕ ಆಗಿದ್ದು ಲೋಹಗಳ ಮೇಲೆ ಮತ್ತು ಮಾನವನ ಆರೋಗ್ಯದ ಮೇಲೆ ಹೆಚ್ಚು ದುಷ್ಪರಿಣಾಮ ಬೀರುವುದಿಲ್ಲ
- 0.5% ಸುಟ್ಟ ಸುಣ್ಣದೊಂದಿಗೆ 1.25% ಸ್ಯಾನಿಟೆಕ್ ಸೂಪರ್ (500 ಪಿ.ಪಿ.ಎಮ್. ಕ್ಲೋರಿನ್ ಡೈ ಆಕ್ಸೈಡ್) ಬೆರೆಸಿ ಚದರ ಮೀಟರ್‌ಗೆ 1.5 ಲೀ. ನಂತೆ ಸಿಂಪಡಣೆ ಮಾಡಿ

100 ಲೀಟರ್ ಸ್ಯಾನಿಟೆಕ್ ಸೂಪರ್ ತಯಾರಿಸುವ ವಿಧಾನ

- 125 ಗ್ರಾಂ. ಆಕ್ಟಿವೇಟರ್ ಹರಳುಗಳನ್ನು ಒಂದು ಬಕೆಟ್/ಬೇಸಿನ್‌ನಲ್ಲಿ ತೆಗೆದುಕೊಳ್ಳಿ
- ಇದಕ್ಕೆ 1.25 ಲೀಟರ್ ಸ್ಯಾನಿಟೆಕ್ ಸೂಪರ್ ದ್ರಾವಣವನ್ನು ಬೆರೆಸಿ
- 10 ನಿಮಿಷಗಳ ಕಾಲ ಹಾಗೆಯೇ ಇಡಿ
- ಸಕ್ರಿಯ ದ್ರಾವಣವನ್ನು 98.75 ಲೀಟರ್ ನೀರಿನಲ್ಲಿ ಬೆರೆಸಿ
- 500 ಗ್ರಾಂ. ಸುಣ್ಣದ ಪುಡಿಯನ್ನು ಬೆರೆಸಿ
- ಚೆನ್ನಾಗಿ ಮಿಶ್ರಣ ಮಾಡಿ ಸೋಂಕು ನಿವಾರಣೆಗೆ ಬಳಸಿ

- ಹುಳು ಸಾಕಾಣಿಕೆ ಮನೆ, ಸಲಕರಣೆಗಳು ಮತ್ತು ಮನೆಯ ಸುತ್ತ ಮುತ್ತ ಸೋಂಕು ನಿವಾರಣೆ
- ವೈಯುಕ್ತಿಕ ಮತ್ತು ಹುಳುಸಾಕಾಣಿಕೆಯಲ್ಲಿ ನೈರ್ಮಲ್ಯತೆ ನಿರ್ವಹಣೆ

- ವೆಚ್ಚ : 100 ಮೊಟ್ಟೆ ಸಾಕಾಣಿಕೆಗೆ ` 350/-
- ಖರ್ಚು ಲಾಭದ ಅನುಪಾತ: 1:8

ಇದನ್ನು ಮಾಡಿ

- ಆಕ್ಟಿವೇಟರ್ ಹರಳುಗಳಿಗೆ ಸ್ಯಾನಿಟೆಕ್ ಸೇರಿಸಿದಾಗ ಹಳದಿ ಬಣ್ಣಕ್ಕೆ ತಿರುಗುವುದನ್ನು ಖಚಿತಪಡಿಸಿಕೊಳ್ಳಿ
- ಶಿಫಾರಸ್ಸು ಮಾಡಿರುವಷ್ಟೇ ಪ್ರಮಾಣದ ಆಕ್ಟಿವೇಟರ್ ಹರಳುಗಳನ್ನು ಉಪಯೋಗಿಸಿ
- ಸಿಂಪಡಿಸುವಾಗ ಮುಖವಾಡ ಧರಿಸಿ

ಇದನ್ನು ಮಾಡಬೇಡಿ

- ದ್ರಾವಣನ್ನು ಬಿಸಿಲಿನಲ್ಲಿ ತಯಾರಿಸಬೇಡಿ
- ಸ್ಯಾನಿಟೆಕ್ ಸೂಪರ್ ದ್ರಾವಣ, ಆಕ್ಟಿವೇಟರ್ ಹರಳು ಮತ್ತು ಸುಣ್ಣದ ಪುಡಿಯನ್ನು ಒಟ್ಟಿಗೆ ಮಿಶ್ರಣ ಮಾಡಬೇಡಿ

ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಸೆರಿಫ್ಲಿಟ್ ಉಪಯೋಗಿಸಿ ಸೋಂಕು ನಿವಾರಣೆ ಮತ್ತು ನೈರ್ಮಲ್ಯತೆ

- ಅಭಿವೃದ್ಧಿಪಡಿಸಿದ ವರ್ಷ: 2015

ಪ್ರಮುಖ ಅಂಶಗಳು

- ಬೇರೆ ಯಾವುದೇ ಸೋಂಕು ನಿವಾರಕದ ಹಾಗೆಯೇ ಸೆರಿಫ್ಲಿಟ್ ಸಹ ರೇಷ್ಮೆ ಹುಳುವಿನ ಎಲ್ಲಾ ಸಾಮಾನ್ಯ ರೋಗಾಣುಗಳ ವಿರುದ್ಧ ಪರಿಣಾಮಕಾರಿಯಾಗಿದೆ
- ಇದು ಎಲ್ಲಾ ರೀತಿಯ ಹುಳು ಸಾಕಾಣಿಕೆ ಮನೆಗಳಿಗೆ ಮತ್ತು ಎಲ್ಲಾ ರೀತಿಯ ವಾತಾವರಣಗಳಿಗೆ ಸೂಕ್ತ ಹಾಗೂ ಏರ್ ಟೈಟ್ ಪರಿಸ್ಥಿತಿಯ ಅವಶ್ಯಕತೆ ಇರುವುದಿಲ್ಲ
- ಇದು ಹೆಚ್ಚು ರೋಗಾಣುಕಾರಕ ಆಗಿದ್ದು ಲೋಹಗಳ ಮೇಲೆ ಮತ್ತು ಮಾನವನ ಆರೋಗ್ಯದ ಮೇಲೆ ಹೆಚ್ಚು ದುಷ್ಪರಿಣಾಮ ಬೀರುವುದಿಲ್ಲ
- 0.2% ಸೆರಿಫ್ಲಿಟ್ ದ್ರಾವಣವನ್ನು ಹುಳುಸಾಕಾಣಿಕೆ ಮನೆ ಮತ್ತು ಸಲಕರಣೆಗಳನ್ನು ಸೋಂಕು ನಿವಾರಣೆ ಮಾಡಲು ಬಳಸಿ (ಚದರ ಮೀಟರ್‌ಗೆ 1.5 ಲೀ.)

100 ಲೀಟರ್ ಶೇ. 0.2 ರ ಸೆರಿಫ್ಲಿಟ್ ದ್ರಾವಣ ತಯಾರಿಕೆ ವಿಧಾನ

- 200 ಗ್ರಾಂ. ಸೆರಿಫ್ಲಿಟ್ ಹರಳುಗಳನ್ನು 100 ಲೀಟರ್ ನೀರಿನಲ್ಲಿ ಬೆರೆಸಿ
- 30 ನಿಮಿಷ ಹಾಗೆಯೇ ಕರಗಲು ಬಿಟ್ಟು ನಂತರ ಉಪಯೋಗಿಸಿ

- ಹುಳು ಸಾಕಾಣಿಕೆ ಮನೆ, ಸಲಕರಣೆಗಳು ಮತ್ತು ಮನೆಯ ಸುತ್ತ ಮುತ್ತ ಸೋಂಕು ನಿವಾರಣೆ
- ವೈಯುಕ್ತಿಕ ಮತ್ತು ಹುಳುಸಾಕಾಣಿಕೆಯಲ್ಲಿ ನೈರ್ಮಲ್ಯ ನಿರ್ವಹಣೆ

- ವೆಚ್ಚ: 100 ಮೊಟ್ಟೆ ಸಾಕಾಣಿಕೆಗೆ ` 180/-
- ಖರ್ಚು ಲಾಭದ ಅನುಪಾತ : 1: 9

ಇದನ್ನು ಮಾಡಿ

- ಸೆರಿಫ್ಲಿಟ್ ಹರಳುಗಳನ್ನು ಬೆರೆಸಿದ ಮೇಲೆ ದ್ರಾವಣವನ್ನು 30 ನಿಮಿಷಗಳ ನಂತರ ಉಪಯೋಗಿಸಿ
- ಸಿಂಪಡಿಸುವಾಗ ಮುಖವಾಡ ಧರಿಸಿ

ಇದನ್ನು ಮಾಡಬೇಡಿ

- ಮಣ್ಣು ಮಿಶ್ರಿತ ಮತ್ತು ಅಶುದ್ಧ ನೀರನ್ನು ಉಪಯೋಗಿಸಬೇಡಿ



ವಿಜೇತದಿಂದ ಸಾಮಾನ್ಯ ರೇಷ್ಮೆಹುಳು ರೋಗಗಳನ್ನು ತಡೆಗಟ್ಟುವಿಕೆ

- ಅಭಿವೃದ್ಧಿಪಡಿಸಿದ ವರ್ಷ: 1995

ಪ್ರಮುಖ ಅಂಶಗಳು

- ರೇಷ್ಮೆ ಹುಳು ರೋಗಗಳ ವಿರುದ್ಧ ಇರುವ ಹುಳುಗಳ ಶರೀರ ಮತ್ತು ಹುಳು ಹಾಸಿಗೆಯ ಸೋಂಕು ನಿವಾರಕ
- ರೇಷ್ಮೆ ಹುಳುವಿನ ರೋಗಗಳನ್ನು ತಡೆಯಲು ಉಪಯೋಗಿಸಲ್ಪಟ್ಟ ಪ್ರಪ್ರಥಮ ಔಷಧೀಯ ಪುಡಿ
- ಇದು ಪೇಟೆಂಟ್ ಆಗಿರುವ ಒಂದು ತಾಂತ್ರಿಕತೆ (ಭಾರತೀಯ ಪೇಟೆಂಟ್ ಸಂಖ್ಯೆ: 186852/28೦9–1998)

ಬಳಕೆ

- ಪ್ರತೀ ಜ್ವರದ ನಂತರ, ಸೊಪ್ಪು ಕೊಡುವ ಮುನ್ನ ಹಾಗೂ 5ನೇ ಹಂತದ 4 ನೇ ದಿನ ಹುಳು ಹಾಸಿಗೆಯಲ್ಲಿ ಯಾವುದೇ ಸೊಪ್ಪು ಇಲ್ಲದಿರುವುದನ್ನು ಖಾತರಿಪಡಿಸಿಕೊಂಡು ವಿಜೇತ ಉದುರಿಸಿ
- ರೇಷ್ಮೆ ಹುಳುವಿನ ಶರೀರದ ಮೇಲೆ ಹಾಗೂ ಹುಳು ಹಾಸಿಗೆಯ ಮೇಲೆ 1 ನೇ ಮತ್ತು 2 ನೇ ಹಂತದಲ್ಲಿ ಚದರ ಅಡಿಗೆ 3 ಗ್ರಾಂ. ನಂತೆ ಹಾಗೂ 3, 4, 5ನೇ ಹಂತದಲ್ಲಿ ಚದರ ಅಡಿಗೆ 5 ಗ್ರಾಂ. ನಂತೆ ಬಳಸಿ

ರೇಷ್ಮೆ ಹುಳುಗಳ ಸಾಮಾನ್ಯ ರೋಗಗಳ ತಡೆಗಟ್ಟುವಿಕೆಗೆ

- ವೆಚ್ಚ: 100 ಮೊಟ್ಟೆ ಸಾಕಾಣಿಕೆಗೆ ` 300/-
- ಖರ್ಚು ಲಾಭದ ಅನುಪಾತ: 1:6

ಇದನ್ನು ಮಾಡಿ

- ವಿಜೇತ ಧೂಳೀಕರಿಸಿದ 30 ನಿಮಿಷಗಳ ನಂತರ ಸೊಪ್ಪು ನೀಡಿ
- ಧೂಳು ಉದುರಿಸುವಾಗ ಮುಖವಾಡ ಧರಿಸಿ
- ಸೋಂಕುನಿವಾರಕ ಪುಡಿಯನ್ನು ಗಾಳಿಯಾಡದ ಡಬ್ಬಿಗಳಲ್ಲಿ ಇಡಿ
- ಶಿಫಾರಸ್ಸು ಮಾಡಲಾಗಿರುವ ಪ್ರಮಾಣವನ್ನಷ್ಟೇ ಬಳಸಿ

ಇದನ್ನು ಮಾಡಬೇಡಿ

- ತಿನ್ನುತ್ತಿರುವ ಹುಳುಗಳ ಮೇಲೆ ಉದುರಿಸಬೇಡಿ
- ಧೂಳು ಉದುರಿಸಿದ ನಂತರ ತಟ್ಟೆಗಳನ್ನು ಮುಚ್ಚಬೇಡಿ
- ಬಳಕೆಯ ಅವಧಿಯ ದಿನಾಂಕ ಮುಗಿದಿರುವ ವಿಜೇತ ಪುಡಿಯನ್ನು ಉಪಯೋಗಿಸಬೇಡಿ

ವಿಜೇತ ಸಪ್ಲಿಮೆಂಟ್ ನಿಂದ ಸುಣ್ಣಕಟ್ಟು ರೋಗ ತಡೆಗಟ್ಟುವಿಕೆ

- ಅಭಿವೃದ್ಧಿಪಡಿಸಿದ ವರ್ಷ: 2001

ಪ್ರಮುಖ ಅಂಶಗಳು

- ಇದು ಸುಣ್ಣಕಟ್ಟು ರೋಗ ಹರಡುವುದನ್ನು ತಡೆಯಲು ಇರುವ ಶಿಲೀಂಧ್ರ ವಿರೋಧಿ ಔಷಧೀಯ ಪುಡಿ
- ಇದು ಮಳೆಗಾಲ ಹಾಗೂ ಚಳಿಗಾಲದಲ್ಲಿ ಸುಣ್ಣಕಟ್ಟು ರೋಗ ತಡೆಯಲು ಒಂದು ನಿರ್ದಿಷ್ಟ ಹಾಸಿಗೆ ಸೋಂಕು ನಿವಾರಕ
- ಬಳಸುವ ವಿಧಾನ – 100 ಮೊಟ್ಟೆ ಸಾಕಾಣಿಕೆಗೆ ಬೇಕಾಗುವ ಪ್ರಮಾಣ (ಗ್ರಾಂ ನಲ್ಲಿ)

ಹುಳುವಿನ ಹಂತ	ತಟ್ಟೆ ಪದ್ಧತಿ	ರೆಂಬೆ ಪದ್ಧತಿ
4 ನೇ ಹಂತದ 3 ನೇ ದಿನ	600	900
5 ನೇ ಹಂತದ 2 ನೇ ದಿನ	1,000	1,300
5 ನೇ ಹಂತದ 6 ನೇ ದಿನ	1,400	1,800
ಒಟ್ಟು	3,000	4,000

ರೇಷ್ಮೆ ಹುಳುಗಳ ಸುಣ್ಣಕಟ್ಟು ರೋಗ ತಡೆಗಟ್ಟುವಿಕೆ

- ವೆಚ್ಚ: 100 ಮೊಟ್ಟೆ ಸಾಕಾಣಿಕೆಗೆ ` 300/-
- ಖರ್ಚು ಲಾಭದ ಅನುಪಾತ : 1:5

ಇದನ್ನು ಮಾಡಿ

- ರೇಷ್ಮೆ ಹುಳುಗಳ ಶರೀರದ ಮೇಲೆ ಹಾಗೂ ಹುಳು ಹಾಸಿಗೆಯ ಮೇಲೆ ಉದುರಿಸಿ (ಚದರ ಅಡಿಗೆ 3 ಗ್ರಾಂ ನಂತೆ)
- ಉದುರಿಸಿದ 30 ನಿಮಿಷಗಳ ನಂತರ ಸೊಪ್ಪು ನೀಡಿ
- ಉದುರಿಸುವಾಗ ಮುಖವಾಡ ಧರಿಸಿ
- ಸೋಂಕುನಿವಾರಕ ಪುಡಿಯನ್ನು ಗಾಳಿಯಾಡದ ಡಬ್ಬಿಗಳಲ್ಲಿ ಇಡಿ

ಇದನ್ನು ಮಾಡಬೇಡಿ

- ತಿನ್ನುತ್ತಿರುವ ಹುಳುಗಳ ಮೇಲೆ ಬಳಸಬೇಡಿ
- ಉದುರಿಸಿದ ನಂತರ ತಟ್ಟೆಗಳನ್ನು ಮುಚ್ಚಬೇಡಿ
- ರೇಷ್ಮೆ ಹುಳುಗಳು ಜ್ವರದಲ್ಲಿರುವಾಗ ಅಥವಾ ತಿನ್ನಬಹುದಾದ ಸೊಪ್ಪು ಇರುವಾಗ ಬಳಸಬೇಡಿ

ಅಂಕುಶ್ ಉಪಯೋಗಿಸಿ ರೇಷ್ಮೆ ಹುಳುಗಳ ಎಲ್ಲಾ ಸಾಮಾನ್ಯ ರೋಗಗಳ ತಡೆಗಟ್ಟುವಿಕೆ

- ಅಭಿವೃದ್ಧಿಪಡಿಸಿದ ವರ್ಷ: 2003

ಪ್ರಮುಖ ಅಂಶಗಳು

- ಪರಿಸರ ಮತ್ತು ಬಳಕೆದಾರ ಸ್ನೇಹಿ ರೇಷ್ಮೆ ಹುಳುವಿನ ಶರೀರ ಮತ್ತು ಹಾಸಿಗೆ ಸೋಂಕು ನಿವಾರಕ
- ರೇಷ್ಮೆ ಹುಳುಗಳ ಎಲ್ಲಾ ಪ್ರಮುಖ ರೋಗಗಳಿಗೆ ಪರಿಣಾಮಕಾರಿಯಾಗಿದೆ
- ಘಟಕಾಂಶಗಳು ಪರಿಸರ ಸ್ನೇಹಿಯಾಗಿದ್ದು ಜೈವಿಕವಾಗಿ ವಿಭಜನೆ ಹೊಂದುತ್ತವೆ

ಬಳಸುವ ವಿಧಾನ – 100 ಮೊಟ್ಟೆ ಸಾಕಾಣಿಕೆಗೆ ಬೇಕಾಗುವ ಪ್ರಮಾಣ (ಗ್ರಾಂ ನಲ್ಲಿ)

ರೇಷ್ಮೆ ಹುಳುಗಳ ಎಲ್ಲಾ ರೋಗಗಳ ತಡೆಗಟ್ಟುವಿಕೆಗೆ

ಹುಳುವಿನ ಹಂತ	ಸಾಕಾಣಿಕಾ ಪದ್ಧತಿ	
	ತಟ್ಟೆ	ರೆಂಬೆ
1 ನೇ ಜ್ವರದ ನಂತರ*	72	72
2 ನೇ ಜ್ವರದ ನಂತರ*	144	144
3 ನೇ ಜ್ವರದ ನಂತರ*	288	540
4 ನೇ ಜ್ವರದ ನಂತರ*	768	1,440
5 ನೇ ಹಂತದ 3 ನೇ ದಿನ	1,076	1,600
5 ನೇ ಹಂತದ 5 ನೇ ದಿನ	1,348	2,160
Total	3,696	5,956

* ಸೊಪ್ಪು ಕೊಡುವ ಮುನ್ನ

- ವೆಚ್ಚ: 100 ಮೊಟ್ಟೆ ಸಾಕಾಣಿಕೆಗೆ ` 300/-
- ಖರ್ಚು ಲಾಭದ ಅನುಪಾತ: 1:7

ಇದನ್ನು ಮಾಡಿ

- ಇದು ರೇಷ್ಮೆ ಹುಳುಗಳ ಎಲ್ಲಾ ಸಾಮಾನ್ಯ ರೋಗಗಳಿಗೂ ಹಾಸಿಗೆ ಸೋಂಕು ನಿವಾರಕವಾಗಿದೆ
- ಬಳಸುವಾಗ ಮುಖವಾಡ ಧರಿಸಿ
- ಉದುರಿಸಿದ 30 ನಿಮಿಷಗಳ ನಂತರ ಸೊಪ್ಪು ನೀಡಿ

ಇದನ್ನು ಮಾಡಬೇಡಿ

- ತಿನ್ನುತ್ತಿರುವ ಹುಳುಗಳ ಮೇಲೆ ಬಳಸಬೇಡಿ
- ಉದುರಿಸಿದ ನಂತರ ತಟ್ಟೆಗಳನ್ನು ಮುಚ್ಚಬೇಡಿ

ಅಮೃತ್ ಉಪಯೋಗಿಸಿ ರೇಷ್ಮೆ ಹುಳುಗಳ ಹಾಲು ತೊಂಡೆ ಮತ್ತು ಸಪ್ಪೆ ರೋಗಗಳ ನಿಗ್ರಹ

- ಅಭಿವೃದ್ಧಿಪಡಿಸಿದ ವರ್ಷ: 2003

ಪ್ರಮುಖ ಅಂಶಗಳು

- ಇದು ಹಾಲು ತೊಂಡೆ ಮತ್ತು ಸಪ್ಪೆ ರೋಗಗಳ ನಿಗ್ರಹಕ್ಕಾಗಿ ತಯಾರಿಸಲ್ಪಟ್ಟಿರುವ ಪರಿಸರ ಮತ್ತು ಬಳಕೆದಾರ ಸ್ನೇಹಿ ಸಸ್ಯ ಮೂಲಾಧಾರಿತ ಔಷಧಿ
- ರೇಷ್ಮೆ ಹುಳುವಿನ ರೋಗಗಳನ್ನು ಗುಣಪಡಿಸಲು ತಯಾರು ಮಾಡಿರುವ ಪ್ರಪ್ರಥಮ ಔಷಧೀಯ ಪುಡಿ

ತಯಾರಿಕೆ ಮತ್ತು ಬಳಕೆ

- 20 ಗ್ರಾಂ ಅಮೃತ್ ಪುಡಿಯನ್ನು 1 ಲೀಟರ್ ನೀರಿನಲ್ಲಿ ಕರಗಿಸಿ. ಒಂದು ಕೆ.ಜಿ. ಹಿಪ್ಪುನೇರಳೆ ಸೊಪ್ಪಿಗೆ ಅಥವಾ ರೆಂಬೆಗೆ 70 ಮಿ.ಲೀ. ನಷ್ಟು ಕೈಯಿಂದ ಚಿಮುಕಿಸಬೇಕು

ಹುಳುವಿನ ಹಂತ	ಅಮೃತ್ (ಗ್ರಾಂ)	ನೀರಿನ (ಎಂ.ಲೀ.)	ಎಲೆಯ/ರೆಂಬೆಯ (ಕೆ.ಜಿ)
2 ನೇ ಜ್ವರದ ನಂತರ 2 ನೇ ಸೊಪ್ಪು ಕೊಡುವಾಗ	07	350	5
3 ನೇ ಜ್ವರದ ನಂತರ 2 ನೇ ಸೊಪ್ಪು ಕೊಡುವಾಗ	53	2,650	38
4 ನೇ ಜ್ವರದ ನಂತರ 2 ನೇ ಸೊಪ್ಪು ಕೊಡುವಾಗ	90	4,500	67
ಒಟ್ಟು	150	7,500	110

ರೇಷ್ಮೆ ಹುಳುಗಳ ಹಾಲು ತೊಂಡೆ ಮತ್ತು ಸಪ್ಪೆ ರೋಗ ನಿಗ್ರಹಿಸಲು

- ವೆಚ್ಚ: 100 ಮೊಟ್ಟೆ ಸಾಕಾಣಿಕೆಗೆ ` 150/-
- ಖರ್ಚು ಲಾಭದ ಅನುಪಾತ: 1:5

ಇದನ್ನು ಮಾಡಿ

- ಹೊಸದಾಗಿ ತಯಾರಿಸಿದ ದ್ರಾವಣವನ್ನು ಉಪಯೋಗಿಸಿ
- ಕೈಯನ್ನು ಉಪಯೋಗಿಸಿ ಮಿಶ್ರಣ ಮಾಡಿ

ಇದನ್ನು ಮಾಡಬೇಡಿ

- ದ್ರಾವಣವನ್ನು ಚಿಮುಕಿಸಲು ಸ್ಪ್ರೇಯರ್ ಉಪಯೋಗಿಸಬೇಡಿ
- ಸೊಪ್ಪನ್ನು ಹೆಚ್ಚು ಕಾಲ ಒಣಗಲು ಬಿಡಬೇಡಿ

ಊಜಿ ನೊಣದ ಸಮಗ್ರ ನಿಯಂತ್ರಣ

- ಶಿಫಾರಸ್ಸು ಮಾಡಿದ ವರ್ಷ: 2002

ಪ್ರಮುಖ ಅಂಶಗಳು

- ಊಜಿ ನೊಣವು ರೇಷ್ಮೆ ಹುಳುವಿನ ಪರಾವಲಂಬಿ ಕೀಟ
- ರೇಷ್ಮೆ ಗೂಡಿನ ಇಳುವರಿಯಲ್ಲಿ 10–15% ನಷ್ಟವನ್ನು ಉಂಟುಮಾಡುತ್ತದೆ
- ವರ್ಷಪೂರ್ತಿ ಕಾಣಿಸಿಕೊಂಡರೂ ಮಳೆಗಾಲದಲ್ಲಿ ಇದರ ಬಾಧೆ ಹೆಚ್ಚು
- ಇದು 400–500 ಮೊಟ್ಟೆಗಳನ್ನಿಡುತ್ತದೆ ಹಾಗೂ 2–3 ದಿನಗಳಲ್ಲಿ ಅವು ಒಡೆಯುತ್ತವೆ
- ಮರಿಹುಳುವಿನ ಅವಧಿ 6–8 ದಿನಗಳು ಹಾಗೂ ಕೋಶಾವಸ್ಥೆ 10–12 ದಿನಗಳು
- ಜೀವನ ಚಕ್ರ 18–20 ದಿನಗಳು
- ಊಜಿ ನೊಣಗಳು 15–21 ದಿನಗಳ ತನಕ ಬದುಕಿರುತ್ತವೆ

ನಿರ್ವಹಣಾ ಕ್ರಮಗಳು

ಊಜಿ ನೊಣ ಒಳ ಸೇರದಂತೆ ಮಾಡುವ ವಿಧಾನ

- ಎಲ್ಲಾ ಕಿಟಕಿ ಹಾಗೂ ಬಾಗಿಲುಗಳಿಗೆ ತಂತಿ ಜಾಲರಿ ಅಥವಾ ನೈಲಾನ್ ಪರದೆ ಅಳವಡಿಸಿ
- ಬಾಗಿಲು ತಾನಾಗಿಯೇ ಮುಚ್ಚಿಕೊಳ್ಳುವ ವ್ಯವಸ್ಥೆ ಮಾಡಿಕೊಳ್ಳಿ
- ಹುಳು ಸಾಕಾಣಿಕೆ ಮನೆಯ ಪ್ರವೇಶ ದ್ವಾರದ ಎದುರಿನಲ್ಲಿ ನೈಲಾನ್ ಪರದೆಯ ಉಪಕೋಣೆ ನಿರ್ಮಿಸಿ

ಊಜಿ ಟ್ರ್ಯಾಪ್ ಬಳಕೆ

- ಒಂದು ಲೀಟರ್ ನೀರಿನಲ್ಲಿ ಒಂದು ಮಾತ್ರೆಯನ್ನು ಕರಗಿಸಿ ತಯಾರಿಸಿದ ಹಳದಿ ಬಣ್ಣದ ದ್ರಾವಣವನ್ನು ಬಿಳಿ ಬಣ್ಣದ ತಟ್ಟೆಯಲ್ಲಿ ಹಾಕಿ ಹುಳು ಸಾಕಾಣಿಕೆ ಮನೆಯ ಹೊರಗಡೆ ಎಲ್ಲಾ ಕಿಟಕಿಗಳ ಬುಡದಲ್ಲಿ ಹಾಗೂ ಒಳಗಡೆ ಬೆಳಕು ಇರುವ ಎತ್ತರದ ಸ್ಥಳಗಳಲ್ಲಿ ಇಡಬೇಕು. ಪ್ರತೀ ಬೆಳೆಯ ಅಂತ್ಯದಲ್ಲಿ ಕಸ ತೆಗೆಯುವವರೆಗೂ ಇಡಬೇಕು.

ಜೈವಿಕ ವಿಧಾನ

- ರೇಷ್ಮೆ ಹುಳುವಿನ 5 ನೇ ಹಂತದಲ್ಲಿ ಕೋಶ ಪರತಂತ್ರ ಜೀವಿಯಾದ ನಿಸೋಲಿಂಕ್ಸ್ ಥೈಮಸ್‌ನ್ನು (ಎನ್.ಟಿ) 100 ಮೊಟ್ಟೆಗೆ 2 ಪ್ಯಾಕೆಟ್‌ಗಳಂತೆ ಹುಳು ಸಾಕಾಣಿಕೆ ಮನೆಯೊಳಗೆ ಬಿಡುಗಡೆ ಮಾಡಿ
- ಪ್ರತೀ ಪ್ಯಾಕೆಟ್ ನಿಂದ ಸುಮಾರು 10,000 ಎನ್.ಟಿ. ಜೀವಿಗಳು ಹೊರಬರುತ್ತವೆ
- ಒಂದು ಎನ್.ಟಿ. ಕೀಟವು ಸುಮಾರು 4–5 ಊಜಿ ಕೋಶಗಳ ಒಳಗೆ ತನ್ನ ಮೊಟ್ಟೆಗಳನ್ನು ಇಡುತ್ತದೆ

ಊಜಿ ನೊಣದ ಸಮಗ್ರ ನಿಯಂತ್ರಣ....

- ಒಂದು ಊಜಿ ಕೋಶದ ಒಳಗೆ ಸುಮಾರು 40–60 ಎನ್.ಟಿ ಕೀಟಗಳು ಅಭಿವೃದ್ಧಿ ಹೊಂದುತ್ತವೆ
- ರೇಷ್ಮೆ ಹುಳುಗಳು ಹಣ್ಣಾದ ನಂತರ ಎನ್.ಟಿ. ಪ್ಯಾಕೆಟ್‌ಗಳನ್ನು ಚಂದ್ರಿಕೆಗಳ ಬಳಿ ಇಡಿ
- ಗೂಡು ಕೊಯಿಲು ಆದ ನಂತರ ಈ ಪ್ಯಾಕೆಟ್ ಗಳನ್ನು ಗೊಬ್ಬರದ ಗುಂಡಿಗೆ ಹಾಕಿ

ವ್ಯವಸಾಯಿಕ ಪದ್ಧತಿ

- ರೇಷ್ಮೆ ಹುಳು ಸಾಕಾಣಿಕೆಯ ನಂತರ ಹಿಪ್ಪುನೇರಳೆ ರೆಂಬೆಗಳನ್ನು ಹಿಕ್ಕೆ ಮತ್ತು ತಿಂದುಳಿದ ಎಲೆಗಳಿಂದ ಬೇರ್ಪಡಿಸಿ
- ಹಿಕ್ಕೆ ಮತ್ತು ತಿಂದುಳಿದ ಎಲೆಗಳನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿಸಿ ಬಿಗಿಯಾಗಿ ಕಟ್ಟಿ ಕನಿಷ್ಟ 15 ದಿನಗಳ ತನಕ ಇಟ್ಟು ಅನಂತರ ಗೊಬ್ಬರದ ಗುಂಡಿಗೆ ಎಸೆಯಬೇಕು
- ಬದಲಾಗಿ ಈ ತ್ಯಾಜ್ಯವನ್ನು ಗುಂಡಿ ತೋಡಿ ಹೂತು ಹಾಕಲೂಬಹುದು

ಉಪಯೋಗಗಳು

- ಊಜಿ ನೊಣದ ಬಾಧೆಯು ಸತತವಾಗಿ ಶೇ. 2 ಕ್ಕಿಂತ ಕಡಿಮೆ ಇರುತ್ತದೆ
- ಪರಿಸರ ಸ್ನೇಹಿ, ಪರಿಣಾಮಕಾರಿ ಹಾಗೂ ಮಿತವ್ಯಯಕಾರಿ
- ಬಳಸಲು ಸುಲಭ, ಅಪಾಯಕಾರಿ ಅಲ್ಲದ ಬಳಕೆದಾರ ಸ್ನೇಹಿ ವಿಧಾನ

ಉಪಯುಕ್ತತೆ

ಊಜಿ ನೊಣದ ಪರಿಣಾಮಕಾರಿ ನಿಯಂತ್ರಣ

- ವೆಚ್ಚ: 100 ಮೊಟ್ಟೆ ಸಾಕಾಣಿಕೆಗೆ ` 150/-
- ಖರ್ಚು ಲಾಭದ ಅನುಪಾತ: 1:5

ಇದನ್ನು ಮಾಡಿ

- ಗೂಡು ಕಟ್ಟಲು ಪಾರಂಭಿಸಿದ 15 ದಿನಗಳ ವರೆಗೂ ಊಜಿ ಟ್ರ್ಯಾಪ್ ಗಳನ್ನು ಹುಳು ಸಾಕಾಣಿಕೆ ಮನೆಯೊಳಗೆ ಇಡುವುದನ್ನು ಮುಂದುವರಿಸಿ, ಇದರಿಂದ ಸಾಕಾಣಿಕೆ ಮನೆಯೊಳಗೆ ಲಭ್ಯವಿರುವ ಕೋಶಗಳಿಂದ ಹೊರಬರುವ ಊಜಿ ನೊಣಗಳನ್ನು ಆಕರ್ಷಿಸಿ ಕೊಲ್ಲಬಹುದು
- ಹುಳು ಸಾಕಾಣಿಕೆ ಮನೆಯೊಳಗೆ, ಗೂಡು ಕಟ್ಟಿಸುವ ಸ್ಥಳ ಹಾಗೂ ಗೂಡು ಬಿಡಿಸುವ ಸ್ಥಳದಲ್ಲಿ ಸಿಗುವ ಊಜಿ ಕೋಶಗಳನ್ನು ಸಂಗ್ರಹಿಸಿ ಸುಟ್ಟುಬಿಡಿ

ಇದನ್ನು ಮಾಡಬೇಡಿ

- ಊಜಿ ಬಾಧಿತ ರೇಷ್ಮೆ ಹುಳುಗಳನ್ನು ಹೊರಗಡೆ ಎಸೆಯಬೇಡಿ, ಬದಲಾಗಿ ಸುಟ್ಟುಬಿಡಿ ಅಥವಾ ಬ್ಲೀಚಿಂಗ್ ಪುಡಿ ಜೊತೆ ಬೆರೆಸಿ ಹೂತುಹಾಕಿ
- ಹುಳು ಸಾಕಾಣಿಕೆ ಮುಗಿದ ನಂತರವೂ ಬಾಗಿಲನ್ನು ತೆರೆದು ಇಡಬೇಡಿ, ಇದರಿಂದ ಊಜಿ ನೊಣಗಳು ಹೊರಗಡೆ ತಪ್ಪಿಸಿಕೊಂಡು ಹೋಗುತ್ತವೆ.

ಸಂಪೂರ್ಣ – ರೇಷ್ಮೆ ಹುಳುಗಳು ಏಕ ಕಾಲಕ್ಕೆ ಹಣ್ಣಾಗಲು ಉಪಯೋಗಿಸುವ ಪ್ರಚೋದಕ

- ಅಭಿವೃದ್ಧಿಪಡಿಸಿದ ವರ್ಷ: 2003

ಪ್ರಮುಖ ಅಂಶಗಳು

- ನೀರು ಬೆರೆಸಿ ಸಾರಗುಂದಿಸಿದ ಸಂಪೂರ್ಣವನ್ನು ಹಿಪ್ಪುನೇರಳೆ ಸೊಪ್ಪಿನ ಮೇಲೆ ಸಿಂಪಡಿಸಿ ರೇಷ್ಮೆ ಹುಳುಗಳಿಗೆ ತಿನ್ನಿಸಿ
- ಇದಾದ 18–24 ಗಂಟೆಗಳಲ್ಲಿ ಎಲ್ಲಾ ಹುಳುಗಳೂ ಹಣ್ಣಾಗುತ್ತವೆ
- ಕ್ಲಿಷ್ಟಕರ ಪರಿಸ್ಥಿತಿಗಳಲ್ಲಿ (ಏಕಾ ಏಕಿ ರೋಗ ಉಂಟಾದಾಗ ಅಥವಾ ಸೊಪ್ಪಿನ ಕೊರತೆ ಕಂಡುಬಂದಾಗ) ಇದನ್ನು ಉಪಯೋಗಿಸಿ ಬೆಳೆಯನ್ನು ಉಳಿಸಿಕೊಳ್ಳಬಹುದು

ಉಪಯೋಗಗಳು

- ಗೂಡು ಕಟ್ಟುವಿಕೆಯು 12–18 ಗಂಟೆಗಳಲ್ಲಿ ಆರಂಭಗೊಳ್ಳುತ್ತದೆ
- ಕೋಶಾವಸ್ಥೆಯ ಪರಿವರ್ತನಾ ಪ್ರಮಾಣವು ಹೆಚ್ಚುತ್ತದೆ
- ಗೂಡಿನ ಇಳುವರಿ ಮತ್ತು ಬೆಲೆಯಲ್ಲಿ ಕನಿಷ್ಠ ಹೆಚ್ಚಳ
- ದೋಷಪೂರಿತ ಗೂಡುಗಳ ಪ್ರಮಾಣ ಕಡಿಮೆಯಾಗುತ್ತದೆ
- ಗೂಡುಗಳನ್ನು ಒಂದು ದಿನ ಮುಂಚಿತವಾಗಿ ಮಾರಾಟ ಮಾಡಬಹುದು

ರೇಷ್ಮೆ ಹುಳುಗಳು ಬೇಗನೆ ಹಾಗೂ ಏಕ ಕಾಲಕ್ಕೆ ಹಣ್ಣಾಗುತ್ತವೆ

ಇದನ್ನು ಮಾಡಿ

- ಒಂದು ಆಂಪ್ಯೂಲ್ ಸಂಪೂರ್ಣವನ್ನು 2 ಲೀಟರ್ ನೀರಿನೊಂದಿಗೆ ಬೆರೆಸಬೇಕು
- ಪ್ರತೀ ಆಂಪ್ಯೂಲ್ (10 ಮಿ.ಲೀ.) ಸಂಪೂರ್ಣವನ್ನು ಸುಮಾರು 20,000 ಹುಳುಗಳಿಗೆ ಬಳಸಿ
- ಈ ಪ್ರಚೋದಕವನ್ನು ಬಲಿತ ಹುಳುಗಳಿಗೆ ಆಗ ತಾನೇ ಕೊಟ್ಟ ಸೊಪ್ಪಿನ ಮೇಲೆ ಸಿಂಪಡಿಸಬೇಕು
- ದ್ರಾವಕವನ್ನು ತಯಾರಿಸುವಾಗ ಕೈಗಳಿಗೆ ಕೈಚೀಲ (ಗ್ಲೋವ್ಸ್) ತೊಟ್ಟಿರಬೇಕು

ಇದನ್ನು ಮಾಡಬೇಡಿ

- ದ್ರಾವಕವನ್ನು ಹುಳುಗಳ ಮೇಲೆ ನೇರವಾಗಿ ಸಿಂಪಡಿಸಬೇಡಿ
- ಸಂಪೂರ್ಣ ಸಿಂಪಡಿಸುವಾಗ ಜಾಸ್ತಿ ಪ್ರಮಾಣದಲ್ಲಿ ಸೊಪ್ಪನ್ನು ನೀಡಬಾರದು

ಸಮೃದ್ಧಿ–ಹೆಚ್ಚಿನ ಗೂಡು ಮತ್ತು ರೇಷ್ಮೆ ಉತ್ಪಾದನೆಗೆ (ಜುವೆನೈಲ್ ಪ್ರಚೋದಕ)

- ಅಭಿವೃದ್ಧಿಪಡಿಸಿದ ವರ್ಷ: 2007

ಪ್ರಮುಖ ಅಂಶಗಳು

- ಸಮೃದ್ಧಿಯನ್ನು ಯಾವುದೇ ರೇಷ್ಮೆ ತಳಿ ಅಥವಾ ಹೈಬ್ರಿಡ್‌ನ ಸಾಕಾಣಿಕೆಯಲ್ಲಿ ಉಪಯೋಗಿಸಬಹುದು
- 5 ನೇ ಹಂತದ ಹುಳುವಿನ ಅವಧಿಯನ್ನು 12–24 ಗಂಟೆ ದೀರ್ಘಗೊಳಿಸುವುದರಿಂದ ಎರಡು ಹೆಚ್ಚುವರಿ ಆಹಾರವನ್ನು ಕೊಡಬೇಕಾಗುವುದು

ಉಪಯೋಗಿಸುವ ವಿಧಾನ

- ಒಂದು ಆಂಪ್ಯೂಲ್ ಸಮೃದ್ಧಿಯನ್ನು (5 ಮಿ.ಲೀ.) 2.5 ಲೀ. ನೀರಿನಲ್ಲಿ ಮಿಶ್ರಣ ಮಾಡಿದಾಗ ಅದು ಹಾಲಿನಂಥ ದ್ರಾವಣವಾಗುತ್ತದೆ
- 5 ನೇ ಹಂತದಲ್ಲಿ 48 ಗಂಟೆಗಳನ್ನು ಕಳೆದ 50 ಮೊಟ್ಟೆಗಳಿಂದ ಬೆಳೆದ ಹುಳುಗಳ ಮೇಲೆ ಸಿಂಪಡಿಸಿ

ಉಪಯೋಗಗಳು

- 100 ಮೊಟ್ಟೆಗೆ 1 ಕೆ.ಜಿ.ಯಷ್ಟು ರೇಷ್ಮೆ ಅಥವಾ 6–12 ಕೆ.ಜಿ.ಯಷ್ಟು ಗೂಡಿನ ಇಳುವರಿಯಲ್ಲಿ ಹೆಚ್ಚಳ
- ಗೂಡಿನ ಇಳುವರಿ ಶೇ. 15 ರವರೆಗೆ ಹೆಚ್ಚಾಗುತ್ತದೆ
- 100 ಮೊಟ್ಟೆಗೆ ನಿವ್ವಳ ಲಾಭ ರೂ. 700–1,200

ಉಪಯುಕ್ತ

ಶೇಕಡಾವಾರು ಕವಚದ ಅಂಶದ ಮೇಲೆ ಯಾವುದೆ ವ್ಯತಿರಿಕ್ತ ಪರಿಣಾಮ ಉಂಟಾಗದೆ ಗೂಡು ಮತ್ತು ಕವಚದ ತೂಕವನ್ನು ಶೇ. 12–15 ರಷ್ಟು ಹೆಚ್ಚಿಸುತ್ತದೆ

ಇದನ್ನು ಮಾಡಿ

- ಸಮೃದ್ಧಿಯನ್ನು 5ನೇ ಹಂತದಲ್ಲಿ 48 ಗಂಟೆಗಳನ್ನು ಕಳೆದ ದ್ವಿತಳಿ ಅಥವಾ 24 ಗಂಟೆಗಳನ್ನು ಕಳೆದ ಮಿಶ್ರ ತಳಿ ರೇಷ್ಮೆ ಹುಳುಗಳ ಮೇಲೆ ಉಪಯೋಗಿಸಿ
- ಸಮೃದ್ಧಿಯನ್ನು ನೀರಿನಲ್ಲಿ ಸಂಪೂರ್ಣವಾಗಿ ಮಿಶ್ರಣ ಮಾಡಿದ ನಂತರವಷ್ಟೇ ರೇಷ್ಮೆ ಹುಳುಗಳ ಮೇಲೆ ಸಿಂಪಡಿಸಿ
- ಸಮೃದ್ಧಿಯನ್ನು ಸೊಪ್ಪು ಕೊಡುವುದಕ್ಕೂ ಮೊದಲೇ (ಬೆಳಗಿನ ಹೊತ್ತಿನಲ್ಲಿ) ಸಿಂಪಡಿಸಿ

ಇದನ್ನು ಮಾಡಬೇಡಿ

- ಸೊಪ್ಪು ಸಾಕಷ್ಟು ಪ್ರಮಾಣದಲ್ಲಿ ಇಲ್ಲದಿದ್ದಲ್ಲಿ ಸಮೃದ್ಧಿಯನ್ನು ಉಪಯೋಗಿಸಬಾರದು
- ಸಿಂಪಡಿಸಿದ ತಕ್ಷಣ ಹುಳುಗಳಿಗೆ ಸೊಪ್ಪನ್ನು ನೀಡಬಾರದು, ಕನಿಷ್ಠ 30 ನಿ. ಕಾಯಬೇಕು
- ಸಿಂಪಡಣೆಗೊಳಗಾದ ಹುಳುಗಳನ್ನು ಹಣ್ಣಾಗುವವರೆಗೂ ಚಂದ್ರಿಕೆಯ ಮೇಲೆ ಬಿಡಬಾರದು

ಚಾಕಿ ರೇಷ್ಮೆಹುಳು ಸಾಕಾಣಿಕಾ ಮನೆಗಳು

- ಅಭಿವೃದ್ಧಿಪಡಿಸಿದ ವರ್ಷ: 2002

ಪ್ರಮುಖ ಅಂಶಗಳು

- ಚಾಕಿ ಹುಳು ಸಾಕಾಣಿಕೆಗೆ ಅಗತ್ಯವಿರುವ ಉಷ್ಣಾಂಶ (27-28^0 ಸೆಂಟಿ ಗ್ರೇಡ್) ಮತ್ತು ಶೈತ್ಯಾಂಶ (85-90%) ವನ್ನು ಸೃಷ್ಟಿಸಬಹುದು ಹಾಗೂ ನಿರ್ವಹಿಸಬಹುದು
- ಚಾಕಿ ಸಾಕಾಣಿಕೆಯ ಹಜಾರ: ಗೋಡೆಯಿಂದ ಗೋಡೆಗೆ 8 ಮೀ × 8 ಮೀ (25 ಅಡಿ × 25 ಅಡಿ), ಎತ್ತರ ಗೋಡೆಗಳ ಬದಿಯಲ್ಲಿ 10 ಅಡಿ ಹಾಗೂ ಮಧ್ಯ ಭಾಗದಲ್ಲಿ 14 ಅಡಿ. ಈ ಅಳತೆ 5,000 ಮೊಟ್ಟೆಗಳನ್ನು ಚಾಕಿ ಸಾಕಾಣಿಕೆ ಮಾಡಲು ಸಾಕಾಗುತ್ತದೆ
- ಸೊಪ್ಪು ಮತ್ತು ಉಪಕರಣಗಳನ್ನು ಸಂಗ್ರಹಿಸಲು ಪ್ರತ್ಯೇಕ ಕೊಠಡಿಗಳು ಅವಶ್ಯಕ
- ನೈರ್ಮಲ್ಯತೆಯನ್ನು ಕಾಪಾಡಿಕೊಳ್ಳಲು ಪ್ರವೇಶ ದ್ವಾರದಲ್ಲಿ ಒಂದು ಉಪಕೋಣೆಯ ವ್ಯವಸ್ಥೆ ಇರಬೇಕು
- ಹುಳು ಸಾಕಣೆ ಹಜಾರದ ಸುತ್ತ ಮುಕ್ತ ಜಗುಲಿ

ಉಪಯೋಗಗಳು

- ಅಗತ್ಯವಿರುವ ಶೈತ್ಯಾಂಶ ಮತ್ತು ಉಷ್ಣಾಂಶವನ್ನು ನಿರ್ವಹಿಸಲು ಅನುಕೂಲಕರವಾಗಿದೆ
- ಸಂಪೂರ್ಣ ಸೋಂಕು ನಿವಾರಣೆ ಹಾಗೂ ನೈರ್ಮಲ್ಯತೆಯ ನಿರ್ವಹಣೆ ಸಾಧ್ಯ

ದೊಡ್ಡ ಪ್ರಮಾಣದಲ್ಲಿ ವಾಣಿಜ್ಯ ಚಾಕಿ ಸಾಕಣೆಗೆ ಸೂಕ್ತ

ಬೆಲೆ: ` 3.0 ಲಕ್ಷ ರೂ.ಗಳು

ಇದನ್ನು ಮಾಡಿ

- ಕಟ್ಟಡವನ್ನು ಯೋಜನೆ ಪ್ರಕಾರ ಕಟ್ಟಿರಿ
- ಸಾಕಷ್ಟು ಗಾಳಿಯ ಸಂಚಾರ ಮತ್ತು ಬೆಳಕು ಇರುವಂತೆ ನೋಡಿಕೊಳ್ಳಿ

ಇದನ್ನು ಮಾಡಬೇಡಿ

- ಹುಳು ಸಾಕಣೆ ಮನೆಯೊಳಗೆ ಸೊಪ್ಪನ್ನು ಸಂಗ್ರಹಿಸಬೇಡಿ



ಪ್ರೌಢ ಹಂತದ ರೇಷ್ಮೆಹುಳು ಸಾಕಾಣಿಕಾ ಮನೆಗಳು

- ಅಭಿವೃದ್ಧಿಪಡಿಸಿದ ವರ್ಷ: 2007

ಪ್ರಮುಖ ಅಂಶಗಳು

- ರೇಷ್ಮೆ ಹುಳು ಸಾಕಾಣಿಕೆಗೆ ಅಗತ್ಯವಿರುವ ಪರಿಸರ ಸ್ಥಿತಿಗತಿಗಳ ನಿರ್ವಹಣೆ ಸುಗಮಗೊಳಿಸುತ್ತದೆ
- ದ್ವಿತಳಿ ಮತ್ತು ಮಿಶ್ರತಳಿ ಎರಡನ್ನೂ ಬೆಳೆಸಲು ಸೂಕ್ತವಾಗಿದೆ
- ಹುಳು ಸಾಕಾಣಿಕೆಯ ಹಜಾರದ ಅಳತೆ: 6 ಮೀ × 6 ಮೀ (20 × 20 ಅಡಿ) ಇದು 100 ಮೊಟ್ಟೆ ಸಾಕಾಣಿಕೆಗೆ; ಪ್ರತೀ ಹೆಚ್ಚುವರಿ 100 ಮೊಟ್ಟೆಗೆ ಹಜಾರದ ಉದ್ದವನ್ನು 6 ಮೀಟರ್‌ನಷ್ಟು ವಿಸ್ತರಿಸಿ
- ಎತ್ತರ: ಮಧ್ಯದಲ್ಲಿ 14 ಅಡಿ ಮತ್ತು ಗೋಡೆಗಳ ಬದಿಯಲ್ಲಿ 10 ಅಡಿ (ಸ್ಲಾ್ಯಂಡ್‌ನ 5 ಹಂತಗಳು ಹಿಡಿಸುವಂತೆ)

ಉಪಯೋಗಗಳು

- ಸೊಪ್ಪಿನ ಸಂಗ್ರಹಣೆಗೆ ಪ್ರತ್ಯೇಕ ಕೋಣೆ, ನೈರ್ಮಲ್ಯತೆ ಕಾಪಾಡಲು ಮತ್ತು ಕೀಟಪೀಡೆ ಹಾಗೂ ಭಕ್ಷಕ ಜೀವಿಗಳ ಪ್ರವೇಶ ನಿರ್ಬಂಧಿಸಲು ಉಪಕೋಣೆ ಅನುಕೂಲಕರವಾಗಿದೆ
- ಪರಿಣಾಮಕಾರಿ ಸೋಂಕು ನಿವಾರಣೆ ಹಾಗೂ ಹುಳು ಸಾಕಣೆ ಪರಿಸರದ ನಿರ್ವಹಣೆ ಸಾಧ್ಯ

ಉಪಯುಕ್ತತೆ

ಗುಣಮಟ್ಟದ ರೇಷ್ಮೆ ಗೂಡಿನ ಉತ್ಪಾದನೆ ಮೂಲಕ ದೀರ್ಘಾವಧಿಯ ಪ್ರಯೋಜನಗಳು

ಬೆಲೆ: 1000 ಚದರ ಅಡಿಗೆ ` 4.0 ಲಕ್ಷ ರೂಗಳು (250 ಮೊಟ್ಟೆ ಸಾಕಾಣಿಕೆಗೆ)

ಇದನ್ನು ಮಾಡಿ

- ಯೋಜನೆಯ ರೀತಿಯಲ್ಲಿಯೇ ಕಟ್ಟಡವನ್ನು ಕಟ್ಟಿರಿ

ಇದನ್ನು ಮಾಡಬೇಡಿ

- ಹುಳು ಸಾಕಣೆ ಮನೆಯೊಳಗೆ ಸೊಪ್ಪನ್ನು ಸಂಗ್ರಹಿಸಬೇಡಿ

ಚಾಕಿ ಹುಳು ಸಾಕಾಣಿಕೆಗೆ ಪಿವಿಸಿ ನಿಲುವುಗಳು (ಸ್ಟ್ಯಾಂಡ್‌ಗಳು)

- ಅಭಿವೃದ್ಧಿಪಡಿಸಿದ ವರ್ಷ: 2004

ಪ್ರಮುಖ ಅಂಶಗಳು

- ರೇಷ್ಮೆ ಬೆಳೆಗಾರರು ಖಿದ್ದಾಗಿ ತಾವೇ ಹುಳು ಸಾಕಾಣಿಕಾ ಮನೆಯೊಳಗೆ ನಿಲುವುಗಳನ್ನು ಜೋಡಿಸಿಕೊಳ್ಳಬಹುದು
- ತುಕ್ಕು ಹಿಡಿಯುವ ಸಂಭವವೇ ಇಲ್ಲದಿರುವುದರಿಂದ ಸೋಂಕು ನಿವಾರಕಗಳು ನಿಲುವುಗಳಿಗೆ ಯಾವುದೇ ರೀತಿಯ ಹಾನಿಯನ್ನು ಉಂಟುಮಾಡುವುದಿಲ್ಲ
- ಲೋಹದ ನಿಲುವುಗಳಿಗಿಂತ ಪಿವಿಸಿ ನಿಲುವುಗಳು ಶೇ. 40 ರಷ್ಟು ಅಗ್ಗವಾಗಿದೆ
- ತೂಕದಲ್ಲಿ ಬಹಳ ಹಗುರವಾದ್ದರಿಂದ ಸುಲಭವಾಗಿ ಸ್ಥಳಾಂತರಿಸಬಹುದಾಗಿದೆ
- ಶಾಖವನ್ನು ಹೀರಿಕೊಳ್ಳುವುದಿಲ್ಲ ಅಥವಾ ಬಿಟ್ಟುಕೊಡುವುದಿಲ್ಲ. ಆದ್ದರಿಂದ ಒಳಗೆ ಇರುವ ಉಷ್ಣಾಂಶದಲ್ಲಿ ಯಾವುದೇ ಬದಲಾವಣೆ ತರುವುದಿಲ್ಲ

ಉಪಯೋಗಗಳು

- ನಿರ್ವಹಣೆ ಸರಾಗ ಹಾಗೂ ಧೀರ್ಘಕಾಲ ಬಾಳಿಕೆ ಬರುವುದರಿಂದ ಲಾಭದಾಯಕವಾಗಿದೆ

ವಾಣಿಜ್ಯ ಚಾಕಿ ಸಾಕಾಣಿಕಾ ಕೇಂದ್ರಗಳಿಗೆ ಹೆಚ್ಚು ಸೂಕ್ತ

ಬೆಲೆ: 100 ತಟ್ಟೆಗಳನ್ನಿಡಲು ಸಾಧ್ಯವಿರುವ ಒಂದು ನಿಲುವಿಗೆ ರೂ. ` 12,000/-

ಇದನ್ನು ಮಾಡಿ

- ಜೋಡಣೆಗೆ ಗುಣಮಟ್ಟದ ವಸ್ತುಗಳನ್ನೇ ಉಪಯೋಗಿಸಿ

ಇದನ್ನು ಮಾಡಬೇಡಿ

- ಪಿವಿಸಿ ಯೂನಿಟ್‌ಗಳನ್ನು ಸೋಂಕು ನಿವಾರಣೆ ಮಾಡಲು ಫ್ಲೇಮ್ ಗನ್ ಉಪಯೋಗಿಸಬೇಡಿ

ಪ್ರೌಢ ಹಂತದ ರೇಷ್ಮೆ ಹುಳು ಸಾಕಾಣಿಕೆಗೆ ಪಿವಿಸಿ ನಿಲುವುಗಳು

- ಅಭಿವೃದ್ಧಿಪಡಿಸಿದ ವರ್ಷ: 2016

ಪ್ರಮುಖ ಅಂಶಗಳು

- ಹೆಚ್ಚು ಕಾಲ ಬಾಳಿಕೆ ಬರುತ್ತವೆ
- ತೂಕದಲ್ಲಿ ಹಗುರ
- ತುಕ್ಕು ಹಿಡಿಯುವುದಿಲ್ಲ
- ಸ್ವಚ್ಚ ಮಾಡಲು ಹಾಗೂ ಸೋಂಕು ನಿವಾರಣೆ ಮಾಡಲು ಸುಲಭ
- ನಿಲುವುಗಳನ್ನು ರಚಿಸಲು ಸುಲಭ

ಉಪಯೋಗಗಳು

- ಯಾವುದೇ ರೇಷ್ಮೆ ಹುಳು ಸಾಕಾಣಿಕಾ ವಿದ್ಯಮಾನದಲ್ಲೂ ನಿರ್ವಹಣೆ ಸುಲಭ
- ಪಿವಿಸಿ ಶಾಖವನ್ನು ಹೀರಿಕೊಳ್ಳುವುದಿಲ್ಲವಾದ್ದರಿಂದ ಶಕ್ತಿಯ ಉಳಿತಾಯವಾಗಲಿದೆ
- ಚರಣಿಗೆಗಳ ನಡುವಿನ ಅಂತರವನ್ನು ಅವಶ್ಯಕತೆಗೆ ಅನುಗುಣವಾಗಿ ಬದಲಾಯಿಸಿ ಕೊಳ್ಳಬಹುದು

ದೊಡ್ಡ ಪ್ರಮಾಣದ ರೇಷ್ಮೆ ಹುಳು ಸಾಕಾಣಿಕೆಗೆ ಸೂಕ್ತ

ಬೆಲೆ: ಒಂದು ಚದರ ಅಡಿಗೆ ` 60/-

ಇದನ್ನು ಮಾಡಿ

- ಜೋಡಣೆಗೆ ಒಳ್ಳೆಯ ಗುಣಮಟ್ಟದ ವಸ್ತುಗಳನ್ನೇ ಉಪಯೋಗಿಸಿ

ಇದನ್ನು ಮಾಡಬೇಡಿ

- ಪಿವಿಸಿ ಯೂನಿಟ್‌ಗಳನ್ನು ಸೋಂಕು ನಿವಾರಣೆ ಮಾಡಲು ಫ್ಲೇಮ್ ಗನ್ ಉಪಯೋಗಿಸಬೇಡಿ

ಯಾಂತ್ರೀಕರಣ

ಹಿಪ್ಪುನೇರಳೆ ಬಿತ್ತನೆ ಕಡ್ಡಿ ತಯಾರಿಸುವ ಯಂತ್ರ

- ಅಭಿವೃದ್ಧಿಪಡಿಸಿದ ವರ್ಷ: 1995

ಪ್ರಮುಖ ಅಂಶಗಳು

- ಹಿಪ್ಪುನೇರಳೆ ಬಿತ್ತನೆ ಕಡ್ಡಿ ತಯಾರಿಕೆಯು ವೇಗವಾಗಿ ಮತ್ತು ಪರಿಣಾಮಕಾರಿಯಾಗಿ ಆಗುತ್ತದೆ
- ತಯಾರಿಸಿದ ಕಡ್ಡಿಗಳು ಯಾವುದೇ ಗಾಯಗಳಿಲ್ಲದೆ ಉತ್ತಮ ಗುಣಮಟ್ಟದ್ದಾಗಿರುತ್ತವೆ
- ಇದು ಒಂದು ವಿದ್ಯುತ್ ಚಾಲಿತ ಯಂತ್ರ

ಉಪಯೋಗಗಳು

- ಒಬ್ಬ ಕೆಲಸಗಾರನು ಒಂದು ದಿನಕ್ಕೆ 1,500–2,000 ಕಡ್ಡಿಗಳನ್ನು ತಯಾರಿಸಬಹುದು, ಆದರೆ ಈ ಯಂತ್ರವು ಒಂದು ಗಂಟೆಗೆ 1,200–1,400 ಕಡ್ಡಿಗಳನ್ನು ತಯಾರಿಸುತ್ತದೆ
- ಈ ಯಂತ್ರವು ಬಿತ್ತನೆ ಕಡ್ಡಿ ತಯಾರಿಕೆಯಲ್ಲಿನ ಪರಿಶ್ರಮವನ್ನು ಕಡಿಮೆ ಮಾಡುತ್ತದೆ

- ಬಿತ್ತನೆ ಕಡ್ಡಿ ತಯಾರಿಕೆ ಬಹಳ ಸುಲಭ
- ಕಾರ್ಮಿಕ ವೆಚ್ಚ ಹಾಗೂ ಸಮಯದಲ್ಲಿ ಉಳಿತಾಯ
- ಕಡ್ಡಿಗಳಿಗೆ ಹಾನಿಯಾಗುವುದನ್ನು ತಪ್ಪಿಸುತ್ತದೆ

ಬೆಲೆ: ` 10,000/-

ಇದನ್ನು ಮಾಡಿ

- ಕತ್ತರಿಸುವ ಬ್ಲೇಡ್ ವಿರುದ್ಧ ರೆಂಬೆಗಳನ್ನು ದೃಢವಾಗಿ ಹಿಡಿಯಿರಿ

ಇದನ್ನು ಮಾಡಬೇಡಿ

- ಬಿತ್ತನೆ ಕಡ್ಡಿ ತಯಾರಿಸುವಾಗ ತುಂಬಾ ದಪ್ಪಗಿರುವ ರೆಂಬೆಗಳನ್ನು ಬಳಸಬೇಡಿ

ಹಿಪ್ಪುನೇರಳೆ ಸೊಪ್ಪು ಕತ್ತರಿಸುವ ಯಂತ್ರ

- ಅಭಿವೃದ್ಧಿಪಡಿಸಿದ ವರ್ಷ: 2001

ಪ್ರಮುಖ ಅಂಶಗಳು

- ಒಂದು ಗಂಟೆಗೆ 150–175 ಕೆ.ಜಿ. ಹಿಪ್ಪುನೇರಳೆ ಸೊಪ್ಪನ್ನು ಕತ್ತರಿಸಬಹುದು
- ಈ ಯಂತ್ರವು 1/2 ಹೆಚ್.ಪಿ. ವಿದ್ಯುಚ್ಛಕ್ತಿ ಮೋಟರ್‌ನಿಂದ ಓಡುತ್ತದೆ
- ಈ ಯಂತ್ರವನ್ನು ಕೈಯಿಂದಲೂ ಕೂಡ ಚಲಾಯಿಸಬಹುದು

ಉಪಯೋಗಗಳು

- ಕಡಿಮೆ ಸಮಯದಲ್ಲಿ ಹೆಚ್ಚು ಪ್ರಮಾಣದ ಹಿಪ್ಪುನೇರಳೆ ಸೊಪ್ಪನ್ನು ಕತ್ತರಿಸಬಹುದು
- ಸೊಪ್ಪನ್ನು ಹುಳುಗಳ ಹಂತಕ್ಕನುಗುಣವಾಗಿ ಬೇರೆ ಬೇರೆ ಗಾತ್ರಗಳಲ್ಲಿ ಕತ್ತರಿಸಬಹುದು

- ಅಲ್ಪ ಅವಧಿಯಲ್ಲಿ ಬೃಹತ್ ಪ್ರಮಾಣದ ಸೊಪ್ಪನ್ನು ಕತ್ತರಿಸಲು ಅನುಕೂಲ
- ವಾಣಿಜ್ಯ ಚಾಕಿ ಕೇಂದ್ರಗಳಲ್ಲಿ ಹೆಚ್ಚು ಪ್ರಮಾಣದ ಹುಳುಗಳನ್ನು ನಿರ್ವಹಿಸಲು ಉಪಯುಕ್ತ

ಬೆಲೆ: ` 30,000/-

ಇದನ್ನು ಮಾಡಿ

- ಕತ್ತರಿಸುವ ಸಲುವಾಗಿ ಎಲೆಗಳನ್ನು ಯಂತ್ರದೊಳಗೆ ನವಿರಾಗಿ ಹಾಕಿ
- ಯಂತ್ರದ ಸುತ್ತ ಮುತ್ತ ಕೆಲಸ ಮಾಡಲು ಸಾಕಷ್ಟು ಸ್ಥಳಾವಕಾಶ ಕಲ್ಪಿಸಿ

ಇದನ್ನು ಮಾಡಬೇಡಿ

- ಕೈಯಿಂದ ಕಾರ್ಯ ನಿರ್ವಹಿಸುವಾಗ ವಿದ್ಯುತ್ ಪೂರೈಕೆ ಕೊಡಬೇಡಿ

ಹಿಪ್ಪುನೇರಳೆ ರೆಂಬೆ ಪುಡಿಮಾಡುವ ಯಂತ್ರ

- ಅಭಿವೃದ್ಧಿಪಡಿಸಿದ ವರ್ಷ: 1995

ಪ್ರಮುಖ ಅಂಶಗಳು

- ಈ ಯಂತ್ರವು ರೇಷ್ಮೆ ಕೃಷಿಯಲ್ಲಿ ದೊರಕುವ ತ್ಯಾಜ್ಯ ವಸ್ತುವಿನಿಂದ ಗೊಬ್ಬರ ಹಾಗೂ ಎರೆ ಗೊಬ್ಬರ ತಯಾರಿಸಲು ಉಪಯೋಗವಾಗುತ್ತದೆ
- ಈ ಯಂತ್ರವು ತೆಂಗಿನ ಸೋಗೆಯೂ ಸೇರಿದಂತೆ ಎಲ್ಲಾ ತರಹದ ಸಸ್ಯ ಪದಾರ್ಥಗಳನ್ನು ಕತ್ತರಿಸಿ ಪುಡಿ ಮಾಡುತ್ತದೆ
- ಈ ಯಂತ್ರವು 5 ಹೆಚ್.ಪಿ. ವಿದ್ಯುಚ್ಛಕ್ತಿ ಮೋಟರ್‌ನಿಂದ ಓಡುತ್ತದೆ

ಉಪಯೋಗಗಳು

- ಜೈವಿಕ ವಿಭಜಕ ವಸ್ತುಗಳನ್ನು ಗೊಬ್ಬರ ಅಥವಾ ಎರೆಗೊಬ್ಬರವಾಗಿ ಪರಿವರ್ತನೆಗೊಳ್ಳಲು ಅನುಕೂಲ ಮಾಡಿಕೊಡುತ್ತದೆ
- ಸಮಯ ಮತ್ತು ಶಕ್ತಿಯನ್ನು ಉಳಿಸುತ್ತದೆ

ಈ ಯಂತ್ರವು ಹಿಪ್ಪುನೇರಳೆ ರೆಂಬೆಗಳನ್ನು ಸಣ್ಣ ಸಣ್ಣ ತುಂಡುಗಳನ್ನಾಗಿ ಕತ್ತರಿಸಿ ಬಹಳ ಬೇಗನೆ ವಿಭಜನೆ ಹೊಂದಲು ಅನುವು ಮಾಡಿಕೊಡುತ್ತದೆ

ಬೆಲೆ: ` 40,000/-

ಇದನ್ನು ಮಾಡಿ

- ಪುಡಿಮಾಡಲು ರೆಂಬೆಗಳನ್ನು ಮಧ್ಯಮ ಪ್ರಮಾಣದಲ್ಲಿ ತುಂಬಿರಿ

ಇದನ್ನು ಮಾಡಬೇಡಿ

- ತುಂಬಾ ಗಟ್ಟಿಯಾಗಿರುವ ಮರದ ಭಾಗಗಳನ್ನು ಯಂತ್ರದ ಒಳಗೆ ತುಂಬಬಾರದು

ಚಾಕಿ ಸಾಕಾಣಿಕೆಯಲ್ಲಿ ಧೂಳು ಉದುರಿಸುವ ಯಂತ್ರ

- ಅಭಿವೃದ್ಧಿಪಡಿಸಿದ ವರ್ಷ: 2014

ಪ್ರಮುಖ ಅಂಶಗಳು

- ಚಾಕಿ ರೇಷ್ಮೆ ಹುಳುಗಳ ಮೇಲೆ ಸುಣ್ಣ ಹಾಗೂ ಹಾಸಿಗೆ ಸೋಂಕು ನಿವಾರಕಗಳನ್ನು ಉದುರಿಸಲು ಅನುವು ಮಾಡಿಕೊಡುತ್ತದೆ
- ಇದು ಒಂದು ವಿದ್ಯುತ್ ಚಾಲಿತ ಯಂತ್ರ

ಉಪಯೋಗಗಳು

- ದಕ್ಷ ಮತ್ತು ಧೀರ್ಘಕಾಲ ಬಾಳಿಕೆ ಬರುವಂಥದ್ದಾಗಿದೆ
- ಬಳಕೆದಾರ ಸ್ನೇಹಿ ಯಂತ್ರ

ಚಾಕಿ ಸಾಕಾಣಿಕಾ ಕೇಂದ್ರಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ತಟ್ಟೆಗಳನ್ನು ನಿರ್ವಹಿಸಬೇಕಾಗಿರುವುದರಿಂದ ಇದು ತುಂಬಾ ಪ್ರಯೋಜನಕಾರಿ ಸಮರ್ಥ ಮತ್ತು ವಿಕರೂಪದಲ್ಲಿ ಧೂಳು ಉದುರುವುದನ್ನು ಖಾತ್ರಿಗೊಳಿಸುತ್ತದೆ.

ಬೆಲೆ: ` 30,000/-

ಇದನ್ನು ಮಾಡಿ

- ನಯವಾದ ಮತ್ತು ಉಂಡೆಗಳಿಲ್ಲದ ಸುಣ್ಣ ಮತ್ತು ಹಾಸಿಗೆ ಸೋಂಕು ನಿವಾರಕಗಳನ್ನು ಬಳಸಿ

ಇದನ್ನು ಮಾಡಬೇಡಿ

- ತೇವ ಮತ್ತು ಒದ್ದೆಯಾಗಿರುವ ಪುಡಿಗಳನ್ನು ಈ ಯಂತ್ರದಲ್ಲಿ ಬಳಸಬೇಡಿ

ಹಣ್ಣು ಹುಳು ವಿಂಗಡಕ

- ಅಭಿವೃದ್ಧಿಪಡಿಸಿದ ವರ್ಷ: 2002

ಪ್ರಮುಖ ಅಂಶಗಳು

- ಸಣ್ಣ ಮತ್ತು ಮಧ್ಯಮ ಪ್ರಮಾಣದ ರೈತರಿಗೆ ಮಾನವ ಚಾಲಿತ ಹಾಗೂ ದೊಡ್ಡ ಪ್ರಮಾಣದ ರೈತರಿಗೆ ಮೋಟರ್ ಚಾಲಿತ ವಿಂಗಡಕಗಳು ಲಭ್ಯ

ಉಪಯೋಗಗಳು

- ಹಿಪ್ಪುನೇರಳೆ ರೆಂಬೆಗಳಿಂದ ಹಣ್ಣು ಹುಳುಗಳನ್ನು ಬೇರ್ಪಡಿಸಲು ಅನುವು ಮಾಡಿಕೊಡುತ್ತದೆ
- ಮಾನವ ಚಾಲಿತ ಯಂತ್ರವು ಒಂದು ಗಂಟೆಯಲ್ಲಿ ಸುಮಾರು 40–50 ಮೊಟ್ಟೆಯ ಹುಳುಗಳನ್ನು ವಿಂಗಡಣೆ ಮಾಡುತ್ತದೆ
- ಮೋಟರ್ ಚಾಲಿತ ಯಂತ್ರವು ಒಂದು ಗಂಟೆಯಲ್ಲಿ 125 ಕ್ಕೂ ಹೆಚ್ಚು ಮೊಟ್ಟೆಯ ಹುಳುಗಳನ್ನು ವಿಂಗಡಣೆ ಮಾಡುತ್ತದೆ

- ಸಮಯ ಮತ್ತು ಮಾನವ ಶಕ್ತಿಯ ಉಳಿತಾಯ
- ಹಾಸಿಗೆಯಲ್ಲಿ ಗೂಡು ಕಟ್ಟುವುದನ್ನು ತಪ್ಪಿಸಬಹುದು

ಬೆಲೆ: ಮಾನವ ಚಾಲಿತ ಯಂತ್ರ ` 6,000/-;
ಮೋಟರ್ ಚಾಲಿತ ಯಂತ್ರ ` 10,000/-

ಇದನ್ನು ಮಾಡಿ

- ವಿಂಗಡಣೆ ಮಾಡುವಾಗ ನವಿರಾಗಿ ಮಾಡಿದರೆ ಸಾಕು
- ಹುಳುಗಳಿಗೆ ಹಾನಿಯಾಗುವುದನ್ನು ತಪ್ಪಿಸಲು ಎಚ್ಚರಿಕೆಯಿಂದ ವಿಂಗಡಿಸಿ

ಇದನ್ನು ಮಾಡಬೇಡಿ

- ಹುಳು ಹಣ್ಣಾಗದ ಹೊರತು ಬೇರ್ಪಡಿಸಬೇಡಿ

ಕೋಣೆಯ ಉಷ್ಣಾಂಶ ಹೆಚ್ಚಿಸುವ ಯಂತ್ರ
(ಸೆರಿ ರೂಂ ಹೀಟರ್)

- ಅಭಿವೃದ್ಧಿಪಡಿಸಿದ ವರ್ಷ: 2006

ಪ್ರಮುಖ ಅಂಶಗಳು

- ಇದು ಒಂದು ವಿದ್ಯುತ್ ಚಾಲಿತ ಯಂತ್ರ
- ಹುಳುಸಾಕಾಣಿಕೆ ಮನೆಯೊಳಗೆ ಉಷ್ಣಾಂಶವನ್ನು ನಿರ್ವಹಿಸಲು ಸೂಕ್ತವಾಗಿದೆ

ಉಪಯೋಗಗಳು

- ದಕ್ಷ ಮತ್ತು ಧೀರ್ಘಕಾಲ ಬಾಳಿಕೆ ಬರುವಂಥದ್ದಾಗಿದೆ

ಹುಳುಸಾಕಾಣಿಕೆ ಮನೆಯಲ್ಲಿ ಅಗತ್ಯವಿರುವ ಉಷ್ಣಾಂಶವನ್ನು ನಿರ್ವಹಿಸುತ್ತದೆ

ಬೆಲೆ: ` 5,000/-

ಇದನ್ನು ಮಾಡಿ

- ಸಮತಟ್ಟಾದ ನೆಲದ ಮೇಲೆ ಇರಿಸಿ

ಇದನ್ನು ಮಾಡಬೇಡಿ

- ತೆರೆದ ರೀತಿಯ ಹುಳುಸಾಕಣೆ ಮನೆಗಳಲ್ಲಿ ಇದನ್ನು ಉಪಯೋಗಿಸಬೇಡಿ

ಶೈತ್ಯಾಂಶ ಮತ್ತು ಉಷ್ಣಾಂಶ ಹೆಚ್ಚಿಸುವ ಯಂತ್ರ

- ಅಭಿವೃದ್ಧಿಪಡಿಸಿದ ವರ್ಷ: 2007

ಪ್ರಮುಖ ಅಂಶಗಳು

- ಇದು ಶೈತ್ಯಾಂಶ ಮತ್ತು ಉಷ್ಣಾಂಶ ಎರಡನ್ನೂ ನಿರ್ವಹಿಸುವ ಯಂತ್ರ
- ಇದು ವಿದ್ಯುತ್ ಚಾಲಿತ ಯಂತ್ರ

ಉಪಯೋಗಗಳು

- ಹುಳುಸಾಕಾಣಿಕೆ ಮನೆಯೊಳಗೆ ಬಯಸಿದ ಶೈತ್ಯಾಂಶ ಮತ್ತು ಉಷ್ಣಾಂಶವನ್ನು ನಿರ್ವಹಿಸಬಹುದು

- ಚಾಕಿ ಹುಳು ಸಾಕಾಣಿಕೆಗೆ ಹೆಚ್ಚು ಸೂಕ್ತ
- ಬೇಸಿಗೆಯಲ್ಲಿ ಚಾಕಿ ಹುಳು ಸಾಕಾಣಿಗೆ ಅಗತ್ಯವಿರುವ ಶೈತ್ಯಾಂಶವನ್ನು ಕಾಪಾಡಿಕೊಳ್ಳಬಹುದು

ಬೆಲೆ: ` 16,000/-

ಇದನ್ನು ಮಾಡಿ

- ಯಂತ್ರದಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರು ಇರುವುದನ್ನು ಖಚಿತಪಡಿಸಿಕೊಳ್ಳಿ
- ಹುಳುವಿನ ಅಗತ್ಯಕ್ಕೆ ಹೊಂದಿಕೆಯಾಗುವಂತೆ ಉಷ್ಣಾಂಶವನ್ನು ಇಟ್ಟುಕೊಳ್ಳಿ

ಇದನ್ನು ಮಾಡಬೇಡಿ

- ತೆರೆದ ರೀತಿಯ ಹುಳುಸಾಕಣೆ ಮನೆಗಳಲ್ಲಿ ಇದನ್ನು ಉಪಯೋಗಿಸಬೇಡಿ

ಪ್ಲಾಸ್ಟಿಕ್ ತಟ್ಟೆಗಳ ಶುದ್ಧೀಕರಣ ಯಂತ್ರ

- ಅಭಿವೃದ್ಧಿಪಡಿಸಿದ ವರ್ಷ: 2015

ಪ್ರಮುಖ ಅಂಶಗಳು

- ಚಾಕಿ ಸಾಕಾಣಿಕಾ ಕೇಂದ್ರ ಹಾಗೂ ಮೊಟ್ಟೆ ಉತ್ಪಾದನಾ ಕೇಂದ್ರಗಳಲ್ಲಿ ನೈರ್ಮಲ್ಯತೆ ಕಾಪಾಡಲು ಅನುವು ಮಾಡಿಕೊಡುತ್ತದೆ
- ಚಾಕಿ ಸಾಕಾಣಿಕಾ ಕೇಂದ್ರಗಳಲ್ಲಿ ಪರಿಣಾಮಕಾರಿ ನಿರ್ವಹಣೆಗೆ ನೆರವಾಗುತ್ತದೆ
- ಒತ್ತಡದಿಂದ ನೀರನ್ನು ಸಿಂಪಡಿಸುವ ಮತ್ತು ಸುಸಜ್ಜಿತವಾಗಿ ಉಜ್ಜುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ

ಉಪಯೋಗಗಳು

- ತ್ವರಿತ ಮತ್ತು ಕಾರ್ಮಿಕ ವೆಚ್ಚ ಉಳಿಸುವ ಸಾಧನ
- ಖಾತರಿ ನೈರ್ಮಲ್ಯ ನಿರ್ವಹಣೆ

- ಚಾಕಿ ಸಾಕಾಣಿಕಾ ಕೇಂದ್ರ ಹಾಗೂ ಮೊಟ್ಟೆ ಉತ್ಪಾದನಾ ಕೇಂದ್ರಗಳಲ್ಲಿ ನೈರ್ಮಲ್ಯತೆ ಕಾಪಾಡಲು
- ಒಂದು ಗಂಟೆಗೆ ಸುಮಾರು 100 ತಟ್ಟೆಗಳನ್ನು ಶುದ್ಧಗೊಳಿಸುತ್ತದೆ

ಬೆಲೆ: ` 35,000/-

ಇದನ್ನು ಮಾಡಿ

- ಸಾಕಷ್ಟು ಪ್ರಮಾಣದಲ್ಲಿ ನೀರು ಮತ್ತು ಸೋಂಕುನಿವಾರಕಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಿ

ಇದನ್ನು ಮಾಡಬೇಡಿ

- ನಿರ್ದಿಷ್ಟ ಪಡಿಸಿದ ತಟ್ಟೆಗಳನ್ನು ಬಿಟ್ಟು ವಿವಿಧ ಆಯಾಮದ ತಟ್ಟೆಗಳನ್ನು ಇಡಬೇಡಿ

ರೋಟರಿ ಚಂದ್ರಿಕೆಗಳಿಂದ ಗೂಡುಗಳನ್ನು ಬಿಡಿಸುವ ಯಂತ್ರ

- ಅಭಿವೃದ್ಧಿಪಡಿಸಿದ ವರ್ಷ: 2001

ಪ್ರಮುಖ ಅಂಶಗಳು

- ರೋಟರಿ ಚಂದ್ರಿಕೆಗಳಿಂದ ಸುಲಭವಾಗಿ ಮತ್ತು ವೇಗವಾಗಿ ಗೂಡು ಬಿಡಿಸಲು ಅನುವು ಮಾಡಿಕೊಡುತ್ತದೆ
- ಕೈ ಚಾಲಿತ ಮತ್ತು ಕಾಲಿನಿಂದ ಕಾರ್ಯ ನಿರ್ವಹಿಸುವ ಯಂತ್ರಗಳು ಲಭ್ಯವಿದೆ

ಉಪಯೋಗಗಳು

- ಸಮಯ ಮತ್ತು ಮಾನವ ಶಕ್ತಿಯ ಉಳಿತಾಯ
- ಗೂಡು ಬಿಡಿಸುವಾಗ ಗೂಡುಗಳಿಗೆ ಯಾವುದೇ ಹಾನಿ ಉಂಟಾಗುವುದಿಲ್ಲ

ರೋಟರಿ ಚಂದ್ರಿಕೆಗಳಿಂದ ಗೂಡುಗಳನ್ನು ಸುಲಭವಾಗಿ ಮತ್ತು ವೇಗವಾಗಿ ಬಿಡಿಸಬಹುದು

ಬೆಲೆ: ` 8,000/-

ಇದನ್ನು ಮಾಡಿ

- ನವಿರಾಗಿ ಒತ್ತಡ ಹಾಕಿ
- ಗೂಡುಗಳನ್ನು ಹೊಂದಿರುವ ರೋಟರಿ ಫ್ರೇಮ್‌ಗಳನ್ನು ಸ್ಲಾಟ್‌ಗಳಲ್ಲಿ ಸರಿಯಾಗಿ ಕೂರಿಸಿ

ಇದನ್ನು ಮಾಡಬೇಡಿ

- ಕೈ ಚಾಲಿತ ಗೂಡು ಬಿಡಿಸುವ ಯಂತ್ರದಲ್ಲಿ ಒಂದೇ ಕಡೆ ಒತ್ತಡವನ್ನು ಹಾಕಬಾರದು

ಪ್ಲಾಸ್ಟಿಕ್ ಚಂದ್ರಿಕೆಯಿಂದ ಗೂಡುಗಳನ್ನು ಬಿಡಿಸುವ ಯಂತ್ರ

- ಅಭಿವೃದ್ಧಿಪಡಿಸಿದ ವರ್ಷ: 2015

ಪ್ರಮುಖ ಅಂಶಗಳು

- ವಿದ್ಯುತ್ ಚಾಲಿತ ಯಂತ್ರ
- ಸಮಯ ಮತ್ತು ಕಾರ್ಮಿಕ ಶ್ರಮದಲ್ಲಿ ಉಳಿತಾಯ

ಉಪಯೋಗಗಳು

- ಪ್ಲಾಸ್ಟಿಕ್ ಚಂದ್ರಿಕೆಗಳಿಂದ ಗೂಡುಗಳನ್ನು ಸುಲಭವಾಗಿ ಮತ್ತು ವೇಗವಾಗಿ ಬಿಡಿಸಬಹುದು
- ಒಂದು ಗಂಟೆಯಲ್ಲಿ 150–160 ಚಂದ್ರಿಕೆಗಳಲ್ಲಿ ಕಟ್ಟಿರುವ ಗೂಡುಗಳನ್ನು ಬಿಡಿಸಬಹುದು

ಪ್ಲಾಸ್ಟಿಕ್ ಚಂದ್ರಿಕೆಗಳಿಂದ ಸುಲಭವಾಗಿ ಗೂಡುಗಳನ್ನು ಬಿಡಿಸಬಹುದು

ಬೆಲೆ: ` 18,000/-

ಇದನ್ನು ಮಾಡಿ

- ಚಂದ್ರಿಕೆಗಳನ್ನು ಎರಡೂ ಶಾಫ್ಟ್/ಸರಳುಗಳ ಮಧ್ಯದಲ್ಲಿ ತೂರಿಸಿ ನಿಧಾನವಾಗಿ ತಳ್ಳಬೇಕು

ಇದನ್ನು ಮಾಡಬೇಡಿ

- ಒಮ್ಮೆಗೆ ಒಂದಕ್ಕಿಂತ ಹೆಚ್ಚು ಚಂದ್ರಿಕೆಗಳನ್ನು ಯಂತ್ರದೊಳಗೆ ಹಾಕಬೇಡಿ
- ಗೂಡು ಬಿಡಿಸುವ ಮುನ್ನ ಜಲ್ಲಿ ಹಾಗೂ ಜಂಟಿ ಗೂಡುಗಳನ್ನು ತೆಗೆದುಬಿಡಿ

ಗುಂಜು ಬಿಡಿಸುವ ಯಂತ್ರ

- ಅಭಿವೃದ್ಧಿಪಡಿಸಿದ ವರ್ಷ: 2002

ಪ್ರಮುಖ ಅಂಶಗಳು

- ನೇಯಲು ಅಸಾಧ್ಯವಾದ ಗುಂಜಿನ ಸಡಿಲ ಪದರವನ್ನು ಪರಿಣಾಮಕಾರಿಯಾಗಿ ತೆಗೆಯಬಹುದು
- ಮಾನವ ಚಾಲಿತ, ಮೋಟರ್ ಚಾಲಿತ ಹಾಗು ಮೋಟರ್ ಮತ್ತು ಕೈ ಚಾಲಿತ ಗುಂಜು ತೆಗೆಯುವ ಯಂತ್ರಗಳು ಲಭ್ಯವಿದೆ

ಉಪಯೋಗಗಳು

- ವೇಗವಾಗಿ ಕಾರ್ಯ ನಿರ್ವಹಿಸುವ ಮತ್ತು ಕಾರ್ಮಿಕ ಶ್ರಮ ಉಳಿತಾಯ ಸಾಧನ
- ಗುಂಜನ್ನು ಸಂಪೂರ್ಣವಾಗಿ ತೆಗೆಯುತ್ತದೆ
- ಕಡಿಮೆ ವೆಚ್ಚ

ನೇಯುವ ಮುನ್ನ ಗೂಡುಗಳನ್ನು ಗುಂಜು ತೆಗೆದು ಸ್ವಚ್ಚಗೊಳಿಸುತ್ತದೆ

ಬೆಲೆ: ಮಾನವ ಚಾಲಿತ ಯಂತ್ರ ` 2,500/-; ಮೋಟರ್ ಚಾಲಿತ ಯಂತ್ರ ` 17,000/- ಮೋಟರ್ ಮತ್ತು ಕೈ ಚಾಲಿತ ಯಂತ್ರ ` 10,000/-

ಇದನ್ನು ಮಾಡಿ

- ಗೂಡುಗಳನ್ನು ಒಂದೇ ಪದರದಲ್ಲಿ ತಳ್ಳಬೇಕು
- ಆಗಾಗ್ಗೆ ಸಂಗ್ರಹಗೊಂಡ ಗುಂಜನ್ನು ತೆಗೆದು ಸ್ವಚ್ಚಗೊಳಿಸುತ್ತಿರಬೇಕು

ಇದನ್ನು ಮಾಡಬೇಡಿ

- ಯಂತ್ರದ ಒಳಗೆ ಜಾಸ್ತಿ ಪ್ರಮಾಣದ ಗೂಡನ್ನು ಹಾಕಬೇಡಿ

ಪ್ಲಾಸ್ಟಿಕ್ ಚಂದ್ರಿಕೆ ಜೋಡಿಸುವ ಯಂತ್ರ

- ಅಭಿವೃದ್ಧಿಪಡಿಸಿದ ವರ್ಷ: 2002

ಪ್ರಮುಖ ಅಂಶಗಳು

- ಪ್ಲಾಸ್ಟಿಕ್ ಚಂದ್ರಿಕೆಗಳ ಆಕಾರವನ್ನು ನಿರ್ವಹಿಸಲು ಅನುವು ಮಾಡಿಕೊಡುತ್ತದೆ ಹೀಗೆ ಸಂಗ್ರಹಿಸಿಟ್ಟ ಪ್ಲಾಸ್ಟಿಕ್ ಚಂದ್ರಿಕೆಗಳ ಪರಿಣಾಮಕಾರಿತ್ವವು ಉತ್ತಮ ಗೂಡುಗಳನ್ನು ನೀಡುತ್ತದೆ

ಉಪಯೋಗಗಳು

- ಪ್ಲಾಸ್ಟಿಕ್ ಚಂದ್ರಿಕೆಗಳಲ್ಲಿ ಉತ್ತಮ ಆಕಾರ ನಿರ್ವಹಣೆಯಿಂದ ಒಳ್ಳೆಯ ಗೂಡುಗಳು ಉಂಟಾಗುತ್ತವೆ

ಪ್ಲಾಸ್ಟಿಕ್ ಚಂದ್ರಿಕೆಗಳನ್ನು ಮಡಿಸಿ, ಕಂತೆ ಕಟ್ಟಿ ಇರಿಸುವುದರಿಂದ ಉತ್ತಮ ಬಾಳಿಕೆ ಬರುತ್ತದೆ. ಪ್ಲಾಸ್ಟಿಕ್ ಚಂದ್ರಿಕೆಗಳು ಉಪಯೋಗದಲ್ಲಿ ಇಲ್ಲದಿದ್ದಾಗ ಸರಿಯಾಗಿ ಜೋಡಿಸಿ ಕಟ್ಟಿಡಲು ಅನುಕೂಲ

ಬೆಲೆ: ` 200/-

ಇದನ್ನು ಮಾಡಿ

- ಚಂದ್ರಿಕೆಗಳನ್ನು ಒಂದರ ನಂತರ ಒಂದರಂತೆ ಮಡಿಸಿ ಫ್ರೇಮ್‌ನೊಳಗೆ ಜೋಡಿಸಿ ಇಡಿ

ಇದನ್ನು ಮಾಡಬೇಡಿ

- ಮಡಿಸಿದ ನಂತರ ಹೊರೆಯನ್ನು ಮಾಡದೆ ಸಂರಕ್ಷಣೆ ಮಾಡಬೇಡಿ

ಬಿತ್ತನೆ ಗೂಡು ಕತ್ತರಿಸುವ ಯಂತ್ರ

- ಅಭಿವೃದ್ಧಿಪಡಿಸಿದ ವರ್ಷ: 1998

ಪ್ರಮುಖ ಅಂಶಗಳು

- ಮೊಟ್ಟೆ ಉತ್ಪಾದನಾ ಕೇಂದ್ರಗಳಲ್ಲಿ ಬಿತ್ತನೆ ಗೂಡುಗಳನ್ನು ಕತ್ತರಿಸಲು ಅನುಕೂಲ
- ಗೂಡು ಕತ್ತರಿಸುವಿಕೆಯಲ್ಲಿನ ಶ್ರಮವನ್ನು ಕಡಿಮೆ ಮಾಡುತ್ತದೆ
- ಗೂಡಿನ ಗಾತ್ರಕ್ಕನುಗುಣವಾಗಿ ಹೊಂದಿಕೆಯಾಗುತ್ತದೆ

ಉಪಯೋಗಗಳು

- ಬೀಜೋತ್ಪಾದನಾ ಕೇಂದ್ರಗಳಲ್ಲಿ ಸಮರ್ಥವಾದ ಬಿತ್ತನೆ ಗೂಡು ಕತ್ತರಿಸುವಿಕೆ
- ಒಂದು ಗಂಟೆಯಲ್ಲಿ 5,000–5,500 ಗೂಡುಗಳನ್ನು ಕತ್ತರಿಸಬಲ್ಲದು

ಉಪಯುಕ್ತತೆ

- ಬೀಜೋತ್ಪಾದನಾ ಕೇಂದ್ರಗಳಲ್ಲಿ ಬಿತ್ತನೆ ಗೂಡುಗಳನ್ನು ಸಮರ್ಥವಾಗಿ ಕತ್ತರಿಸಬಹುದು.

ಬೆಲೆ: ` 35,000/-

ಇದನ್ನು ಮಾಡಿ

- ಒಂದೇ ಸಮನಾದ ಗಾತ್ರದ ಗೂಡುಗಳನ್ನು ಆರಿಸಿ ಸ್ಲಾಟ್‌ನಲ್ಲಿ ಇರಿಸಿ

ಇದನ್ನು ಮಾಡಬೇಡಿ

- ಜಂಟಿ ಮತ್ತು ಜಲ್ಲಿ ಗೂಡುಗಳನ್ನು ಯಂತ್ರದಲ್ಲಿ ಬಿಡಬಾರದು

ಸಿಎಸ್‌ಆರ್‌ಟಿಐ–ಮೈಸೂರು

ಹಿಪ್ಪುನೇರಳೆ ರೇಷ್ಮೆ ಕೃಷಿಯಲ್ಲಿ ಉತ್ಕೃಷ್ಟತೆಯೆಡೆಗೆ

ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ಮೈಸೂರು ನಮ್ಮ ದೇಶದ ಹಿಪ್ಪುನೇರಳೆ ಉದ್ಯಮದ ಒಟ್ಟಾರೆ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಪ್ರಥಮಾನ್ವೇಶಕ ಸಂಸ್ಥೆಯಾಗಿದೆ. ರೇಷ್ಮೆ ಉತ್ಪಾದಕತೆ ಮತ್ತು ರೇಷ್ಮೆ ಕೃಷಿಕರ ಆದಾಯವನ್ನು ಹೆಚ್ಚಿಸಲು ಪೂರ್ಣ ಪ್ರಮಾಣದಲ್ಲಿ ಸಂಶೋಧನೆ, ವಿಸ್ತರಣೆ ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿಯ ಬೆಂಬಲ ನೀಡುವ ಸಂಸ್ಥೆಯೂ ಸಹ ಆಗಿರುತ್ತದೆ. ದ್ವಿತಳಿ ರೇಷ್ಮೆ ಕೃಷಿಯಲ್ಲಿ ಒಂದು ಉತ್ಕೃಷ್ಟ ಅಂತರ ರಾಷ್ಟ್ರೀಯ ಸಂಸ್ಥೆಯಾಗುವ ಗುರಿಯನ್ನು ಹೊಂದಿದ್ದು ಸಿ.ಎಸ್.ಆರ್.ಟಿ.ಐ., ಮೈಸೂರು ಮಣ್ಣಿನಿಂದ ಹಿಡಿದು ರೇಷ್ಮೆ ಉತ್ಪಾದನೆಯವರೆಗೆ ವೈಜ್ಞಾನಿಕ ಮತ್ತು ತಾಂತ್ರಿಕ ನಾವಿನ್ಯತೆಗಳು, ವಿಸ್ತರಣಾ ನಿರ್ವಹಣೆಯ ತಂತ್ರಗಳು ಮತ್ತು ಕೌಶಲ್ಯ ಅಭಿವೃದ್ಧಿಯ ಮೂಲಕ ಅಪಾರ ಕೊಡುಗೆ ನೀಡಿದೆ.

ಉನ್ನತ ಸಂಶೋಧನೆಗಳನ್ನು ನಡೆಸಲು ಸುಸಜ್ಜಿತ ಪ್ರಯೋಗಾಲಯಗಳು, ಗುಣಮಟ್ಟದ ಹಿಪ್ಪುನೇರಳೆ ತೋಟಗಳು, ಆಧುನಿಕ ಗ್ರಂಥಾಲಯ, ಕಂಪ್ಯೂಟರ್ ಜಾಲ ಮತ್ತು ಬಯೋ ಇನ್ಫಾರ್ಮೇಟಿಕ್ಸ್ ಕೇಂದ್ರ, ಸಾಕಷ್ಟು ಮೂಲಸೌಕರ್ಯಗಳು ಇತ್ಯಾದಿಗಳಿಂದ ಈ ಸಂಸ್ಥೆಯು ಸುಸಜ್ಜಿತವಾಗಿದೆ. ಅಭಿವೃದ್ಧಿಪಡಿಸಿದ ತಾಂತ್ರಿಕತೆಗಳನ್ನು ಪ್ರಾದೇಶಿಕ ರೇಷ್ಮೆ ಸಂಶೋಧನಾ ಕೇಂದ್ರ ಹಾಗೂ ಸಂಶೋಧನಾ ವಿಸ್ತರಣಾ ಕೇಂದ್ರ–ಉಪ ಕೇಂದ್ರಗಳಲ್ಲಿ ಮೌಲ್ಯೀಕರಿಸುವ ವ್ಯವಸ್ಥೆಯನ್ನು ಮಾಡಲಾಗಿದೆ. ರೇಷ್ಮೆ ಕೃಷಿ ಇಂಜಿನಿಯರಿಂಗ್ ವಿಭಾಗವು ಹಿಪ್ಪುನೇರಳೆ ಬೇಸಾಯ ಮತ್ತು ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಉಪಯುಕ್ತವಾದ ಯಂತ್ರಗಳ ಮೂಲ ಮಾದರಿಗಳನ್ನು ವಿನ್ಯಾಸ ಮಾಡಿ ತಯಾರು ಮಾಡುತ್ತಿದೆ. ಸಂಸ್ಥೆಯ ತರಬೇತಿ ವಿಭಾಗವು ರೇಷ್ಮೆ ಕೃಷಿಯಲ್ಲಿ ಅವಲಂಬಿತರಾದವರಿಗೆ ಹಾಗೂ ಆಸಕ್ತಿ ಹೊಂದಿರುವವರಿಗಷ್ಟೇ ಅಲ್ಲದೆ ಹೊರದೇಶದ ರೇಷ್ಮೆ ಉದ್ದಿಮೆದಾರರಿಗೂ ಸಹ ಈ ಕ್ಷೇತ್ರದಲ್ಲಿ ಅವಶ್ಯಕವಾಗಿರುವ ಸಾಮರ್ಥ್ಯ ಮತ್ತು ಕೌಶಲ್ಯ ಅಭಿವೃದ್ಧಿಯ ಬಗ್ಗೆ ಉತ್ತಮವಾದ ತರಬೇತಿ ನೀಡುತ್ತಿದೆ. ಐಎಸ್‌ಓ 9001:2015 ಮಾನ್ಯತೆ ಹೊಂದಿರುವ ಈ ಸಂಸ್ಥೆಯ ಸಿಬ್ಬಂದಿ ವರ್ಗವೂ ಕೂಡ ಭಾರತೀಯ ರೇಷ್ಮೆ ಕೃಷಿಯು ಒಂದು ಜಾಗತಿಕ ಸ್ಪರ್ಧಾತ್ಮಕ ಉದ್ಯಮವಾಗಿ ಉತ್ಕೃಷ್ಟತೆ ಸಾಧಿಸಲು ಅವಶ್ಯವಾದ ಬೆಂಬಲವನ್ನೊದಗಿಸುವಲ್ಲಿ ನಿಪುಣರಾಗಿರುತ್ತಾರೆ.

ಡಾ. ವಿ. ಶಿವಪ್ರಸಾದ್
ನಿರ್ದೇಶಕರು

Central Sericultural Research & Training Institute

ISO 9001 : 2015 Certified
Central Silk Board, Ministry of Textiles, Govt. of India,
Manandavadi Road, Srirampura, Mysuru - 570 008
Email: csrtimys.csb@nic.in www.csrtimys.res.in

September 2017